General discussion on the Budget for 1984-85

† ಶ್ರೀ ಎಚ್. ನಾಗನಗೌಡ (ಕುರುಗೋಡು).—ಮಾನ್ಯ ಉಪಾಧ್ಯಕ್ಷರೇ, 1984-85ನೇ ಇಸ್ವಿಯ ಆಯವ್ಯಯವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಈ ಬಜೆಟ್‌ನ ಬಗ್ಗೆ ಈಗಾಗಲೇ ನಮ್ಮ ಪಕ್ಷದ ಮುಖಂಡರು ಮತ್ತು ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. 1982ನೇ ಇಸ್ವಿಯಲ್ಲಿ ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಹೇಳಿರತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಇನ್ನೊಂದು ಸಾರಿ ಪುನರ್ ಉಚ್ಚರಿಸಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. 25 ಕೋಟಿ ರೂ. ಗಳು ಡೆಫಿಸಿಟ್ ಇದ್ದಾಗ ಈ ಮಾತನ್ನು ಅವತ್ತಿನ ದಿವಸ ಹೇಳಿದ್ದರು. ಅದನ್ನು ಪುನರ್ ಉಚ್ಚರಿಸುತ್ತಿದ್ದೇನೆ.

"I am not here as a humble Member of Opposition to pay homage to the treasury benches particularly to the Ministers. I can use and I am entitled to use the strongest language which is permissible. I am entitled to call this Government by that epithet that this is a miserable Government with a miserable performance. I am sorry to state that our people in Karnataka are still tolerating this wretched Government. God only should save the people of Karnataka.

ಈಗ 187 ಕೋಟಿ ರೂ. ಗಳು ಇದೆ ಇದಕ್ಕೆ ಅವರೇನು ಹೇಳುತ್ತಾರೆಂದು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಬೇಕಾದರೆ ಈಗಲೇ ಹೇಳುತ್ತೇನೆ.

ಶ್ರೀ ಎಚ್. ನಾಗನಗೌಡ.—ಮುಂದೆ,

"We cannot run a household affair continuously on deficit budget. I cannot do. I can borrow. I can manage for sometime."

ಈ ರೀತಿಯಾಗಿ ಹೇಳಿದ್ದಾರೆ. ಇಷ್ಟು ಡಿಫಿಸಿಟ್ ಇರತಕ್ಕಂಥ ಈ ಒಂದು ಬಜೆಟನ್ನು ಮಂಡಿಸಿದ್ದಾರೆ. ಇಷ್ಟು ಡಿಫಿಸಿಟ್ ಬಜೆಟ್ ಕೇಂದ್ರದಲ್ಲಿ ಮಾತ್ರ ಹಾಕಿರತಕ್ಕದ್ದನ್ನು ನಾವು ನೋಡಿದ್ದೇವೆ. ಆದರೆ ನಮ್ಮ ಮುಖ್ಯ ಮಂತ್ರಿಯವರು ಮುಖ್ಯಮಂತ್ರಿಗಳಾದ ನಂತರ ಸದರ್ನ್ ಚೀಫ್ ಮಿನಿಸ್ಟರ್ಸ್ ಕಾನ್ಫರೆನ್ಸ್ ಮಾಡಿದ ಮೇಲೆ ಇಷ್ಟು 87 ಕೋಟಿ ರೂ. ಗಳ ಡಿಫಿಸಿಟ್ ಬಜೆಟನ್ನು ಮಂಡಿಸುವುದಕ್ಕೆ ದಕ್ಷಿಣ ಪ್ರಾಂತ್ಯಗಳವರು ಏನಾದರೂ ಅಧಿಕಾರವನ್ನು ಇವರಿಗೆ ಕೊಟ್ಟಿದ್ದಾರೆಯೆ ? ಎಂದು ಅನುಮಾನ ಬರುತ್ತಿದೆ. ಇವರು ಕೆಲವು ವಸ್ತುಗಳ ಮೇಲೆ ಹಾಕಿರತಕ್ಕ ತೆರಿಗೆಗಳಿಗೆ ವಿರೋಧವನ್ನು ವ್ಯಕ್ತಪಡಿಸಲಿಚ್ಛಿಸುತ್ತೇನೆ. ಈಗ ಇವರು ಹಳ್ಳಿಗಳಲ್ಲಿ ಗರ್ಭಿಣಿ ಸ್ತ್ರೀಯರಿಗೆ 3 ತಿಂಗಳವರೆಗೆ 50 ರೂ. ಗಳನ್ನು ಕೊಡಬೇಕೆಂದು ಮಾಡಿದ್ದಾರೆ ಅದನ್ನು ಸ್ವಾಗತಿಸುತ್ತೇನೆ. ಆದರೆ ಅದೇ ಸರ್ಕಾರಿ ನೌಕರಿಯಲ್ಲಿರತಕ್ಕವರಿಗೆ ಮತ್ತು ಬ್ಯಾಂಕ್‌ನಲ್ಲಿರತಕ್ಕವರಿಗೆ 6 ತಿಂಗಳವರೆಗೆ ಕೊಡುತ್ತಾರೆ ಅದೇ ರೀತಿಯಾಗಿ ಹಳ್ಳಿಗಳಲ್ಲಿ ಇರತಕ್ಕ ಸ್ತ್ರೀಯರಿಗೂ ಸಹ ಕೊಡಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಇವರಿಗೆ ನ್ಯೂಟ್ರಿಷನ್ ಫುಡ್ ಗೆಂದು 50 ರೂ. ಗಳು ಕೊಡುವುದು ಸಾಕಾಗುವುದಿಲ್ಲ ಅದನ್ನು 100 ರೂ. ಗಳಿಗೆ ಏರಿಸಬೇಕೆಂದು ನನ್ನ ಒಂದು ಮನವಿ. ಅದೇ ರೀತಿ ಬೆಲ್ಲಕ್ಕೆ ಕರ ಹಾಕಿದ್ದೀರಿ. ಸ್ವಾಮಿ, ಹಳ್ಳಿಗಳಲ್ಲಿ ಉಪಯೋಗಿಸತಕ್ಕದ್ದು ಸಕ್ಕರೆ ಅಲ್ಲ, ಕೇವಲ ಬೆಲ್ಲ ಮಾತ್ರ ಅಂಥಾದ್ದರಲ್ಲಿ ಬೆಲ್ಲಕ್ಕೆ 2 ರಿಂದ 4 ರಷ್ಟು ತೆರಿಗೆ ಹಾಕಿದ್ದೀರಿ. ಅದನ್ನು ದಯಮಾಡಿ ಕಡಿಮೆ ಮಾಡಬೇಕು ಎಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಹೋದಸಲ ಆಯವ್ಯಯ ಪತ್ರದಲ್ಲಿ 20 ಅಂಶಗಳ ಕಾರ್ಯಕ್ರಮದ ಬಗ್ಗೆ ಒಂದು ಶಬ್ದವನ್ನು ಎತ್ತಿದಿರಿ. ದುರ್ದೈವದ ಸಂಗತಿ ಎಂದರೆ ಈ ಸಾರಿ ಅದರ ಬಗ್ಗೆ ಚಕಾರ ಶಬ್ದ ಕೂಡ ಎತ್ತಿಲ್ಲ. ತಾಲ್ಲೂಕು ಕಮಿಟಿಗಳನ್ನು ಮಾಡಿಲ್ಲ ಅದನ್ನು ಕೈಬಿಡತಕ್ಕ ಆಲೋಚನೆಯಲ್ಲಿದ್ದೀರಿ ಎನ್ನುವ ಭಾವನೆ ಬಂದಿದೆ. ಅಂತ್ಯೋದಯ ಸ್ಕೀಮಿನ ಬಗ್ಗೆ ಮಾನ್ಯ ಮಲ್ಲಪ್ಪನವರು ಬಹಳ ಸ್ವಾರಸ್ಯವಾಗಿ ಹೇಳಿದರು ಒಂದು ಮಾತನ್ನು ಮರೆತು ಬಿಟ್ಟಿದ್ದಾರೆ. ಜನತಾ ಶಾಸಕರ ಕ್ಷೇತ್ರದಲ್ಲಿ ಜಾರಿಗೆ ತಂದಿಲ್ಲ ಅಂದರೆ ಇನ್ನು ನಮ್ಮ ಕ್ಷೇತ್ರದಲ್ಲಿ ಮಾಡುತ್ತೀರಾ. ಜನತಾ ಶಾಸಕರು ಇರತಕ್ಕ ಜಾಗದಲ್ಲೂ ಕೊಡಿ, ನಮ್ಮ ಶಾಸಕರು ಇರತಕ್ಕ ಜಾಗ

ದಲ್ಲೂ ಕೊಡಿ, ಆಗ ನಮ್ಮ ಅಭಿಪ್ರಾಯ ಕೊಡಲಿಕ್ಕೆ ಅಸ್ಪದ ಇರುತ್ತದೆ. ನೀವು ರಾಜ್ಯ ಭಾರ ಮಾಡತಕ್ಕ ಸ್ಥಾನದಲ್ಲಿದ್ದೀರಿ. ಕೇವಲ ಪಕ್ಷಕ್ಕಾಗಿ ಅಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಅದೇ ರೀತಿ ಕಾಯರ್ ಇಂಡಸ್ಟ್ರೀಸ್ ಬಗ್ಗೆ ಮತ್ತು ಚರ್ಮದ ಬಗ್ಗೆ ಏನು ಹೇಳಿದ್ದೀರಿ ಅದು ವಿಷಾದದ ಸಂಗತಿ. ಹತ್ತಿ ಬೆಳೆಯತಕ್ಕ ರೈತರ ಬಗ್ಗೆ ಕೂಡ ಚಕಾರ ಶಬ್ದ ಎತ್ತಿಲ್ಲ ಕಾಟನ್ ಮಾರ್ಕೆಟಿಂಗ್ ಫೆಡರೇಷನ್ ಮಾಡುತ್ತೇವೆಂದು ರಾಯಚೂರಿನಲ್ಲಿ ನಡೆದ ರೈತರ ಸಮ್ಮೇಳನದಲ್ಲಿ ಮಾನ್ಯ ಬಿ ಎಲ್. ಗೌಡರು ಹೇಳಿದ್ದಾರೆ. ಅಲ್ಲಿ ಕಾಟನ್ ಮಾರ್ಕೆಟಿಂಗ್ ಫೆಡರೇಷನ್ ಮಾಡುತ್ತೇವೆಂದು ಹೇಳಿದ್ದೀರಿ ಆದರೆ ಇಲ್ಲಿ ಇದರ ಬಗ್ಗೆ ಯಾವ ಮಾತೂ ಇಲ್ಲ ಬಳ್ಳಾರಿ 100 ಕೋಟಿ ಹತ್ತಿ ಬೆಳೆಯುತಕ್ಕ ತಾಲ್ಲೂಕಾಗಿದೆ. ಇದರ ಬಗ್ಗೆ ಚಕಾರ ಶಬ್ದ ಎತ್ತಿಲ್ಲ. ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ. ದಯ ಮಾಡಿ ಕಾಟನ್ ಮಾರ್ಕೆಟಿಂಗ್ ಫೆಡರೇಷನ್ ಸ್ಥಾಪನೆಮಾಡಿ, ರೈತರಿಗೆ ಕೊಟ್ಟಂಥ ಆಶ್ವಾಸನೆ ನೆರವೇರಿಸಿದಂತಾಗುತ್ತದೆ. ಅದೇ ರೀತಿ ಬಡ್ಜೆಟ್ ಭಾಷಣದ 42ನೇ ಪ್ಯಾರಾದಲ್ಲಿ

"ಹಿಂದುಳಿದ ವರ್ಗಗಳು ಹಾಗೂ ಇತರ ದಲಿತ ಜನತೆಯ ಹಿತಸಾಧನೆಗಾಗಿ ವಿಶೇಷವಾಗಿ ಶ್ರಮಿಸಿದ ದಿವಂಗತ ಶ್ರೀ ಡಿ ದೇವರಾಜ ಅರಸು ಅವರಿಗೆ ನಮ್ಮ ಗೌರವ ಸೂಚಿಸಲು ವಿಶ್ವವಿದ್ಯಾನಿಲಯದಲ್ಲಿ ಅವರ ಹೆಸರಿನಲ್ಲಿ ಅಭಿವೃದ್ಧಿ ವಿಷಯಗಳ ಅಧ್ಯಯನ ಪೀಠವೊಂದನ್ನು ಪ್ರಾರಂಭಿಸಲು ಇಚ್ಛಿಸುತ್ತೇನೆ"

ಎಂದು ಹೇಳಿದ್ದೀರಿ. ಕೊನೆಯದಾಗಿ, ನೀವು ಶ್ರೀಮಾನ್ ದೇವರಾಜ ಅರಸರ ಬಗ್ಗೆ ಅನುಕಂಪ ತೋರಿಸಿದ್ದಕ್ಕಾಗಿ ನನ್ನ ಅನಂತ ಅಭಿನಂದನೆಗಳು. ಶ್ರೀಮಾನ್ ದೇವರಾಜ ಅರಸರು ಅಧಿಕಾರದಲ್ಲಿದ್ದಾಗ ಏನಾಯಿತು ಎನ್ನುವುದನ್ನು ಹೇಳುತ್ತೇನೆ. ಕಲ್ಲು ಹಾವನ್ನು ಕಂಡರೆ ಹಾಲೆರೆಯುವರು, ನಿಜ ಹಾವನ್ನು ಕಂಡರೆ ಬಡಿಯುವರು ಎಂದು ಹೇಳಿದ ಹಾಗೆ ಅವರು ಅಧಿಕಾರದಲ್ಲಿದ್ದಾಗ ಗ್ರೋವರ್ ಕಮಿಷನ್ ಮಾಡಿದರು ಇದೇ ಜನತಾ ಸರ್ಕಾರದವರು ಆಮೇಲೆ ಹಿಂದುಳಿದ ವರ್ಗಗಳಿಗೆ ಏನು ಪ್ರಾತಿನಿಧ್ಯ ಕೊಟ್ಟಿದ್ದೀರಿ, ನಾಗಸಮುದ್ರಕ್ಕೆ ಏನು ಕೊಟ್ಟಿದ್ದೀರಿ, ಕುರುಬ ಸಮಾಜಕ್ಕೆ ಏನು ಕೊಟ್ಟಿದ್ದೀರಿ. ನಿಮಗೆ ಹಿಂದುಳಿದ ವರ್ಗದ ಮೇಲೆ ಕಳಕಳಿ ಇದ್ದರೆ ಅವರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿ ಎಂದು ಈ ಸದನದ ಮೂಲಕ ಹೇಳಲಿಚ್ಛಿಸುತ್ತೇನೆ. ಅದೇ ರೀತಿ ಮೊನ್ನೆ ಈ ಸರ್ಕಾರದವರು ಬಡ್ಜೆಟ್ ಮಂಡಿಸಿದ ಮೇಲೆ ಹಿಂದಿನ ಆರ್ಥಿಕ ಮಂತ್ರಿಗಳಾದ ಶ್ರೀಮಾನ್. ಎಂ. ವೈ. ಘೋರ್ಪಡೆಯವರು ಹೊಗಳಿದ್ದಾರೆ. ಕೆಲವರು ಸಾಮಾನ್ಯವಾಗಿ ತಮಗೆ ಅನುಕೂಲವಾಗತಕ್ಕ ಸಂದರ್ಭ ಬಂದಾಗ ಸುತ್ತುತ್ತಾ ಇರುತ್ತಾರೆ. ಎರಡು ಕೋಟಿ ಎಲೆಕ್ಟ್ರಿಸಿಟಿ ಚಾರ್ಜಸ್ ಇದ್ದರೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಯಾರಾದರೂ ಸಣ್ಣ ರೈತರು 50 ರೂಪಾಯಿ ಬಾಕಿ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಎರಡು ಕೋಟಿ ಬಾಕಿ ಇದ್ದರೂ ಸುಮ್ಮನಿರುವುದರಿಂದ ಅನುಮಾನ ಬರುತ್ತಿದೆ. ಇದರ ಬಗ್ಗೆ ಏನಾಗಿದೆಯೆಂದು ಕೇಳಲಿಚ್ಛಿಸುತ್ತೇನೆ. ಇನ್ನು ಹೊಲಿಗೆ ದಾರದ ಮೇಲೆ ತೆರಿಗೆ ಹೆಚ್ಚು ಮಾಡಿದ್ದೀರಿ. ಹಳ್ಳಿಗಳಲ್ಲಿ ಹೊಲಿಗೆ ದಾರದ ಅವಶ್ಯಕತೆ ಇದೆ, ಅಲ್ಲಿ ಉಪಯೋಗಿಸುತ್ತಾರೆ. ಆದ್ದರಿಂದ ಹೊಲಿಗೆ ದಾರದ ಮೇಲೆ ಹಾಕಿರತಕ್ಕ ತೆರಿಗೆಯನ್ನು ಕಡಿಮೆ ಮಾಡಿ. ಅದೇ ರೀತಿ ಹಳ್ಳಿಗಳಲ್ಲಿ ಹೆಚ್ಚಾಗಿ ಬೆಲ್ಲವನ್ನು ಉಪಯೋಗಿಸುತ್ತಾರೆ. ಸಕ್ಕರೆಯನ್ನು ಉಪಯೋಗಿಸುವುದಿಲ್ಲ, ಒಂದೆರಡು ಕೇಜಿ ಸಕ್ಕರೆ ಬರುತ್ತದೆ, ಅದು ಹೋಟೆಲಿಗೆ ಹೋಗುತ್ತದೆ. ಆದ್ದರಿಂದ ಬೆಲ್ಲದ ಮೇಲೆ ಏನು ತೆರಿಗೆ ಹಾಕಿದ್ದೀರಿ ಅದನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಅದೇ ರೀತಿ ಗಡಿಯಾರ, ಸಾಬೂನು ಮತ್ತು ಪಾದರಕ್ಷೆಗಳ ಮೇಲೆ ತೆರಿಗೆ ಹಾಕಿದ್ದೀರಿ. ಇವು ಕಡುಬಡವನು ಉಪಯೋಗಿಸತಕ್ಕ ವಸ್ತುಗಳು. ಇವನ್ನು ಆದಾಯ ಇರುವವರೂ ತೆಗೆದುಕೊಳ್ಳುತ್ತಾರೆ, ಇಲ್ಲದಂತಹವರೂ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇವುಗಳ ಮೇಲೆ ಹಾಕಿರತಕ್ಕ ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಆಮೇಲೆ ಬಡ್ಜೆಟ್ ಭಾಷಣದ ಪೇಜ್-31ರಲ್ಲಿ ಈ ರೀತಿ ಹೇಳಿದ್ದೀರಿ.

"ಅವಧಿ ಮೀರಿ ಕಬ್ಬನ್ನು ಅರೆಯುತ್ತಿದ್ದ ಅವಧಿ ಅಂದರೆ 15-4-1983 ರಿಂದ 30-6-1983ರ ವರೆಗಿನ ಅವಧಿಯಲ್ಲಿ ನಿರ್ವಾತ ಭಾಂಡ ವಿಧಾನವನ್ನು (ವಾಕ್ಯೂಂ ಪಾನ್-ಪ್ರೊಸೆಸ್) ಅನುಸರಿಸಿದ್ದ ಸಕ್ಕರೆ ಕಾರ್ಖಾನೆಗಳು ಖರೀದಿ ಮಾಡಿದ ಕಬ್ಬಿನ ಮೇಲೆ ಸಂದಾಯ ಮಾಡಬೇಕಾಗಿದ್ದ ತೆರಿಗೆಯನ್ನು ಪ್ರತಿ ಟನ್ನಿಗೆ 17.60 ರೂಪಾಯಿಯಿಂದ 5.60 ರೂಪಾಯಿಗೆ ಇಳಿಸುವುದು,

ಎಂದು ಹೇಳಿದ್ದೀರಿ ಇದನ್ನು ಕೇವಲ 2 ತಿಂಗಳಿಗೆ ಮೀಸಲು ಇಟ್ಟಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಶುಗರ್ ಫ್ಯಾಕ್ಟರಿ ಇದೆ. ಇದನ್ನು 12 ತಿಂಗಳಿಗೆ ವಿಸ್ತರಿಸಿದರೆ ಒಳ್ಳೆಯದು. ಕೊನೆಯದಾಗಿ, ಜನರಲ್ಲಿ

ಏನು ಅಭಿಪ್ರಾಯ ಬಂದಿದೆಯೆಂದರೆ, ಇದು ಜನತಾ ಸರ್ಕಾರ ಅಲ್ಲ, ಜನವನ್ನು ತಾ ಎನ್ನತಕ್ಕ ಅಭಿಪ್ರಾಯ ಬಂದಿದೆ. ಇವತ್ತು ತಾವು ಎಚ್ಚೆತ್ತು ಕಾರ್ಯನಿರ್ವಹಣೆ ಮಾಡಿದರೆ ಬಹಳ ಸಂತೋಷ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).--ಸನ್ಮಾನ್ಯ ಸಭಾಧ್ಯಕ್ಷರೆ, 1984-85ನೇ ಸಾಲಿನ ಆಯವ್ಯಯ ಪತ್ರವನ್ನು ಮತ್ತು ಅದರಲ್ಲಿರತಕ್ಕ ವಿಷಯವನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಹಲವಾರು ಮಾತುಗಳನ್ನು ಹೇಳಲು ತಮ್ಮ ಅಪ್ಪಣೆ ಕೇಳುತ್ತಾ ಇದ್ದೇನೆ. ಸ್ವಾಮಿ, ಕಳೆದ ವರ್ಷ ಜನತಾ ಸರ್ಕಾರ ಒಂದು ಆಯವ್ಯಯ ಪತ್ರವನ್ನು ಮಂಡಿಸಿತ್ತು. ಈಗ ಈ ಎರಡನೇ ಆಯವ್ಯಯ ಪತ್ರವನ್ನು ಮಂಡಿಸಿದೆ ಕಳೆದ ವರ್ಷ ಆಯವ್ಯಯ ಪತ್ರ ಏನು ಮಂಡಿಸಿದೆ ಅದು ಪೂರ್ಣವಾಗಿ ನಮ್ಮದೇ ಆದ ಜನತಾ ಸರ್ಕಾರದ ಆಯವ್ಯಯ ಪತ್ರ ಎಂದು ಹೇಳತಕ್ಕಂಥ ಅವಕಾಶ ಇರಲಿಲ್ಲ ಈ ವರ್ಷ ನಾವು ಮಾಡಿರತಕ್ಕಂಥಾದ್ದು.

ಶ್ರೀ ಗೋವಿಂದ ಪಿ. ಒಡೆಯರಾಜ್ --ನಿಮ್ಮದು ಆಯವ್ಯಯ ಪತ್ರ ಅಲ್ಲವೇ. ಹಾಗಾದರೆ ನಮಗೆ ಸಂಶಯವಾಗುತ್ತದೆ.

ಶ್ರೀ ಪಿ. ರಾಮದೇವ್ --ಹಿಂದೆ ನಿಮ್ಮ ಕೆಲಸಕಾರ್ಯಗಳು ಏನಿತ್ತು, ಹಿಂದೆ ನೀವು ಮಾಡಿದರಲ್ಲ ಅದನ್ನು ಹೇಳಿದೆ. ಆದರೆ ಈಗ ನಮ್ಮದೇ ಅದಂಥ ಕೆಲಸ ಕಾರ್ಯಗಳ ಬಗ್ಗೆ ಹೇಳಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್ --ನಿಮ್ಮ ಸರ್ಕಾರ ಬಂದಮೇಲೆ ಏನು ಆಯವ್ಯಯ ಮಾಡಬೇಕಾಗಿತ್ತು ಅದು ಐಡಿಯ ಎಂದು ಹೇಳಿ. ತಮ್ಮ ಸರ್ಕಾರ ಆಯವ್ಯಯ ಮಾಡಿದೆಯೆಂದು ಹೇಳಿ.

ಶ್ರೀ ಪಿ. ರಾಮದೇವ್.--ಆ ಕೂಸು ಹೆಚ್ಚು ಕಡಿಮೆ ನಿಮ್ಮದೇ. ಇದು ನಮ್ಮ ಕೂಸು.

ಉಪಾಧ್ಯಕ್ಷರು.--ಒಂದು ಗಂಟೆಗೆ ಕನ್‌ಕ್ಲೂಡ್ ಆಗಬೇಕು. ಅದಕ್ಕೋಸ್ಕರ ಸಮಯವನ್ನು ಅರ್ಥಮಾಡಿಕೊಂಡು ಮಾತನಾಡಿ.

ಶ್ರೀ ಪಿ ರಾಮದೇವ್--ನನಗೆ ಕೊನೆಯಲ್ಲಿ ಕೊಟ್ಟರೆ ಒಳ್ಳೆಯದು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಂಡೆ.

11-30 a.m.

ಶ್ರೀ ಪಿ. ರಾಮದೇವ್.--ನನಗೆ ಕೊನೆಯಲ್ಲಿ ಕೊಟ್ಟರೆ ಒಳ್ಳೆಯದು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಂಡೆ ನಾನು ಹೆಚ್ಚಿನ ವಿಚಾರವನ್ನು ಹೇಳುವುದಿಲ್ಲ. ಈ ಸರ್ಕಾರ ಒಂದು ವರ್ಷದಲ್ಲಿ ಮಾಡಿರತಕ್ಕ ಸಾಧನೆಗಳ ಬಗ್ಗೆ ಬಹಳ ಹೆಮ್ಮೆಪಡಬೇಕಾಗುತ್ತದೆಂದು ನಾನು ಅಂದು ಕೊಂಡಿದ್ದೇನೆ. ಮಾನ್ಯ ಒಡೆಯರಾಜ್‌ರವರು ಏತಕ್ಕೆ ಮೆಚ್ಚಿಗೆಯನ್ನು ವ್ಯಕ್ತಪಡಿಸಲಿಲ್ಲವೆಂದು ಗೊತ್ತಾಗಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಬಹಳ ದೊಡ್ಡ ಸವಾಲು ಇತ್ತು. 70-80 ಕೋಟಿ ರೂಪಾಯಿ ಖರ್ಚಾಗಿರತಕ್ಕದ್ದನ್ನು ತುಂಬಿಕೊಡಬೇಕಾದ ಬೃಹತ್ ಪರಿಸ್ಥಿತಿಯನ್ನು ಎದುರಿಸಿಕೊಂಡು ಮತ್ತು ರಾಜಕೀಯ ಬದಲಾವಣೆಯಾದದ್ದರಿಂದ ಅನೇಕ ವಿಚಾರಗಳನ್ನು ಎದುರಿಸತಕ್ಕ ಪರಿಸ್ಥಿತಿ ಬಂತು ಒಂದು ವರ್ಷದಲ್ಲಿ ಈ ಸರ್ಕಾರ ಎಲ್ಲಾ ವರ್ಗಗಳ ಸಹಾಯ ಪಡೆದು ಉತ್ತಮವಾದ ಕೆಲಸ ಮಾಡಿದೆಯೆಂದು ನೀವು ಹೇಳಬೇಕಾಗಿದೆ. ನನಗೆ ಇದರಲ್ಲಿ ಒಂದು ಆಶ್ಚರ್ಯವಾಗುತ್ತಿದೆ ಅದೇನೆಂದರೆ ಮಾನ್ಯ ಒಡೆಯರಾಜ್ ಮತ್ತು ಇತರರು ಕಾಂಗ್ರೆಸ್(ಐ)ನಲ್ಲಿರತಕ್ಕ ಸದಸ್ಯರು ಜನತಾ ಪಕ್ಷವನ್ನು ಕಟ್ಟಿರತಕ್ಕವರು.

ಶ್ರೀ ಗೋವಿಂದ ಪಿ. ಒಡೆಯರಾಜ್ : ಜನತಾ ಪಕ್ಷವನ್ನು ಕಾಂಗ್ರೆಸ್(ಐ) ಗೆದ್ದಿದೆ ಎನ್ನುವುದನ್ನು ತಾವು ಮರೆಯಬಾರದು.

ಶ್ರೀ ಪಿ. ರಾಂದೇವ್ : ಕಾಂಗ್ರೆಸ್(ಐ) ಬಿಟ್ಟು ಬಂದು ಜನತಾ ಪಕ್ಷವನ್ನು ಕಟ್ಟಿದ್ದೇವೆ.

ಶ್ರೀ ಹನುಮಂತರಾವ್ ದೇಸಾಯಿ : ಮಾನ್ಯ ಸದಸ್ಯರಾದ ಒಡೆಯರಾಜ್‌ರವರು ಜನತಾ ಪಕ್ಷವನ್ನು ಬಿಟ್ಟು ಹೋಗಿದ್ದಾರೆ.

ಶ್ರೀ ಪಿ. ರಾಂದೇವ್ : ಯಾರು ತುರ್ತುಪರಿಸ್ಥಿತಿಯ ಕಾಲದಲ್ಲಿ ಕಾಂಗ್ರೆಸ್(ಐ) ಸರ್ಕಾರದ ವಿರುದ್ಧವಾಗಿ ನಿಂತು ಮಾಡತಕ್ಕ ಅನಾಚಾರಗಳನ್ನು ವಿರೋಧಿಸಿ ಜನತಾ ಪಕ್ಷವನ್ನು ಕಟ್ಟಿದ್ದರೋ, ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದು ಹೇಳಿದ್ದರೋ ಮತ್ತು ಎರಡನೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಂತಹವರು ಕೆಲವು ಕಾರಣಾಂತರಗಳಿಂದ ಅಲ್ಲಿ ಹೋಗಿದ್ದಾರೆ. ಅವರಿಗೆ ಪುನಃ ಇಲ್ಲಿಗೆ ಬರಲಿಕ್ಕೆ ಆಸೆ ಇದೆ. ಅವರಾದರೂ ಈ ಬಡ್ಜೆಟ್‌ನ್ನು ಸ್ವಾಗತ ಮಾಡುತ್ತಾರೆಂದು ನಾನು ಅಂದು ಕೊಂಡಿದ್ದೆ. ಇಂತಹ ಉತ್ತಮ-

ವಾದ ಸರ್ಕಾರ 35 ವರ್ಷಗಳಲ್ಲಿ ಬಂದಿರಲಿಲ್ಲವೆಂದು ಹೇಳಿ ಸ್ವಾಗತ ಮಾಡುತ್ತಾರೆಂದು ನಾನು ತಿಳಿದು ಕೊಂಡಿದ್ದೆ. ನಿಮಗೆ ಈಗಲಾದರೂ ಒಳ್ಳೆಯ ಬುದ್ಧಿ ಬರಲಿ.

ಶ್ರೀ ಎಂ. ಮಹಾದೇವ್ ; ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಂದೇವ್‌ರವರು ಕ್ಯಾನ್‌ವಾಸ್ ಮಾಡು ತ್ತಿದ್ದಾರೆ.

ಶ್ರೀ ಪಿ. ರಾಂದೇವ್ ; ನಾನು ಕ್ಯಾನ್‌ವಾಸ್ ಮಾಡುತ್ತಿಲ್ಲ. ಈ ರಾಜ್ಯದಲ್ಲಿ ನಮ್ಮನ್ನು ಎದುರಿಸ್ತು ವಂತಹ ಇನ್ನೊಂದು ಶಕ್ತಿಯಿಲ್ಲ ಎನ್ನುವ ಒಂದು ಅಪಾರ ನಂಬಿಕೆ ಅವರಲ್ಲಿ ಇತ್ತು. ಅದನ್ನು ನಾವು ಹೊಡೆದೊಡಿಸಿ ಇಲ್ಲಿ ಕುಳಿತುಕೊಂಡಾಗ ನೀವು ಯಾವರೀತಿ ಹೇಳಬೇಕು ? ಪ್ರಜಾಪ್ರಭುತ್ವ ಯಶಸ್ವಿಯಾಗ ಬೇಕಾದರೆ ಪ್ರಭಲವಾದ ಪಕ್ಷಗಳು ಇರಬೇಕು. ಒಂದು ಹೊಸ ಪಕ್ಷ ತಯಾರಾಗಿದೆ, ತಾವು ಈ ರೀತಿ ಹೇಳುವುದು ಸರಿಯಲ್ಲ. ತಾವು ನಮ್ಮ ಜೊತೆಯಲ್ಲಿ ಇದ್ದಾಗ ಏನು ಹೇಳಿದ್ದೀರಿ ? ಈಗ ಉತ್ತಮವಾದ ಆಡಳಿತವನ್ನು ಕೊಡತಕ್ಕ ಕಾಲ ಪ್ರಾರಂಭವಾಗಿದೆ. ಉತ್ತಮವಾದ ಆಯವ್ಯಯ ಪತ್ರವನ್ನು ಮಂಡಿಸತಕ್ಕ ಕೆಲಸ ನಡೆದಿದೆ. ಇದನ್ನು ಎಲ್ಲರೂ ಸಹ ಒಪ್ಪಿಕೊಳ್ಳುತ್ತಾರೆ. ಈಗ ವ್ಯಕ್ತಿ ಸ್ವಾತಂತ್ರ್ಯ ಪತ್ರಿಕಾ ಸ್ವಾತಂತ್ರ್ಯ ಹಾಗೂ ಮಂತ್ರಿಗಳಿಗಿರತಕ್ಕ ಸ್ವಾತಂತ್ರ್ಯ ಹಿಂದೆ ಇಂದಿನಷ್ಟು ಇರಲಿಲ್ಲ. ಹಿಂದೆ ಮುಖ್ಯ ಮಂತ್ರಿಗಳನ್ನು ನೋಡಬೇಕಾದರೆ ಮಂತ್ರಿಗಳಿಗೂ ಆಗುತ್ತಿರಲಿಲ್ಲ. ಹಿಂದೆ ಶಾಸಕರು ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಆಗುತ್ತಲೇ ಇರಲಿಲ್ಲ ಅದು ಬೇರೆ.

SRI G P. VODEYARAJ : Everything has to go to Chief Minister. ಆದರೆ ನಿಮ್ಮಲ್ಲಿ ಗ್ರಾಮಲೆಕ್ಕಿಗರ ವರ್ಗಾವಣೆ ಕೂಡ ಮುಖ್ಯಮಂತ್ರಿಗಳ ಹತ್ತಿರ ಹೋಗಬೇಕಾಗಿದೆ.

ಶ್ರೀ ವಿ. ಎಲ್. ಪಾಟೀಲ್.—ತಮ್ಮಂತಹವರು ಬರುತ್ತೀರಲ್ಲಾ ಏನು ಮಾಡುವುದು ?

ಶ್ರೀ ಪಿ ರಾಂದೇವ್ ; ತಾವು ರಾಜಕೀಯಕ್ಕೆ ಹೊಸಬರೇನೂ ಅಲ್ಲ. ರಾಜಕೀಯ ನೈಪುಣ್ಯತೆಯನ್ನು ಪಡೆದಿರತಕ್ಕವರು ನಿಮ್ಮಲ್ಲಿ ಬಹಳ ಜನ ಇದ್ದಾರೆ.

ಉಪಾಧ್ಯಕ್ಷರು ; ತಾವು ಆಯವ್ಯಯಪತ್ರದ ಮೇಲೆ ಮಾತನಾಡಿ ಎಲ್ಲರಿಗೂ ಗೊತ್ತಾಗಲಿ.

ಶ್ರೀ ಪಿ. ರಾಂದೇವ್ ; ನೀವೆಲ್ಲರೂ ಸಂಪೂರ್ಣವಾದ ಸಹಕಾರ ಕೊಡಬೇಕು. ಬಹುಶ ; ಹಿಂದೆಂದೂ ಇಷ್ಟೊಂದು ರಿಯಾಯಿತಿ ಕೊಟ್ಟಿರತಕ್ಕ ಆಯವ್ಯಯಪತ್ರ ರಾಜ್ಯದಲ್ಲಿ ಬಂದಿರಲಿಲ್ಲ. ಈ ಆಯವ್ಯಯ ಪತ್ರದಲ್ಲಿ ಗ್ರಾಮಾಂತರಪ್ರದೇಶಗಳ ಜನರಿಗೆ ರೈತರಿಗೆ ಸಾಕಷ್ಟು ರಿಯಾಯಿತಿ ದೊರೆತಿದೆ. ಆದ್ದರಿಂದ ಎಲ್ಲರೂ ಇದನ್ನು ಸ್ವಾಗತ ಮಾಡಬೇಕೆಂದು ಹೇಳುತ್ತಾ ನಾಲ್ಕಾರು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದಿ ದ್ದೇನೆ. ಒಂದು ವರ್ಷದಲ್ಲಿ ಹಣಕಾಸಿನ ವಿಷಯದಲ್ಲಿ ಹೇಳುವುದಾದರೆ ನಮಗೆ ಕೇಂದ್ರಸರ್ಕಾರದಿಂದ ಏನೊಂದು ಹಣ ಬರಬೇಕಾಗಿತ್ತು. ಅದು ಬರುತ್ತಾ ಇಲ್ಲ. ಏತಕ್ಕೆ ಈ ರೀತಿಯಾಗುತ್ತಿದೆ ಎನ್ನುವ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. 1984-85ರ ಆಯವ್ಯಯಪತ್ರದ ಪುಟ-2ರಲ್ಲಿ ಇದರ ಬಗ್ಗೆ ಪ್ರಸ್ತಾಪವಾಗಿದೆ. ಎಂಟನೆಯ ವಿತ್ತೀಯ ಆಯೋಗದ ಮಧ್ಯಾಂತರ ವರದಿ ನಮಗೇನೂ ಪರಿಹಾರ ನೀಡಿಲ್ಲ. ಅಂತಿಮ ವರದಿ ಇನ್ನೂ ಸಲ್ಲಿಸಲ್ಪಟ್ಟಿಲ್ಲ. ನಮಗೆ ದೊರೆಯಬಹುದಾದ ಹೆಚ್ಚುವರಿ ಸಂಪನ್ಮೂಲ ಕುರಿತು ಅಂದಾಜ ಮಾಡುವುದು ಸಾಧ್ಯವಾಗಿಲ್ಲ ನಮಗೆ ಪರಿಹಾರ ನೀಡಿಲ್ಲವೆಂದು ಹೇಳಿದ್ದಾರೆ ಇದು ಏತಕ್ಕೆ ಹೀಗಾಯಿತು ? ರಾಜ್ಯದ ಅನೇಕ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸೆಂಟ್ರಲ್ ಟ್ಯಾಂಕ್ಸ್‌ನಲ್ಲಿ ನಮಗೆ ಬರಬೇಕಾದ ಹೆಚ್ಚಿನ ಪಾಲನ್ನು ಕೇಳಿದಾಗ ವಿತ್ತೀಯ ಆಯೋಗ ನಮಗೆ ಕೊಟ್ಟಿಲ್ಲ. ಅಂತಿಮ ವರದಿ ಇನ್ನೂ ಸಲ್ಲಿಸಲ್ಪಟ್ಟಿಲ್ಲವೆಂದು ಹೇಳಿ ದ್ದಾರೆ ಅದು ಬೇರೆ ಪ್ರಶ್ನೆ. ಬೇರೆ ರಾಜ್ಯಗಳಿಗೆ ೮ನೇ ವಿತ್ತೀಯ ಆಯೋಗದಲ್ಲಿ ಹಣವನ್ನು ಕೊಟ್ಟಿದ್ದಾರೆ. ಹೇಗೆ ಕೊಟ್ಟಿದ್ದಾರೆಂದರೆ, ಎಲ್ಲೆಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರತಕ್ಕ ಪಕ್ಷದ ಸರ್ಕಾರಗಳಿವೆ ಅಲ್ಲೆಲ್ಲಾ ಕೊಟ್ಟಿ ದ್ದಾರೆ. ವಿತ್ತೀಯ ಆಯೋಗಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ನಮಗೆ ಕೇಂದ್ರದ ತೆರಿಗೆಯಲ್ಲಿ ನಮ್ಮ ಪಾಲು ನಮಗೆ ಬರಬೇಕೆಂದು ಮನವಿಯನ್ನು ಕೊಟ್ಟಿದ್ದಾರೆ. ಮಾನ್ಯಮುಖ್ಯಮಂತ್ರಿಗಳು ಅದರ ಬಗ್ಗೆ ಹೇಳಿಕೆ ಕೊಟ್ಟಿರು, ವಿತ್ತೀಯ ಆಯೋಗದವರನ್ನು ಒಪ್ಪಿಸಿದ್ದೇವೆ, ಅವರು ಒಪ್ಪಿದ್ದಾರೆ ಎನ್ನುವ ಮಾತತಿ ಬಂತು. ನನಗನಿಸುತ್ತದೆ ರಾಜಕೀಯ ಕಾರಣಗಳಿಂದ ನಮಗೆ ಕೊಡಬೇಕಾದ ಹಣವನ್ನು ಕೊಡುತ್ತಿಲ್ಲ. ಇಡೀ ರಾಷ್ಟ್ರದಲ್ಲಿಯೇ ಇದು ಒಂದೇ ಒಂದು ರಾಜ್ಯದಲ್ಲಿ ಜನತಾ ಸರ್ಕಾರ ಇವತ್ತು ಆಳ್ವಿಕೆಯನ್ನು ನಡೆ ಸುತ್ತಿದೆ. ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ವಿರೋಧಪಕ್ಷಗಳ ಸರ್ಕಾರಗಳು ಇವೆ, ಕೇಂದ್ರದವರಿಗೆ ಏನಾಗಿದೆ ಅಂದರೆ ಈ ಜನತಾ ಸರ್ಕಾರದಿಂದ ಅವರಿಗೆ ಭಯ ಬಂದು ಬಿಟ್ಟಿದೆ. ಭಾರತದಲ್ಲಿ ಹಿಂದೆ ಒಮ್ಮೆ ಸರ್ಕಾರ ವನ್ನು ರಚಿಸಿದಂತಹ ಪಕ್ಷಕ್ಕೆ ಪ್ರೋತ್ಸಾಹ ಕೊಟ್ಟರೆ ನಮಗೆ ಎಲ್ಲಿ ತೊಂದರೆಯಾಗುತ್ತದೆ ಎನ್ನುವ ದೃಷ್ಟಿ ಯಿಂದ ನಮಗೆ ತೆರಿಗೆ ಹಣವನ್ನು ಕೊಡುತ್ತಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್ ; ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಪಿ. ರಾಂದೇವ್ ; ನಾನು ವಿತ್ತೀಯ ಆಯೋಗದ ಮೇಲೆ ಮಾತನಾಡುತ್ತಿದ್ದೇನೆ ಇದರಲ್ಲಿ ರಾಜಕೀಯವಿದೆಯೆಂದು ಹೇಳುತ್ತಿದ್ದೇನೆ. ಅಲ್ಲಿ ರಾಜಕೀಯ ಮಾಡುವುದರಿಂದ ನಮಗೆ ಬರಬೇಕಾದ ಹಣ ವನ್ನು ನಮಗೆ ಕೊಡುತ್ತಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್ ; ನನ್ನ ಕ್ರಿಯಾಲೋಪ ಏನೆಂದರೆ ವಿತ್ತೀಯ ಆಯೋಗದಲ್ಲಿ ರಾಜಕೀಯ ಮಾಡುತ್ತಿದ್ದಾರೆಂದೂ, ಅಲ್ಲಿ ರಾಜಕೀಯ ದುರುದ್ದೇಶದಿಂದ ಕೆಲಸ ಮಾಡುತ್ತಿದ್ದಾರೆಂದೂ ಹೇಳತಕ್ಕದ್ದು ಸರಿಯಲ್ಲ ವಿತ್ತೀಯ ಆಯೋಗದಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್ ಇರುತ್ತಾರೆ, ಪ್ಲಾನಿಂಗ್ ಕಮಿಷನ್‌ನವರು ಇರುತ್ತಾರೆ ಯಾರೋ ಒಬ್ಬರು ರಾಜಕೀಯ ಜೀವನದಲ್ಲಿರತಕ್ಕವರು ವಿತ್ತೀಯ ಆಯೋಗದ ಅಧ್ಯಕ್ಷರಾಗಿರುತ್ತಾರೆ. ಸುಪ್ರೀಂ ಕೋರ್ಟಿನ ಜಡ್ಜ್ ಹಾಗೂ ಪ್ಲಾನಿಂಗ್ ಕಮಿಷನವರು ರಾಜಕೀಯ ಮಾಡುತ್ತಾರೆಂದು ಹೇಳುವುದು ಸರಿಯಲ್ಲ. ಬೇರೆ ವಿಷಯದಲ್ಲಿ ಹೇಳಿ ವಿತ್ತೀಯ ಆಯೋಗದ ಬಗ್ಗೆ ಮಾತನಾಡುವಾಗ ಈ ರೀತಿ ಹೇಳುವುದು ಸರಿಯಲ್ಲ.

ಡಾ|| ಎಚ್ ಎಲ್. ತಿಮ್ಮೇಗೌಡ.--ವಿತ್ತೀಯ ಆಯೋಗದಲ್ಲಿ ಸುಪ್ರೀಂ ಕೋರ್ಟಿನ ಜಡ್ಜ್‌ಗಳಿದ್ದಾರೆ, ಪ್ಲಾನಿಂಗ್ ಕಮಿಷನವರು ಇದ್ದಾರೆ ಹಾಗೂ ದೊಡ್ಡ ದೊಡ್ಡವರು ಇದ್ದಾರೆಂದು ಅವರು ಎಷ್ಟೇ ಅನ್ಯಾಯ ಮಾಡಿದರೂ ಮಾತನಾಡದೆ ಸುಮ್ಮನಿರಬೇಕೇನು? ನಾವು ಮಾತನಾಡದಿದ್ದರೆ ನಮ್ಮ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.--ವಿತ್ತೀಯ ಆಯೋಗದವರು ಕೆಲವು ಆಧಾರಗಳ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಡಾ|| ಎಚ್. ಎಲ್. ತಿಮ್ಮೇಗೌಡ.--ನಿಮ್ಮ ಪಕ್ಷ ಅಧಿಕಾರದಲ್ಲಿದ್ದರೆ 8ನೇ ವಿತ್ತೀಯ ಆಯೋಗ ಅನ್ಯಾಯ ಮಾಡಿದ್ದಾರೆ ನೀವು ಅಪೀಲ್ ಮಾಡುತ್ತಿರಲಿಲ್ಲವೇ ? ನೀವು ಹೇಳುವುದನ್ನು ನೋಡಿದರೆ ನೀವು ಕೇಳುತ್ತಿರಲಿಲ್ಲವೆಂದು ಕಾಣಿಸುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.--ನೀವು ಕೇಂದ್ರ ಸರ್ಕಾರದ ಜೊತೆ ಸಂಬಂಧವನ್ನು ಚೆನ್ನಾಗಿಟ್ಟುಕೊಳ್ಳಿ. ನಿಮ್ಮ ಬುದ್ಧಿವಂತಿಕೆ ತೋರಿಸುವುದಕ್ಕೆ ಹೋಗಬೇಡಿ, ಆಗ ನಿಮಗೆ ತಿಳುವಳಿಕೆ ಬರುತ್ತದೆ.

ಶ್ರೀ ಪಿ. ರಾಮದೇವ್.-- ಕೇಂದ್ರ ಸರ್ಕಾರದವರು ತೊಂದರೆ ಕೊಡುತ್ತಿದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ,--ಹಣಕಾಸಿನ ಆಯೋಗ, ಯೋಜನಾ ಆಯೋಗ, ಪಂಚವಾರ್ಷಿಕ ಯೋಜನೆಗಳು--ಇವುಗಳಿಗೆ ತಜ್ಞರ ನೆರವಿಲ್ಲದೆ ಈ ರಾಜ್ಯ ಇಷ್ಟು ದುಸ್ಥಿತಿಯಲ್ಲಿದೆ. ವಿದ್ಯುಚ್ಛಕ್ತಿ, ನೀರಾವರಿ, ಅನ್ನ ಸಮಸ್ಯೆ ಇವೆಲ್ಲವನ್ನು ಕೇಂದ್ರದವರು ಬದಿಗೊತ್ತಿದ್ದಾರೆ. ಒಡೆಯರಾಜ್ ಹೇಳುವ ಹಾಗೆ ಅವರ ಜೊತೆ ನಾವು ವ್ಯಾಜ್ಯ ಮಾಡುವುದಕ್ಕೆ ಹೋಗಿದ್ದರೆ ನಮಗೆ ಕೊಡುವಂಥ ನೆರವನ್ನು ಕೊಡುತ್ತಿದ್ದರು ಎಂದು ಕಾಣುತ್ತದೆ.

ಶ್ರೀ ಜಿ. ಪಿ. ಒಡೆಯರಾಜ್.--ಕೇಳತಕ್ಕ ರೀತಿಯಲ್ಲಿ ಕೇಳಿ.

ಡಾ ಹೆಚ್ ಎಲ್. ತಿಮ್ಮೇಗೌಡ.--ಹಳ್ಳಿ ಕಡೆ ಒಂದು ಬೈಗುಳ ಇದೆ. ಅತ್ತೆಯಾದವಳು ಸೊಸೆಗೆ ಬಯ್ಯುವಾಗ 'ನೀನು ಮುಂಡೆ ಆಗು' ಎಂದು ಬಯ್ಯುತ್ತಾಳೆ. ಆದರೆ, ಆಕೆಗೆ ಸೂಳೆಮುಂಡೆಯಾದರೆ ಮಗ ಸಾಯುತ್ತಾನೆಂದು ಗೊತ್ತಿರುವುದಿಲ್ಲ ಆ ರೀತಿ ಮನೋಭಾವನೆ ಒಡೆಯರಾಜ್ ಅವರಲ್ಲಿ ಇದೆ.

ಶ್ರೀ ಜಿ. ಪಿ. ಒಡೆಯರಾಜ್.--ಅದು ನಿಮ್ಮ ಧೋರಣೆ.

ಶ್ರೀ ಪಿ. ರಾಮದೇವ್.--ಒಡೆಯರಾಜ್ ಒಬ್ಬರೇ ಬೇರೆ ಅಲ್ಲ. ರಾಜ್ಯದ ಹಿತಾಸಕ್ತಿಯಲ್ಲಿ ನಾವು ನೀವು ಎಲ್ಲಾ ಒಂದೇ. 8ನೇ ವಿತ್ತೀಯ ಆಯೋಗದ ಮುಂದೆ ತಮ್ಮ ಕೆಲವು ನಾಯಕರು ಹೋಗಿದ್ದರು. ಅವರು ಕೂಡ ರಾಜ್ಯಕ್ಕೆ ಹೆಚ್ಚಿನ ಹಣ ಕೊಡಬೇಕೆಂದು ಹೇಳಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಹೆಚ್ಚಿನ ಹಣವನ್ನು ಬೇರೆ ರಾಜ್ಯಗಳಿಗೆ ಕೊಟ್ಟಾಗ ಯಾವುದೋ ಅಂಕಿ ಅಂಶ ಇಟ್ಟುಕೊಂಡು ಇಲ್ಲಿಗೆ ಕಡಿಮೆ ಹಣವನ್ನು ಕೊಡುವುದು ಸರಿಯಲ್ಲ. ಅದನ್ನು ಮೊದಲು ಹೋಗಲಾಡಿಸಬೇಕೆಂದು ಒತ್ತಾಯಿಸುತ್ತೇನೆ ಈಗಿನ ಲೆಕ್ಕಾಚಾರದಿಂದ 83-84ರಲ್ಲಿ ಭಾರತ ಸರ್ಕಾರದಿಂದ ನಾವು ಸಾಲವಾಗಿ ಪಡೆದ 100 ರೂಪಾಯಿಗಳಲ್ಲಿ 70 ರೂಪಾಯಿ ಮೊತ್ತ ಮರು ಪಾವತಿಗಾಗಿ ಹೋಯಿತು. 100 ರೂಪಾಯಿಗಳನ್ನು ಸಾಲವಾಗಿ ಕೊಟ್ಟು 70 ರೂಪಾಯಿಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದರೆ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಬಹುದು ? ಕೇಂದ್ರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ವಿದೇಶಗಳಿಂದ ತರುತ್ತಾರೆ ಆಗ ಅವರಿಂದ ಡೆಟ್ ರಿಲೀಫ್, ಇಂಟರೆಸ್ಟ್ ರಿಲೀಫ್, ಮೆರಿಟೋರಿಯಂ ಮತ್ತು 4 ವರ್ಷದ

ಪ್ರಿನ್ಸಿಪಲ್ ಇಂಟರೆಸ್ಟ್ ಕೊಡಿ ಎಂದು ಕೇಳುತ್ತಾರೆ. ಅವರಿಗೆ ವಿದೇಶಗಳಿಂದ ಬರತಕ್ಕ ಹಣದ ಬಗ್ಗೆ ಈ ರೀತಿ ಕೇಳುವಾಗ ನಾವು ಏತಕ್ಕೆ ಕೇಳಬಾರದು ? ಸಾಲದ ಹೊರೆಯನ್ನು ನಮ್ಮ ಮೇಲೆ ಹೊರಿಸಿದ್ದಾರೆ ಹಾಗೆ ಸಾಲ ಕೊಡುವಾಗಲೂ 100ಕ್ಕೆ 70 ರಷ್ಟು ಹಣವನ್ನು ಮುರಿದುಕೊಂಡು 30 ರೂಪಾಯಿಯಲ್ಲಿ ಕೆಲಸ ಮಾಡಿ ಎಂದರೆ ಹೇಗೆ ಆಗುತ್ತದೆ ?

ಶ್ರೀ ಜಿ. ಪಿ. ಒಡೆಯರಾಜ್.--ಸಾಲ ತೆಗೆದುಕೊಳ್ಳುವವರಿಗೆ ಗೊತ್ತಿರಬೇಕು.

ಶ್ರೀ ಪಿ. ರಾಮದೇವ್.--ಇವತ್ತಿನ ದಿವಸ ತಾವೇನೋ ಬಡವರ ಪರವಾಗಿ ಹೇಳುತ್ತೀರಿ, ಡೆಟ್ ರಿಲೀಫ್ ಆಕ್ಟನ್ನು ತಂದಿದ್ದೇವೆಂದು ಘೋಷಣೆ ಮಾಡುತ್ತೀರಿ. ಆದರೆ ನಮಗೆ ಆ ವೆಚ್ಚವನ್ನೆಲ್ಲ ಭರಿಸುವುದಕ್ಕೆ ಚೈತನ್ಯ ಇಲ್ಲ. ಇರತಕ್ಕ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕಾಗಿದೆ. ಹೀಗಿರುವಾಗ ಕೊಡತಕ್ಕ ಹಣದಲ್ಲಿ ಶೇಕಡ 70 ರಷ್ಟನ್ನು ವಾಪಸ್ಸು ತೆಗೆದುಕೊಂಡರೆ ಅಭಿವೃದ್ಧಿ ಕಾರ್ಯಗಳಿಗೆ ಏನು ಸಿಗುತ್ತದೆ ? ಆದ್ದರಿಂದ, ನಾನು ಈ ಸಭೆಯ ಮೂಲಕ ಒತ್ತಾಯಿಸುವುದೇನೆಂದರೆ, ಈ ರಾಜ್ಯ ಹಿಂದುಳಿದಿರತಕ್ಕ ರಾಜ್ಯವಾಗಿದೆ. ಆದ್ದರಿಂದ ಇದಕ್ಕೆ ಅಗತ್ಯವಾಗಿರುವ ನೆರವು ದೊರಕಿಸಿಕೊಳ್ಳುವ ಬಗ್ಗೆ ಎಲ್ಲರೂ ಒಮ್ಮತದಿಂದ ಹೋರಾಟ ಮಾಡಬೇಕು. 35 ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಗುಂಡೂರಾಯರು ಒಂದು ಸಾರಿ ಒಂದು ಮಾತನ್ನು ಹೇಳಿದರು. ಅದೇನೆಂದರೆ, ನಾನು ಮುಖ್ಯ ಮಂತ್ರಿ ಅದಮೇಲೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಬಹಳ ಸಂಪರ್ಕ ಇಟ್ಟುಕೊಂಡಿದ್ದೇನೆ. ಅಲ್ಲದೆ, ನಾನು ಸೆಂಟ್ರಲ್ ವರ್ಕಿಂಗ್ ಕಮಿಟಿ ಮೆಂಬರ್ ಆಗಿರುವುದರಿಂದ ಈ ರಾಜ್ಯದಲ್ಲಿ ಏನು ಬೇಕಾದರೂ ಮಾಡುವುದಕ್ಕೆ ಅವಕಾಶ ಇದೆ ಎಂದು ಅಷ್ಟೇ ಅಲ್ಲದೆ ಇಂದಿರಾಗಾಂಧಿಯವರ ಅಡಿಗೆ ಮನೆಗೆ ಸಹ ಹೋಗತಕ್ಕ ಅವಕಾಶ ಇದೆ ಎಂಬ ಮಾತನ್ನು ಹೇಳಿ ಈ ರಾಜ್ಯಕ್ಕೆ ಏನು ಬೇಕಾದರೂ ಸಹಾಯ ಮಾಡಿಸುತ್ತೇನೆಂದು ಹೇಳಿದ್ದರು. ಆದರೆ ಏನೂ ಮಾಡಲಿಲ್ಲ. ಬಹುಶಃ ಕಾಂಗ್ರೆಸ್ಸಿನವರ ಮಾತು ಹಾಗೇ ಎಂದು ಕಾಣುತ್ತದೆ. ಅಳುವ ಮಕ್ಕಳಿಗೆ ಪೆಪ್ಪರಮೆಂಟ್ ಕೊಟ್ಟು ಕೂರಿಸಿದ ಹಾಗೆ ಆಯಿತು. ಇವತ್ತು ಜನತೆಯ ಪರವಾಗಿ ಹೋರಾಟ ಮಾಡತಕ್ಕ ಸರ್ಕಾರ ಬಂದಿದೆ. ಇದು ಬರೀ ಭಾಷಣ ಮಾಡಿ ಹೋಗುವ ಸರ್ಕಾರ ಅಲ್ಲ. ಕೇಂದ್ರದಿಂದ ನಮಗೆ ಬರಬೇಕಾದ ಹಣ ಏನಿದೆ, ಸಾಲ ಏನಿದೆ, ಸವಲತ್ತು ಏನಿದೆ ಅದು ಬರದೇ ಹೋದರೆ ವಿದ್ಯುಚ್ಛಕ್ತಿ ಮತ್ತು ಕೈಗಾರಿಕೆಗಳನ್ನು ಕೊಡದೆ ಹೋದರೆ, ನೀರಿನ ಸಮಸ್ಯೆಯನ್ನು ಸಮಾಧಾನವಾಗಿ ಬಗೆಹರಿಸದಿದ್ದರೆ ನಾವು ಈ ರಾಜ್ಯದ ಜನತೆಯೊಂದಿಗೆ ಚಳುವಳಿ ಮಾಡಬೇಕಾಗುತ್ತದೆಂದು ಹೇಳುತ್ತೇನೆ. ವೆಸ್ಟ್ ಬಂಗಾಳದವರಿಗೆ 200 ಚಿಲ್ಲರೆ ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಕೊಟ್ಟರು. ಏಕೆಂದರೆ ಅವರು ಚಳುವಳಿ ಮಾಡುತ್ತಾರೆ ಎಂದು ತಮಿಳ್ನಾಡಿನವರಿಗೆ ಸಾಕಷ್ಟು ಹಣವನ್ನು ಕೊಡುತ್ತಾರೆ. ಏಕೆಂದರೆ ಆ ಸರ್ಕಾರ ಚಳುವಳಿ ಮಾಡುತ್ತದೆ ಮತ್ತು ಅವರ ಜೊತೆಯಲ್ಲಿ ಇರುತ್ತದೆ ಎಂದು. ಅದೇ ರೀತಿ, ಆಂಧ್ರಕ್ಕೆ ಕೂಡ ಕೊಟ್ಟಿದ್ದಾರೆ. ಆದರೆ ನಮಗೆ ಕೊಟ್ಟಿರುವುದು ನೂರಕ್ಕೆ 30 ಭಾಗ ಮಾತ್ರ. ಕಳೆದ ವರ್ಷ ನಮಗೆ ಅನಾವೃಷ್ಟಿಗಾಗಿ 21 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದೇ ಮಹಾರಾಷ್ಟ್ರಕ್ಕೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ನಮಗಿಂತ ಕಡಿಮೆ ಬರಗಾಲ ಇದೆ. ಈ ವರ್ಷ ಆಂಧ್ರಕ್ಕೆ 15 ಕೋಟಿ ರೂಪಾಯಿ ಕೊಟ್ಟರಿ, ತಮಿಳ್ನಾಡಿಗೆ ಕೊಟ್ಟರಿ ; ಆದರೆ ನಮಗೆ ಏತಕ್ಕೆ ಕೊಡಲಿಲ್ಲ. ? ನಾವು ಏನು ಅನ್ಯಾಯ ಮಾಡಿದ್ದೇವೆ ? ಸರ್ಕಾರ ಬದಲಾವಣೆ ಆಗಿರಬಹುದು ; ಆದರೂ ನಾವೆಲ್ಲ ಭಾರತೀಯರು. ನಮಗೆ ಹಣ ಕೊಡುವುದರಲ್ಲಿ ಏತಕ್ಕೆ ರಾಜಕೀಯ ಮಾಡುತ್ತೀರಿ ? ನಾವು ಈಗ ಏನು ಕೇಂದ್ರಕ್ಕೆ ಹಣವನ್ನು ಮರುಪಾವತಿ ಮಾಡಬೇಕಾಗಿದೆ ಅದನ್ನು 5 ವರ್ಷಗಳ ಕಾಲವಾದರೂ ನಿಲ್ಲಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನಾವು ಈಗ ಕೋಟ್ಯಂತರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಇದನ್ನು ನಿಲ್ಲಿಸಬೇಕೆಂದು ಮತ್ತೊಮ್ಮೆ ಹೇಳುತ್ತೇನೆ. ಅವರು ಹೇಗೆ ವಿದೇಶಗಳಿಂದ ತರತಕ್ಕ ಹಣವನ್ನು ಹಿಂದಿರುಗಿಸಲಿಕ್ಕೆ ಕಾಲವನ್ನು ಮುಂದಕ್ಕೆ ಹಾಕುತ್ತಾರೋ ಅದೇ ರೀತಿ ನಮಗೂ ಕೂಡ 5 ವರ್ಷ ಕಾಲಾವಕಾಶವನ್ನಾದರೂ ಮಾಡಿಕೊಡಬೇಕೆಂದು ಒತ್ತಾಯಿಸುತ್ತೇನೆ. ಇನ್ನೊಂದು ಏನು ಅನ್ಯಾಯವಾಗಿದೆ ಎಂಬುದನ್ನು ಮಹದೇವ್ ಅವರು ಗಮನವಿಟ್ಟು ಕೇಳಬೇಕು. ಪಕ್ಷಗಳು ಬೇರೆ ಇದ್ದರೂ ಜನತೆಗೆ ನಾವು ನೀವು ಇಬ್ಬರೂ ಸೇರಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ. ಈ ಸಂದರ್ಭದಲ್ಲಿ ಭಾರತ ಸರ್ಕಾರ 6ನೇ ಯೋಜನೆಗಾಗಿ ಎತ್ತುತ್ತಿರುವ ಸಾಲದ ಪ್ರಮಾಣ 15 ಸಾವಿರ ಕೋಟಿ ರೂಪಾಯಿಗಳು. ಆದರೆ ಎಲ್ಲಾ ರಾಜ್ಯಗಳಿಗೆ ಒಟ್ಟು ಕೊಡತಕ್ಕ ಹಣ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು. ಇದು ಯಾವ ನ್ಯಾಯ ? ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೊಡಿ ಎಂದು ಎಲ್ಲ ರಾಜ್ಯಗಳ ಜನತೆಯ ಪರವಾಗಿ ಕೇಳುತ್ತೇನೆ. ಕೈಗಾರಿಕೆ, ವಿದ್ಯುಚ್ಛಕ್ತಿ, ನೀರಾವರಿ ಹೀಗೆ ಎಲ್ಲ ಯೋಜನೆಗಳಿಗೂ ಹಣ ಕೊಡಿ ಅನ್ನುತ್ತೀರಿ, ಆದರೆ ಸಾಲ ಕೊಡತಕ್ಕದ್ದು ಮಾತ್ರ ಇಲ್ಲ. ಇದರಲ್ಲೂ ಕೂಡ ಏತಕ್ಕೆ ಅನ್ಯಾಯ ಮಾಡು

ತ್ತೀರಿ ? ಕೊಡತಕ್ಕ ಹಣವನ್ನು ಏತಕ್ಕೆ ಜಾಸ್ತಿ ಮಾಡಬಾರದು ? ಇದರಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಏನಿದೆ ? ಇದು ನಮ್ಮ ವಾದ. ಡಿಫೆನ್ಸ್ ಇರತಕ್ಕದ್ದು ನೋಟುಗಳನ್ನು ಪ್ರಿಂಟ್ ಮಾಡತಕ್ಕದ್ದು ಇವೆಲ್ಲ ಇರತಕ್ಕದ್ದು ಕೇಂದ್ರ ಸರ್ಕಾರದ ಕೈಯಲ್ಲಿ ; ಅದನ್ನು ಅವರೇ ಇಟ್ಟುಕೊಳ್ಳಲಿ. ಆದರೆ ಅಭಿವೃದ್ಧಿ ಕಾರ್ಯಗಳ ಕೆಲಸವನ್ನು ನಮ್ಮ ಮೇಲೆ ಬಿಟ್ಟಿರುವಾಗ ಬೆಲೆ ಏರಿಕೆ ಆದಾಗ ನಮ್ಮ ಮೇಲೆ ಕೈತೋರಿಸುತ್ತಾರೆ. ಆದರೂ ಕೂಡ ಅದನ್ನೆಲ್ಲ ನಿವಾರಣೆ ಮಾಡುವುದಿಲ್ಲ. ಶೇಕಡ 80 ರಷ್ಟಾದರೂ ಹೆಚ್ಚಿಗೆ ಹಣವನ್ನು ರಾಜ್ಯಗಳಿಗೆ ಕೊಡಬೇಕಾಗುತ್ತದೆ. ಆದ್ದರಿಂದ, ಇದರಲ್ಲಿ ನಮಗೆ ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು ಮತ್ತು ಹೆಚ್ಚಿಗೆ ಹಣ ಬರತಕ್ಕ ಪ್ರಯತ್ನವನ್ನು ವಿರೋಧ ಪಕ್ಷದ ಸದಸ್ಯರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬೇರೆ ವಿಚಾರಗಳನ್ನು ಮಾತನಾಡದೆ ವಿದ್ಯುಚ್ಛಕ್ತಿಯ ಬಗ್ಗೆ ಮಾತ್ರ ಮಾತನಾಡಬಯಸುತ್ತೇನೆ. ವಿದ್ಯುಚ್ಛಕ್ತಿಯ ಕೊರತೆ ನಾನಾ ಕಾರಣಗಳಿಂದ ಉಂಟಾಗಿದೆ. ಹಿಂದಿನ ಸರ್ಕಾರ ತನ್ನ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದ ರಾಜ್ಯದ ಜನತೆ ವಿದ್ಯುಚ್ಛಕ್ತಿಯ ಕೊರತೆಯನ್ನು ಅನುಭವಿಸುತ್ತಿದೆ. ಅದನ್ನು ಹೇಗೆ ಭರ್ತಿ ಮಾಡಬೇಕು ? ಇದಕ್ಕೆ ಏನಾದರೂ ಒಂದು ಉಪಾಯ ಮಾಡಿ ಕೊರತೆಯನ್ನು ನಿವಾರಿಸುವುದಾಗಲೀ ಅಥವಾ ಹೆಚ್ಚು ವಿದ್ಯುಚ್ಛಕ್ತಿ ಕೊಡುವ ಬಗ್ಗೆಯಾಗಲಿ ಯೋಚನೆ ಮಾಡಿಲ್ಲ. ಕಾಳಿ ನದಿ ಯೋಜನೆ ಇಷ್ಟು ವರ್ಷವಾದರೂ ಇನ್ನೂ ಪೂರ್ಣವಾಗಿಲ್ಲ. ಅದೇ ರೀತಿ, ಇನ್ನೂ ಸಣ್ಣಪುಟ್ಟ ಹಲವಾರು ಯೋಜನೆಗಳಿವೆ ತುಂಗಭದ್ರ ಯೋಜನೆಯ ಬಗ್ಗೆ ನೋಡಿದರೆ ಹಿಂದೆ ಮಂಜೂರಾಗಿರುವುದನ್ನು ಹಾಗೆಯೇ ಇಟ್ಟಿದ್ದಾರೆ. ಅದನ್ನು ಕಾರ್ಯಗತ ಮಾಡಿಲ್ಲ. ಇಂಥ ಇನ್ನೂ ಹಲವಾರು ಯೋಜನೆಗಳು ಇವೆ. 1972ರವರೆಗೆ ನಮ್ಮಲ್ಲಿ ವಿದ್ಯುಚ್ಛಕ್ತಿ ಸರ್‌ಪ್ಲಸ್ ಇತ್ತು. ನಮ್ಮಲ್ಲಿ ಸರ್‌ಪ್ಲಸ್ ಇದ್ದಾಗ ಗುಜರಾತಿಗೆ, ಆಂಧ್ರಪ್ರದೇಶಕ್ಕೆ, ಮಹಾರಾಷ್ಟ್ರಕ್ಕೆ ಮತ್ತು ತಮಿಳುನಾಡಿಗೆ ಕೊಟ್ಟಿದ್ದೇವೆ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ? ಇವತ್ತು ವಿದ್ಯುಚ್ಛಕ್ತಿ ಕೊರತೆಯುಂಟಾಗಿದ್ದು 19೮೨ ರ ಹೊತ್ತಿಗೆ ಕೊರತೆ ಹೋಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಆದರೆ ತಾತ್ಕಾಲಿಕವಾದ ಕೊರತೆಯನ್ನು ನೀಗಿಸುವುದಕ್ಕೆ ಆಂಧ್ರ ಸರ್ಕಾರದವರು ನಮಗೆ ವಿದ್ಯುತ್ತನ್ನು ಕೊಡಬೇಕಾಗಿತ್ತು. ಏಕೆಂದರೆ ಅಲ್ಲಿ ಹೆಚ್ಚುವರಿ ಇದೆ. ಅಲ್ಲಿರತಕ್ಕ ಶ್ರೀಶೈಲಂ ಪ್ರಾಜೆಕ್ಟನ್ನು ನಾವು ನೋಡಿದ್ದೇವೆ. ನಾಗಾರ್ಜುನ ಸಾಗರ ಪ್ರಾಜೆಕ್ಟಿನಲ್ಲಿ ನೋಡಿದ್ದೇವೆ. ಎಸ್ಟಿಮೇಟ್ ಕಮಿಟಿಯಿಂದ ಹೋಗಿ ನೋಡಿದಾಗ ಗೊತ್ತಾಗಿದೆ. ಶ್ರೀ ಶೈಲಂ ಪ್ರಾಜೆಕ್ಟಿನಲ್ಲಿ ೪ ಜನರೇಟರ್ ಹಾಕಿಕೊಂಡಿದ್ದರೂ ಮೂರು ಜನರೇಟರ್‌ನಲ್ಲಿ ಮಾತ್ರ ವಿದ್ಯುಚ್ಛಕ್ತಿ ತಯಾರು ಮಾಡುತ್ತಿದ್ದಾರೆ. ನಾಗಾರ್ಜುನ ಸಾಗರದಲ್ಲಿ 11 ಜನರೇಟರ್ ಇದ್ದರೂ ವಿದ್ಯುತ್ ತಯಾರು ಮಾಡತಕ್ಕದ್ದು 6 ಜನರೇಟರ್‌ನಲ್ಲಿ. ಏತಕ್ಕೆ ಹೀಗೆ ಮಾಡುತ್ತೀರಿ ಎಂದು ಕೇಳಿದಾಗ ನಮ್ಮಲ್ಲಿ ಸರ್‌ಪ್ಲಸ್ ಇದೆ. ಆದ್ದರಿಂದ ನಾವು ಏತಕ್ಕೆ ಹೆಚ್ಚಿಗೆ ಉತ್ಪತ್ತಿ ಮಾಡಬೇಕು ಎಂದು ಹೇಳಿದರು. ಅವರಲ್ಲಿ ಹೆಚ್ಚುವರಿ ವಿದ್ಯುತ್ ಇಟ್ಟುಕೊಂಡು ಪಕ್ಕದ ರಾಜ್ಯದಲ್ಲಿ ಕೇಳಿದರೂ ಕೊಡುತ್ತಿಲ್ಲ ಎಂದರೆ ಇದು ದುರದೃಷ್ಟಕರವಾದುದು. ಇದರ ಜೊತೆಗೆ ರಾಮಗುಂಡಂನಲ್ಲಿ ನಮಗೆ ಪಾಲು ಬರಬೇಕು. ಆಂಧ್ರದಿಂದ ವಿದ್ಯುಚ್ಛಕ್ತಿಯನ್ನು ಕರ್ನಾಟಕಕ್ಕೆ ತರಬಹುದು. ನಮ್ಮ ಮುಖ್ಯಮಂತ್ರಿಗಳು ಮತ್ತು ವಿದ್ಯುತ್ ಮಂತ್ರಿಗಳಾದ ಪಟೇಲ್ ಅವರು ಆಂಧ್ರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಆದರೂ ವಿದ್ಯುಚ್ಛಕ್ತಿ ಬರುತ್ತಿಲ್ಲ. ಏತಕ್ಕೆ ಹೀಗೆ ಮಾಡುತ್ತಿದ್ದಾರೋ ಗೊತ್ತಿಲ್ಲ. ಜನತೆಯ ನೋವನ್ನು, ಕಷ್ಟವನ್ನು ಪರಿಹರಿಸುವುದಕ್ಕೆ ಪೂರ್ತಿ ಪ್ರಯತ್ನವನ್ನು ಈ ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ನಮಗೆ ಬೇಕಾಗಿರುವುದು ಇನ್ನು ಒಂದು ವರ್ಷ ಮಾತ್ರ, ಅಲ್ಲಿಯವರೆಗೂ ನಮಗೆ ವಿದ್ಯುಚ್ಛಕ್ತಿ ಕೊಡಿ ಎಂದು ಅವರಿಗೆ ನಮ್ಮ ಸರ್ಕಾರದವರು ಹೇಳಬೇಕು. ಶ್ರೀ ಎನ್. ಟಿ. ರಾಮರಾವ್ ಅವರ ಹೇಳಿಕೆಯನ್ನು ನಾನು ಪತ್ರಿಕೆಯಲ್ಲಿ ನೋಡಿದೆ. ಅವರು ಏನು ಹೇಳಿದ್ದಾರೆಂದರೆ ನೀವು ತುಂಗಭದ್ರಾದಿಂದ ನೀರು ಕೊಟ್ಟರೆ ನಾವು ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ರಾಯಚೂರು ಭಾಗಕ್ಕೆ ನೀರು ಬೇಕಾಗಿರುವುದರಿಂದ ಆಂಧ್ರಕ್ಕೆ ಹೇಗೆ ನೀರು ಕೊಡುತ್ತಾರೋ ನನಗೆ ಗೊತ್ತಾಗುತ್ತಿಲ್ಲ. ನೀರು ಕೊಡಬಾರದು ಎಂಬುದು ನನ್ನ ಅಭಿಪ್ರಾಯ. ಅದಕ್ಕೂ ಸಂಬಂಧ ಕಲ್ಪಿಸಿಕೊಳ್ಳಬಾರದು. ಅಲ್ಲೂ ವಿರೋಧ ಪಕ್ಷದ ಸರ್ಕಾರ ಇದೆ. ನಾವೆಲ್ಲಾ ಕೌನ್ಸಿಲ್ ಆಫ್ ಚೀಫ್ ಮಿನಿಸ್ಟರ್ಸ್ ಎಂದು ಮಾಡಿದ್ದೇವೆ. ನಾವು ಅವರು ಭಾಯಿ ಭಾಯಿ ಎಂದು ಹೇಳತಕ್ಕವರು. ಆದ್ದರಿಂದ ನಮಗೆ ವಿದ್ಯುಚ್ಛಕ್ತಿ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತಾ ಕಲ್ಪಾಕಂ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ನಾವು ತಮಿಳುನಾಡಿಗೆ ಅವರು ಕೇಳಿದಾಗಲೆಲ್ಲಾ ಸಾಕಷ್ಟು ನೀರು ಕೊಡುತ್ತಿದ್ದೇವೆ. ಯಾವ ಸರ್ಕಾರ ಬಂದರೂ ಓಡಿಹೋಗಿ ಅವರಿಗೆ ನೀರು ಕೊಡುತ್ತೇವೆ. ಮಾನ್ಯ ದೇವರಾಜ ಅರಸು ಅವರ ಸರ್ಕಾರ ಇದ್ದಾಗ, ಗುಂಡೂರಾವ್ ಅವರ ಸರ್ಕಾರ ಇದ್ದಾಗ ನೀರು ಕೊಟ್ಟೆ

ದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಬಂದಾಗಲೂ ಕೊಟ್ಟಿದ್ದಾರೆ. ನಾವು ಧಾರಾಳ ಮನೋಭಾವವುಳ್ಳವರು ಯಾರಾದರೂ ಸಂಕಟದಲ್ಲಿದ್ದಾಗ ನಮಗೆ ಅಯ್ಯೋ ಎನ್ನಿಸುತ್ತದೆ. ನಮ್ಮ ರೈತರಿಗೆ ತೊಂದರೆಯಾದರೂ ಬೇರೆಯವರಿಗೆ ನೀರು ಕೊಡುತ್ತೇವೆ. ಆದರೆ ಅದೇ ರೀತಿ ಅವರಿಂದ ಬರಬೇಕಾದ ಷೇರನ್ನು ಅವರು ಕೊಡಬೇಕಾಗಿಲ್ಲವೆ ? ಕಲ್ಪಾಕಂ ನ್ಯೂಕ್ಲಿಯರ್ ಪ್ಲಾಂಟ್‌ನಲ್ಲಿ ನಮಗೆ ಬರಬೇಕಾದ ಪಾಲನ್ನು ಕೊಡುತ್ತಿಲ್ಲ. ನಾವು ವಿದ್ಯುಚ್ಛಕ್ತಿ ತೆಗೆದುಕೊಳ್ಳುವುದಕ್ಕೆ ಲೈನ್ಸ್ ಇದೆ. ಟ್ರಾನ್ಸ್ಮಿಟ್ ಮಾಡುವುದಕ್ಕೆ ಅವಕಾಶ ಇದೆ. ಇದು ಕೇಂದ್ರ ಸರ್ಕಾರದ ಯೋಜನೆ. ಹಣ ಕೊಟ್ಟಿರುವವರು ಕೇಂದ್ರ ಸರ್ಕಾರದವರು. ಆದರೂ ನಮಗೆ ಏತಕ್ಕೆ ಕೊಡುತ್ತಿಲ್ಲ. ನನಗೆ ತಿಳಿದ ಹಾಗೆ ಕೇಂದ್ರದವರು ಇದಕ್ಕೆ ಅಡ್ಡ ಬರುತ್ತಿದ್ದಾರೆ ಎಂದು ಗೊತ್ತಾಗಿದೆ. ಜನತಾ ಸರ್ಕಾರದ ಕತ್ತು ಹಿಸುಕಬೇಕು, ಕೂಸಿನ ಸ್ಟೇಜಿನಲ್ಲೇ ಇದನ್ನು ಮುಗಿಸಬೇಕು ಎಂಬ ಮನೋಭಾವ ಕೇಂದ್ರದವರಿಗಿದೆ. ಕೇಂದ್ರದ ಮಂತ್ರಿಗಳಾದ ಶಿವಶಂಕರ್ ಅವರು ಬಂದಿದ್ದಾಗ ನಾವು ರೆಪ್ರೆಸೆಂಟ್ ಮಾಡಿದೆವು. ಆಗ ಅವರು "ನಾನೇನು ಮಾಡಲಿ ತಮಿಳುನಾಡು ಸರ್ಕಾರ ಮತ್ತು ಆಂಧ್ರ ಪ್ರದೇಶದ ಸರ್ಕಾರದವರು ಕೊಡುವುದಿಲ್ಲ ಎಂದು ಹೇಳುತ್ತಾರೆ" ಎಂದು ಹೇಳಿದರು. ಕೇಂದ್ರದವರು ಇದರಲ್ಲಿ ಹಣ ಹೂಡಿರುವಾಗ ನಾವೇನು ಮಾಡುವುದಕ್ಕಾಗುತ್ತದೆ ಎಂದು ತಾರತಮ್ಯ ತೋರಿಸಿದರೆ ಹೇಗೆ ? ಕೇಂದ್ರ ಸರ್ಕಾರದಿಂದ ಇದಕ್ಕೆ ತಡೆ ಇದೆ. ಕಾಣದ ಕೈ ಕೆಲಸ ಮಾಡುತ್ತಿದೆ. ಜನತಾ ಸರ್ಕಾರದ ಕೂಸಿಗೆ ತೊಂದರೆ ಕೊಟ್ಟರೆ ಮುಂದೆ ನಾವು ರಾಜ್ಯಭಾರ ಮಾಡಬಹುದು ಎಂಬ ದೃಷ್ಟಿಯಿಂದ ಅವರು ಹೀಗೆ ಮಾಡುತ್ತಿದ್ದಾರೆ. ದಯಮಾಡಿ ಇದನ್ನು ....

ಶ್ರೀ ಎಂ ಮಹದೇವ್.—ಕೇಂದ್ರದವರು ತಾರತಮ್ಯ ತೋರಿಸುತ್ತಿಲ್ಲ. ಆದರೆ ನೀವು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ.

ಶ್ರೀ ಪಿ. ರಾಮದೇವ್.—ಕೇಂದ್ರದ ಯೋಜನೆ ಆಗಿರುವುದರಿಂದ ನೀವು ನಮಗೆ ಕೊಡಿಸಿಕೊಡಿ. ರಾಯಚೂರಿನಲ್ಲಿ ಥರ್ಮಲ್ ಪ್ಲಾಂಟ್ ಇದೆ. ಅಲ್ಲಿ ಮೊದಲನೇ ಹಂತದಲ್ಲಿ ಆಗತಕ್ಕ ವಿದ್ಯುತ್ ಉತ್ಪಾದನೆ ಸಾಕಾಗುವುದಿಲ್ಲ ಎಂದು ಅಡಿಷನಲ್ ಪವರ್ ಜನರೇಟ್ ಮಾಡುವುದಕ್ಕೆ ಎರಡನೇ ಹಂತವನ್ನು ಮಂಜೂರು ಮಾಡಬೇಕೆಂದು ನಮ್ಮ ಸರ್ಕಾರದವರು ಕೇಳಿದರೂ ಕೇಂದ್ರದಿಂದ ಮಂಜೂರಾತಿ ಸಿಕ್ಕಿಲ್ಲ. ಹೆಚ್ಚುವರಿ ವಿದ್ಯುತ್ ಇರುವ ಕಡೆ ನ್ಯೂಕ್ಲಿಯರ್ ಪ್ಲಾಂಟಿಗೆ ಅವಕಾಶ ಕೊಡುತ್ತೀರಿ. ಆಂಧ್ರದಲ್ಲಿ ವಿದ್ಯುತ್ ಹೆಚ್ಚುವರಿ ಇದ್ದರೂ ಅಲ್ಲಿ ಥರ್ಮಲ್ ಪ್ಲಾಂಟ್‌ಗೆ ಅವಕಾಶ ಕೊಡುತ್ತೀರಿ. ಆದರೆ ಕೊರತೆ ಇರುವ ನಮಗೆ ಏತಕ್ಕೆ ಕೊಡುತ್ತಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಬಂದಾಗ ತಾವೆಲ್ಲಾ (ಕಾಂಗ್ರೆಸ್ ಶಾಸಕರಿಗೆ) ಕೈ ಮುಗಿದು ತಮ್ಮ ಆಶೀರ್ವಾದ ಬೇಕು ಎಂದು ಹೇಳಿದರೆ ಪ್ರಯೋಜನವಾಗುವುದಿಲ್ಲ. ರಾಜ್ಯದ ಜನತೆ ಪರವಾಗಿ ಹೋರಾಟ ಮಾಡಿ. ನಮ್ಮ ಜೊತೆ ರಾಜ್ಯದ ಜನತೆಯ ಸಮಸ್ಯೆ ಪರಿಹಾರಕ್ಕೆ ಸಹಕಾರ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ನಗರದ ಸಮಸ್ಯೆ ಬಗ್ಗೆ ಮತ್ತು ಕ್ರೀಡೆಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಹಿಂದೆ ಕ್ರೀಡೆ ತೆರಿಗೆ ಹಾಕುವ ಮಸೂದೆ ನಾನು ಅಧ್ಯಕ್ಷಸ್ಥಾನದಲ್ಲಿ ಕುಳಿತಿದ್ದಾಗಲೇ ಪಾಸ್ ಆಯಿತು. ನನಗೆ ಆಗ ಸಂಕಟವಾಯಿತು. ಕ್ರೀಡಾ ಕ್ಷೇತ್ರದಲ್ಲಿ 40 ವರ್ಷಗಳಿಂದ ಆಸಕ್ತಿ ಇಟ್ಟುಕೊಂಡಿರುವ ನನ್ನಂಥವನಿರುವಾಗಲೇ ಇದು ಪಾಸಾಗಬೇಕಾಗಿ ಬಂತಲ್ಲ ಎಂದು ನನ್ನ ಮನಸ್ಸಿಗೆ ಸಂಕಟವಾಯಿತು. ಆದರೆ ಈಗ ರದ್ದು ಮಾಡಿರುವುದು ಸಂತೋಷ. ಟೆನ್ನಿಸ್‌ಗೆ ತೆರಿಗೆ ಹಾಕಿದ್ದಾರೆ. ಅದನ್ನೂ ತೆಗೆದುಹಾಕಬೇಕು ಎಂಬುದು ನನ್ನ ಅಭಿಪ್ರಾಯ. ಅದರಿಂದ ಬರತಕ್ಕ 5-10 ಲಕ್ಷ ರೂಪಾಯಿಗಳಿಗೋಸ್ಕರ ಏತಕ್ಕೆ ಒದ್ದಾಡಬೇಕು ? ಬೆಂಗಳೂರಿನಲ್ಲಿ ನೀರಿಗೆ ತೊಂದರೆ ಬಂದಿದೆ. ಬೇರೆ ಕಡೆಯೂ ಬಂದಿದೆ. ಬೆಂಗಳೂರು ನಗರದ ನೀರಿನ ಸೌಕರ್ಯ ಹೆಚ್ಚಿಸುವುದಕ್ಕೆ ಕಾವೇರಿ ಮೂರನೇ ಹಂತದ ಯೋಜನೆಯನ್ನು ಪ್ಲಾನಿಂಗ್ ಸ್ಕೀಮಿನಲ್ಲಿ ಸೇರಿಸಿಕೊಳ್ಳುವುದಕ್ಕೆ ಒತ್ತಾಯ ಮಾಡಬೇಕು. ಜೊತೆಗೆ ಸಾರಿಗೆ ಸೌಕರ್ಯದ ಕಡೆಯೂ ಗಮನ ಕೊಡಬೇಕು. ನಾವು ಸಾರಿಗೆ ವ್ಯವಸ್ಥೆ ಕೇವಲ ಬಸ್ಸುಗಳನ್ನೇ ಅವಲಂಬಿಸಿಕೊಂಡಿರುವುದಕ್ಕಾಗುವುದಿಲ್ಲ. ಬೇರೆ ರೀತಿಯ ವ್ಯವಸ್ಥೆಗಳನ್ನೂ ಇದಕ್ಕೆ ಮಾಡಬೇಕಾಗಿದೆ. ಟ್ರಾಮ್ಸ್, ಎಲೆಕ್ಟ್ರಿಕ್ ಟ್ರೈನ್ ಮುಂತಾದ ವ್ಯವಸ್ಥೆ ಮಾಡಬೇಕು. ಕಾಶ್ಮೀರದಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸುವ ವ್ಯವಸ್ಥೆ ಮಾಡಿದ್ದಾರೆ. ಅದನ್ನಾದರೂ ಇಲ್ಲಿ ಮಾಡಬೇಕು. ಕಾಶ್ಮೀರದಲ್ಲಿ ಜೈನಾದವರು ಈ ವ್ಯವಸ್ಥೆ ಮಾಡಿದ್ದಾರೆ. ಈ ಬಗ್ಗೆ ಈಗಾಗಲೇ ಸರ್ವೇ ಆಗಿದು ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಜಾಫರ್ ಷರೀಫ್ ಅವರು ಬಂದಿದ್ದಾಗ ಇದಕ್ಕೆ 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಇದು ಬೆಂಗಳೂರು ಜನತೆಗೆ ಮಾತ್ರ ಕೊಡತಕ್ಕದ್ದಲ್ಲ. ಇದು ರಾಜ್ಯದ ರಾಜಧಾನಿ ರಾಜ್ಯದ ಮೂಲೆಮೂಲೆಗಳಿಂದ ಇಲ್ಲಿಗೆ ಜನಬರುತ್ತಾರೆ. ಅವರಿಗೆಲ್ಲಾ ಉತ್ತಮವಾದ ಸಾರಿಗೆ ಸೌಲಭ್ಯ ಕೊಡತಕ್ಕ ಜವಾಬ್ದಾರಿ ಇದೆ. ಆದ್ದರಿಂದ ಇದನ್ನು ಪ್ಲಾನಿಂಗ್ ಸ್ಕೀಮಿನಲ್ಲಿ ಸೇರಿಸಿಕೊಳ್ಳಬೇಕೆಂದು ಒತ್ತಾಯ ಮಾಡಿ

ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ(ಕೊಟ್ಟೂರು) .— ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯ ಪತ್ರವನ್ನು ಸ್ವಾಗತ ಮಾಡುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಶ್ರದ್ಧೆಯಿಂದ ಶ್ರಮಪಟ್ಟು ಎಲ್ಲಾ ಇಲಾಖೆಗಳ ಅಭಿವೃದ್ಧಿಗೆ ಹಿಂದಿನ ವರ್ಷಕ್ಕಿಂತ ಹೆಚ್ಚಿನ ಹಣವನ್ನು ಒದಗಿಸಿ ರಾಜ್ಯದ ಅಭಿವೃದ್ಧಿ ಕಾರ್ಯದಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಕೇಂದ್ರ ಸರ್ಕಾರದ ನೆರವು ಹೆಚ್ಚಾಗಿಲ್ಲದಿದ್ದರೂ ಕೂಡ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿ ರಾಜ್ಯದ ಆದಾಯದ ಮಿತಿಯಲ್ಲಿ ಉತ್ತಮವಾದ ಆಯವ್ಯಯ ಪತ್ರವನ್ನು ನಮ್ಮ ಮುಂದಿಟ್ಟದ್ದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂಧಿಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ನಾವೆಲ್ಲರೂ ಗ್ರಾಮಾಂತರ ಪ್ರದೇಶಗಳಿಂದ ಆರಿಸಿಬಂದಿರತಕ್ಕ ಜನ. ನಮ್ಮ ರಾಜ್ಯದಲ್ಲಿ 100ಕ್ಕೆ 48 ರಿಂದ 50ರಷ್ಟು ಹೆಣ್ಣು ಮಕ್ಕಳಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 80ರಷ್ಟು ಮಂದಿ ಹೆಣ್ಣು ಮಕ್ಕಳಿದ್ದಾರೆ. ಆದ್ದರಿಂದ ಅಲ್ಲಿ ಅವರಿಗೆ ಬೇಕಾದ ಸೌಕರ್ಯವನ್ನು ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಭಾವಿಸಿದ್ದೇನೆ.

12-00 Noon.

ಮುಖ್ಯವಾಗಿ ಅವರಿಗೆ ಶೌಚಕ್ಕೆ ಹೋಗುವಾಗ ಬಯಲಿನಲ್ಲಿ ಕೂರಬೇಕಾಗುತ್ತದೆ ; ಅಂಥವರಿಗೆ ಶೌಚಗೃಹಗಳನ್ನು ಕಟ್ಟಿಸತಕ್ಕ ಯೋಜನೆಗೆ ಕುಡಿಯುವ ನೀರಿನ ಯೋಜನೆಗಿಂತ ಮುಖ್ಯವಾಗಿ ಆಧ್ಯತೆಯನ್ನು ಕೊಡಬೇಕು. ಈ ಒಂದು ಯೋಜನೆಯನ್ನು 4-5 ವರ್ಷಗಳ ಅವಧಿಯಲ್ಲಿ ಎಲ್ಲಾ ಹಳ್ಳಿಗಳಲ್ಲಿ ಸರ್ಕಾರ ಜಾರಿಗೆ ತರುತ್ತದೆ ಎಂದು ನಾನು ಭಾವಿಸಿದ್ದೇನೆ. ಈ ಯೋಜನೆಗೆ ಆಯವ್ಯಯ ಪತ್ರದಲ್ಲಿ ಸ್ವಲ್ಪ ಹಣವನ್ನು ಕಾದಿಟ್ಟರುವುದು ಬಹಳ ಒಳ್ಳೆಯದು. ನನ್ನ ಸ್ನೇಹಿತರಾದ ಶ್ರೀ ರಾಮದೇವ್ ಅವರು ವಿದ್ಯುಚ್ಛಕ್ತಿಯ ಬಗ್ಗೆ ಸಾಕಷ್ಟು ಹೇಳಿದರು. ವಿದ್ಯುಚ್ಛಕ್ತಿಯ ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರುವ ರೈತರಿಗೆ ದಿನಕ್ಕೆ 2 ಗಂಟೆ ಕೂಡ ವಿದ್ಯುತ್ ಸರಬರಾಜು ಸಿಕ್ಕುತ್ತಿಲ್ಲ. ಈ ಒಂದು ದೃಷ್ಟಿಯಿಂದ ವ್ಯವಸಾಯ ಮಾಡುವವರಿಗೆ ಹಗಲು ಹೊತ್ತಿನಲ್ಲಿ ದಿನಸಕ್ಕೆ 12 ಗಂಟೆಗಳ ಕಾಲ ವಿಧ್ಯುತ್ ಸರಬರಾಜು ಮಾಡುವಂತೆ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ ಇನ್ನು ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ರಾಜ್ಯದಲ್ಲಿ ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿವೆ ; ಉತ್ತಮ ರೀತಿಯ ಭೂಗುಣಗಳು ಇವೆ. ಆದರೆ ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೋಡಿದ್ದೇನೆ ಅಲ್ಲಿ ಖುಷ್ಕಿ ಜಮೀನುಗಳು ಬಹಳ ಜಾಸ್ತಿ ಇವೆ. ನೀರಾವರಿ ಜಮೀನು ಕಡಿಮೆ ಇವೆ, ತುಂಗಭದ್ರಾ ಅಣೆಕಟ್ಟು ಇದ್ದರೂ ಕೂಡ ಬಳ್ಳಾರಿ ಜಿಲ್ಲೆಯಲ್ಲಿ ಎರಡು ಮತ್ತು ರಾಯಚೂರು ಜಿಲ್ಲೆಯ 3-4 ತಾಲ್ಲೂಕುಗಳಿಗೆ ಸಂಪೂರ್ಣವಾಗಿ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಹಿಂದಿನ ಕಾಲದಲ್ಲಿ ಅನೇಕ ಕಡೆ ಕೆರೆಗಳನ್ನು ಕಟ್ಟಿದ್ದಾರೆ. ಇವತ್ತಿನ ದಿವಸ ಆ ಕೆರೆಗಳಲ್ಲಿ ಹೂಳು ತುಂಬಿಕೊಂಡು ನೀರಿನ ಸಂಗ್ರಹಣೆಗೆ ತುಂಬಾ ಕಷ್ಟವಾಗಿದೆ. ಅಂಥಹದಕೆ ಸಮಗ್ರ ಯೋಜನೆಯನ್ನು ಕೈಗೊಂಡು ಹೂಳು ತೆಗೆಯುವುದಕ್ಕೆ ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ಆ ಕೆರೆಗಳ ಪ್ರದೇಶದಲ್ಲಿ ಬೆಳೆಯನ್ನು ತೆಗೆಯುವುವಕ್ಕೆ ಸಾಧ್ಯವಾಗುವುದಿಲ್ಲ. ಆ ಕೆರೆಗಳಿಗೆ ಹೊಸ ಯೋಜನೆಯೊಂದನ್ನು ರೂಪಿಸಲು ಸರ್ಕಾರ ಆಲೋಚಿಸಬೇಕೆಂದು ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯವರು ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ 25 ಕಿಲೋಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತೇವೆಂದು ಆಯವ್ಯಯಪತ್ರದಲ್ಲಿ ಸೂಚಿಸಿದ್ದಾರೆ. ಆ ಪ್ರಕಾರ ಮಾಡಿದರೆ ಆಗುವುದಿಲ್ಲ ಗುಲ್ಬರ್ಗಾ, ಬೀದರ್, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಾಕಷ್ಟು ರಸ್ತೆಗಳು ಅಭಿವೃದ್ಧಿಯಾಗಿಲ್ಲ. ಹೆಚ್ಚು ಹೆಚ್ಚಿಗೆ ಉದ್ದದ ರಸ್ತೆಗಳನ್ನು ತೆಗೆದುಕೊಂಡು ಅಂಥ ಪ್ರದೇಶಗಳ ಅಭಿವೃದ್ಧಿಗೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಏಕೆಂದರೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೇವಲ 25 ಕಿಲೋಮೀಟರ್ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಹೆಚ್ಚು ಅಭಿವೃದ್ಧಿಯಾಗುವುದಿಲ್ಲ. ಏಕೆಂದರೆ ಒಟ್ಟು ರಾಜ್ಯದ ರಸ್ತೆಯ ಸುಮಾರು ಶೇಕಡ 35ರಷ್ಟು ಈ ಪ್ರದೇಶದಲ್ಲಿದೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಶೇಕಡ 15-18 ರಷ್ಟು ಮಾತ್ರ ಇವೆ. ಆದಕಾರಣ ಇನ್ನೂ ಹೆಚ್ಚು ಹೆಚ್ಚಾಗಿ ಈ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ಕೃಷಿ ಕಾಲೇಜು ಮತ್ತು ಪಶುವೈದ್ಯ ಕಾಲೇಜುಗಳ ಬಗ್ಗೆ ಆಯವ್ಯಯ ಪತ್ರದಲ್ಲಿ ಸೂಚಿಸಿದ್ದಾರೆ, ಇದನ್ನು ಸ್ಥಾಪಿಸುವ ಮುನ್ನ ಒಂದು ತಜ್ಞರ ಸಮಿತಿಯನ್ನು ರಚಿಸಿ ಅದರ ವರದಿಯನ್ನು ತೆಗೆದುಕೊಂಡು ಅಲ್ಲಿ ಸ್ಥಾಪಿಸುವುದು ಸೂಕ್ತವೆಂದು ಕಾಣುತ್ತದೆ. ಇದರಲ್ಲಿ ರಾಜಕೀಯ ದೃಷ್ಟಿಯಿಂದ ಮತ್ತು

ರಾಜಕೀಯ ಒತ್ತಡದಿಂದ ಈ ಕಾಲೇಜುಗಳನ್ನು ಸ್ಥಾಪನೆ ಮಾಡಬಾರದೆಂದು ಸೂಚಿಸುತ್ತೇನೆ. ಏಕೆಂದರೆ ಕೃಷಿ ಕಾಲೇಜು ಮುಖ್ಯವಾಗಿ ಬಳ್ಳಾರಿ ಅಥವಾ ರಾಯಚೂರು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿದರೆ ಬಹಳ ಒಳ್ಳೆಯದು. ಕಾರಣ ತುಂಗಭದ್ರಾ ಮತ್ತು ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಅಲ್ಲಿ ಬರುತ್ತದೆ. ಮತ್ತು ಅದು ವ್ಯವಸಾಯಕ್ಕೆ ಬಹಳ ಯೋಗ್ಯವಾದ ಪ್ರದೇಶವಾಗಿದೆ. ಕೆಂಪು ಮತ್ತು ಕಪ್ಪು ಮಣ್ಣು ಇರತಕ್ಕ ಭೂಮಿ ಹಾಗೂ ಉತ್ತಮ ಹವಾಗುಣ ಅಲ್ಲಿದೆ. ಇವತ್ತಿನ ದಿವಸ ಗುಲ್ಬರ್ಗಾ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳನ್ನು ನಮ್ಮ ರಾಜ್ಯದಲ್ಲಿ ಮಾಡಿದರೆ ಅವುಗಳ ಅಭಿವೃದ್ಧಿ ಯಾವ ರೀತಿಯಲ್ಲೂ ಆಗಲಿಲ್ಲ. ಏಕೆಂದರೆ ಅವುಗಳಿಗೆ ಯು. ಜಿ. ಸಿ. ಗ್ರ್ಯಾಂಟ್ ಸಿಕ್ಕುತ್ತಿಲ್ಲ. ಆದ್ದರಿಂದ ಅವು ಅಭಿವೃದ್ಧಿಯಾಗಲು ಸಾಧ್ಯವಾಗಿಲ್ಲ. ಈ ವಿಶ್ವವಿದ್ಯಾನಿಲಯಗಳಿಗೆ ಮೂರು ಸದಸ್ಯರನ್ನು ನಾಮಕರಣ ಮಾಡಿದೆ. ಅವರು ಅಲ್ಲಿಗೆ ಹೋದಾಗ ಗುಲ್ಬರ್ಗಾ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ಕುಡಿಯುವುದಕ್ಕೆ ನೀರು ಸಹ ಸಿಕ್ಕಲಿಲ್ಲ. ಅದಕ್ಕಾಗಿ ಈ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹಣ ಒದಗಿಸಬೇಕು, ಹಾಗೂ ಯು. ಜಿ. ಸಿ. ಗ್ರ್ಯಾಂಟನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ

ಇನ್ನು ಹಂಪೆ ಜೀರ್ಣೋದ್ಧಾರದ ಸಲುವಾಗಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಗಳನ್ನು ಈಗಾಗಲೇ ಕರೆದಿದ್ದೀರಿ. ಆದರೂ ಕೂಡ ಜೀರ್ಣೋದ್ಧಾರ ಕಾರ್ಯ ಇನ್ನೂ ಆಗಿಲ್ಲ. ಅದಕ್ಕೆ ಆಯವ್ಯಯ ಪತ್ರದಲ್ಲಿ ಪ್ರತ್ಯೇಕ ಹಣವನ್ನು ಇಟ್ಟರೆ ಒಳ್ಳೆಯದೆಂದು ಸೂಚಿಸುತ್ತೇನೆ. ರಾಜ್ಯದ ಹೌಸಿಂಗ್ ಬೋರ್ಡಿನವರು ಕಟ್ಟಿದ ಮನೆಗಳನ್ನು ವಿತರಣೆ ಮಾಡಲು ಅಧ್ಯಕ್ಷರಿಗೆ ಅಥವಾ ಮಂಡಳಿಗೆ ಕೇವಲ ಶೇಕಡ 10ರಷ್ಟು ಮಾತ್ರ ಅವಕಾಶ ಇದೆ. ಇದನ್ನು ಸಂಪೂರ್ಣವಾಗಿ ಹಂಚುವ ವ್ಯವಸ್ಥೆಯನ್ನು ಬೋರ್ಡಿಗೆ ಕೊಟ್ಟರೆ ಒಳ್ಳೆಯದು. ಏಕೆಂದರೆ ಲಾಟರಿ ಪದ್ಧತಿಯಲ್ಲಿ, ಮನೆ ಇದ್ದವರಿಗೆ ಪುನಃ ಸಿಗುವಂತಹ ಸಂದರ್ಭ ಉಂಟು. ಯಾರಿಗೆ ಅವಶ್ಯಕತೆ ಅವರಿಗೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಪದ್ಧತಿಯನ್ನು ರದ್ದು ಮಾಡಿ ಸಂಪೂರ್ಣವಾಗಿ ಮನೆಗಳನ್ನು ಹಂಚುವ ವ್ಯವಸ್ಥೆಯನ್ನು ಬೋರ್ಡಿನವರಿಗೆ ಕೊಡುವುದು ಸೂಕ್ತ.

ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಗ್ರಾಮಾಂತರ ಪ್ರದೇಶಗಳ ಸಂಗೀತಗಾರರು ಮತ್ತು ಕಲೆಗಾರರಿಗೆ ಹಣ ಸಿಕ್ಕುತ್ತಿಲ್ಲ. ಇದು ಕೇವಲ ಬೆಂಗಳೂರು ತುಮಕೂರು, ಮೈಸೂರು ಮತ್ತು ಬೆಂಗಳೂರು ಸಮೀಪದ ಜನಸಂಖ್ಯೆಗೆ ಮಾತ್ರ ಸಿಕ್ಕುತ್ತದೆ. ಇದನ್ನು ಗ್ರಾಮಾಂತರ ಪ್ರದೇಶಗಳವರಿಗೂ ಸಿಗುವಂತ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಆರೋಗ್ಯ ಇಲಾಖೆಯಲ್ಲಿ ಮತ್ತು ಅನೇಕ ಇಲಾಖೆಗಳಲ್ಲಿ ಏನು ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿದ್ದೀರಿ, ಅವರೆಲ್ಲರನ್ನೂ ಮೊದಲು ರೆಗ್ಯುಲರೈಸ್ ಮಾಡಿ ಉಳಿದ ಸ್ಥಾನಗಳನ್ನು ಭರ್ತಿಮಾಡಿದರೆ ಒಳ್ಳೆಯದು. ಅಂದರೆ ಈಗ ಸರ್ಕಾರದವರು ಏನೋ 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದಿದ್ದಾರೆ, ಅದರಲ್ಲಿ ಮೊದಲು ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ, ಇದರಲ್ಲಿ ರೋಸ್ಟರ್ ಪದ್ಧತಿ ಮತ್ತು ಕಾನೂನುಗಳನ್ನು ಉಪಯೋಗಿಸಿದರೆ ತಪ್ಪಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ನನ್ನ ಜಿಲ್ಲೆಯಲ್ಲಿ ಇನ್ನೊಂದು ಸಮಸ್ಯೆ ಇದೆ. ಅದೇನೆಂದರೆ ಕ್ಯಾಸ್ಟ್ ಸರ್ಟಿಫಿಕೇಟ್ ವಿಚಾರ ಬಂದಾಗ ಬೇಡರು, ವಾಲ್ಮೀಕಿ ಮತ್ತು ನಾಯಕ ಜನಾಂಗದವರು ಏನೋ ಇದ್ದಾರೆ, ಈ ಪೈಕಿ ನಾಯಕರು ಚಿತ್ರದುರ್ಗದ ಜಿಲ್ಲೆಯಿಂದ ಸರ್ಟಿಫಿಕೇಟ್ ತಂದಾಗ ಎಸ್. ಟಿ. ಆಗುತ್ತಾರೆ. ಇದೇ ಜನಾಂಗದವರು ಬಳ್ಳಾರಿ ಜಿಲ್ಲೆಯಿಂದ ಸರ್ಟಿಫಿಕೇಟ್ ತಂದಾಗ ಬಿ. ಟಿ. ಆಗುತ್ತಾರೆ. ಈ ಒಂದು ತಾರತಮ್ಯವನ್ನು ಸರ್ಕಾರ ಆಲೋಚಿಸಿ ಸರಿಪಡಿಸಬೇಕೆಂದು ಹೇಳುತ್ತೇನೆ. ಬೇಡರು, ನಾಯಕರು, ಮತ್ತು ವಾಲ್ಮೀಕಿ ಜನಾಂಗದವರೆಲ್ಲರನ್ನು ನಾಯಕರು ಎಂದು ತೀರ್ಮಾನ ಮಾಡಿ ಎಸ್. ಟಿ. ಗೆ. ಸೇರಿಸುವುದು ಸೂಕ್ತವೆಂದು ನಾನಾದರೂ ಸೂಚಿಸುತ್ತೇನೆ. ಏಕೆಂದರೆ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಬಗ್ಗೆ ಕಾಲೇಜಿನ ವಿದ್ಯಾರ್ಥಿಗಳು ನಮ್ಮೊಡನೆ ಘೇರಾವ್ ಮಾಡಿದ್ದಾರೆ. ಆದ್ದರಿಂದ ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನು ತುಂಗಭದ್ರಾ ಬೋರ್ಡನ್ನು ಸರ್ಕಾರ ರದ್ದು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಆದ್ದರಿಂದ ಅನೇಕರಿಗೆ ತೊಂದರೆಯಾಗಿದೆ. ನಾವೇನಾದರೂ ಲಿಫ್ಟ್ ಇರಿಗೇಷನ್ ಮಾಡಬೇಕೆಂದರೆ ಈ ಬೋರ್ಡಿನವರ ಅನುಮತಿ ಬೇಕು. ಅಲ್ಲಿ ಆಂಧ್ರದವರು ಇರುವುದರಿಂದ ಅನುಮತಿ ಸಿಕ್ಕುವುದು ಬಹಳ ಕಷ್ಟವಾಗಿದೆ. ಏಕೆಂದರೆ ನಮ್ಮ ಭಾಗ ಸಂಪೂರ್ಣ ಅಭಿವೃದ್ಧಿ ಆದಲ್ಲಿ ಬೋರ್ಡಿನವರ ಅವಶ್ಯಕತೆ ಇಲ್ಲ ನೀರನ್ನು ಕೊಡಬೇಕಾದ ಪ್ರಮಾಣದಲ್ಲಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಮತ್ತು ಬೋರ್ಡನ್ನು ರದ್ದು ಮಾಡುವುದು ಬಹಳ ಒಳ್ಳೆಯದು. ಸರ್ಕಾರ ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕೆಂದ

ಸೂಚಿಸುತ್ತೇನೆ. ಇಷ್ಟು ಹೇಳಿ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದೊಡ್ಡ ಬೋರೆಗೌಡ (ಮಂಡ್ಯ).--ಅಧ್ಯಕ್ಷರೇ, 1984-85 ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಈ ಸದನದ ಮತ್ತು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಆ ಕಡೆ ಇರತಕ್ಕಂಥ ಸ್ನೇಹಿತರು ಹೃದಯ ಬಿಚ್ಚಿ ಮಾತನಾಡಿದ್ದಾರೆ. ಈ ರಾಜ್ಯದಲ್ಲಿರತಕ್ಕ ಜನರು ಅನೇಕ ಬಡತನ ಮತ್ತು ಕಷ್ಟ ಕಾರ್ಪಣ್ಯಗಳಲ್ಲಿ ತಲ್ಲೀನರಾಗಿದ್ದಾರೆ. ಸರ್ಕಾರ ಇದರ ಬಗ್ಗೆ ಅನುಕಂಪ ವ್ಯಕ್ತಪಡಿಸಬೇಕೆಂದು ಹೇಳಿದ್ದಾರೆ. ಅಲ್ಲದೆ ದುರಾಡಳಿತ ನಡೆಸಿ ನಾವು ರಾಜ್ಯದ ಆಡಳಿತವನ್ನು ಕಳೆದುಕೊಂಡಿದ್ದೇವೆ ಎಂದು ಮತ್ತೆ ಚುಚ್ಚಿ ಚುಚ್ಚಿ ಹೇಳಬಾರದೆಂದು ಹೇಳಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಅವರು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಆದುದರಿಂದ ಈ ಕಡೆಯವರು ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಬೇಕಾದ್ದು ನಮ್ಮೆಲ್ಲರ ಕರ್ತವ್ಯ ಮತ್ತು ಸೌಜನ್ಯತೆ. ಅವರು ಅಧಿಕಾರವನ್ನು ಕಳೆದುಕೊಂಡು ಕಷ್ಟದಲ್ಲಿರುವಾಗ ಮತ್ತೆ ಮತ್ತೆ ಚುಚ್ಚಿ ಮಾತನಾಡುವುದು ಮಾನವರಿಗೆ ಭೂಷಣವಲ್ಲ. ಮೊನ್ನೆ ತಾನೇ 11 ನೇ ತಾರೀಖು ಪ್ರಧಾನಿಯವರು ಇಲ್ಲಿಗೆ ಭೇಟಿ ಕೊಟ್ಟಾಗ ಆಡಂಬರದ ಜೀವನವನ್ನು ಬದಿಗೆ ಒತ್ತಿ ಗ್ರಾಮಾಂತರ ಪ್ರದೇಶದ ಮತದಾರರ ಮನವೊಲಿಸಿ ಗ್ರಾಮಾಂತರ ಜನರ ಕಷ್ಟದಲ್ಲಿ ಭಾಗಿಯಾಗಿ. ಎಂದು ಹೇಳಿದ್ದಾರೆ. ಪಕ್ಷೇತರ ಸದಸ್ಯರಾಗಿ 45 ವರ್ಷಗಳ ಕಾಲ ಶಾಸನ ಸಭೆ ಸದಸ್ಯತ್ವವನ್ನು ಹೊಂದಿರುವ ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರು ಯಾವ ಕಾರಣಕ್ಕೆ ಮನನೊಂದು ಆ ಕಡೆ ಹೋದರೋ ನನಗೆ ಗೊತ್ತಾಗಲಿಲ್ಲ. ಬಹುಶ: 1938-42ರ ಮೈಸೂರು ಚಳುವಳಿಯಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನನ್ನ ಸಹೋದ್ಯೋಗಿಗಳಲ್ಲಿ ಇವತ್ತು ಯಾರೂ ನನಗೆ ಶಾಸನ ಸಭೆಯಲ್ಲಿ ಮಾನ್ಯ ಹುಚ್ಚಮಾಸ್ತಿ ಗೌಡರನ್ನು ಬಿಟ್ಟರೆ ಮತ್ತೆ ಯಾರೂ ಕಾಣುತ್ತಾ ಇಲ್ಲ. ಸ್ವತಂತ್ರವಾಗಿ ಆರಿಸಿ ಬಂದ ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರನ್ನು ಬಿಟ್ಟರೆ ಈ ದೇಶದ ಸ್ವಾತಂತ್ರ್ಯದ ಬಗ್ಗೆಯಾಗಲೀ, ಅಥವಾ ಸ್ವಾತಂತ್ರ್ಯದ ಉಳಿಯುವಿಕೆಯ ಬಗ್ಗೆಯಾಗಲೀ ಅನುಕಂಪ ಇರತಕ್ಕ ಸದಸ್ಯ ಸಹೋದ್ಯೋಗಿಗಳು ಇಲ್ಲಿ ನೆರೆದಿದ್ದಾರೆಯೇ ?

ಶ್ರೀ ಮಲ್ಲಾರಿಗೌಡ ಪಾಟೀಲ್.—ಈ ರೀತಿ ಹೇಳಿದರೆ ಹೇಗೆ ಸ್ವಾಮಿ ? ಸ್ವಾಮಿ, ನಮಗೇನೂ ಅನುಕಂಪ ಇಲ್ಲವೇ ? ಆ ರೀತಿ ಅವರು ಮಾತನಾಡುವುದು ಸರಿಯಲ್ಲ. ಅವರೊಬ್ಬರೇ ದೇಶಪ್ರೇಮಿಗಳಲ್ಲ.

ಶ್ರೀ ಪಂಪಾಪತಿ.--ಅವರ ಬಗ್ಗೆ ಅವರು ಹೇಳಿಕೊಳ್ಳಲಿ, ಬೇರೆಯವರ ಬಗ್ಗೆ ಅವರು ಏಕೆ ಹೇಳಬೇಕು ?

(ಗೊಂದಲ)

ಶ್ರೀ ಮಲ್ಲಾರಿಗೌಡ ಪಾಟೀಲ್.--ಅವರು ಹೇಳಿದ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಲಿ.

ಶ್ರೀ ದೊಡ್ಡ ಬೋರೇಗೌಡ.--ದಯಮಾಡಿ ನೀವು ಕ್ಷಮಿಸಬೇಕು. ಮಾನ್ಯ ಪಂಪಾಪತಿಯವರು ತಾಳ್ಮೆಯಿಂದ ಇರಲಿ.

ಉಪಸಭಾಪತಿಯವರು.--ತಮ್ಮ ವೇಳೆ ಮುಗಿಯುತ್ತಾ ಬಂದಿದೆ. ತಾವು ಬಜೆಟ್ ಮೇಲೆ ಮಾತನಾಡಿ ಸ್ವಾಮಿ

ಶ್ರೀ ದೊಡ್ಡ ಬೋರೇಗೌಡ.--ಅಧ್ಯಕ್ಷರೇ, ಈಗಾಗಲೇ ಕಷ್ಟ ಕಾರ್ಪಣ್ಯಗಳಿಂದ ಕೂಡಿದಂತಹ ಜನ ಗ್ರಾಮಗಳಲ್ಲಿ, ನಗರಗಳಲ್ಲಿ, ದೊಡ್ಡ ದೊಡ್ಡ ಶಹರ್‌ಗಳಲ್ಲಿ ಇದ್ದಾರೆ. ಕಳೆದ 36 ವರ್ಷಗಳಿಂದ ಸರ್ಕಾರ ನಡೆದುಕೊಂಡು ಬಂದಿರುವ ವೈಶಿಷ್ಟ್ಯ ಇದು. ಯಾವ ಒಂದು ವ್ಯವಸ್ಥಿತವಾದ ರೂಪರೇಖೆಗಳನ್ನು ಅಳವಡಿಸದೇ ಸರ್ಕಾರಕ್ಕೆ ಬೆಂಬಲ ಕೊಟ್ಟು ಹಣವನ್ನು ಅನೇಕ ರೀತಿಯಲ್ಲಿ ದುರುಪಯೋಗ ಮಾಡಿಕೊಂಡು ಬಂದಿರುವ ನಿದರ್ಶನಗಳು ಬೇಕಾದಷ್ಟು ಇವೆ. ಈ ಸರ್ಕಾರ 13 ತಿಂಗಳಲ್ಲಿ ಚರಿತ್ರಾರ್ಹ ಕಾರ್ಯಗಳನ್ನು ಕಾರ್ಯರೂಪಕ್ಕೆ ತರುವುದರ ಜೊತೆಗೆ ಕೃಷಿ ಕಾರ್ಮಿಕರ ಮತ್ತು ಕಾರ್ಮಿಕರ ಬಗ್ಗೆ, ವ್ಯವಸಾಯಗಾರರ ಹಾಗೂ ಸರ್ಕಾರಿ ನೌಕರರ ಬಗ್ಗೆ ಹೆಚ್ಚು ಅನುಕಂಪವನ್ನು ತೋರಿಸಿ, ಆಯವ್ಯಯ ಪಟ್ಟಿಯಲ್ಲಿ ಸುಮಾರು 21 ತೆರಿಗೆಗಳನ್ನು ಕಡಿತ ಮಾಡಿದೆ. ಈ ರಾಜ್ಯದ 36 ವರ್ಷಗಳ ಇತಿಹಾಸದಲ್ಲಿ ಇದು ಮೊದಲನೆಯ ಒಂದು ವ್ಯವಸ್ಥೆ. ಈ ವಿಷಯದ ಬಗ್ಗೆ ನಮ್ಮ ಸಹೋದ್ಯೋಗಿ ಮಿತ್ರರು ಒಂದು ಪದವನ್ನಾದರೂ ಹೇಳಬಹುದಿತ್ತಲ್ಲವೇ ? ನೀರಾವರಿಗೆ ಕೊಡತಕ್ಕ ವಿಶ್ವ ಬ್ಯಾಂಕಿನ ಹಣದಲ್ಲಿ ಕೇಂದ್ರ ಸರ್ಕಾರ 40 ಪರ್ಸೆಂಟ್‌ನ್ನು ಕಡಿಮೆ ಮಾಡಿ ಕೇವಲ 60 ಪರ್ಸೆಂಟ್‌ನ್ನು ಮಂಜೂರು ಮಾಡಿದೆ. ಹಾಗೇ ವಿಶ್ವಬ್ಯಾಂಕಿನಿಂದ ಬರತಕ್ಕ ಧನಸಹಾಯದಲ್ಲೂ ಕೇಂದ್ರ ಸರ್ಕಾರ 40 ಭಾಗವನ್ನು ಕಡಿಮೆ ಮಾಡಿ 60 ಭಾಗವನ್ನು ಕೊಡುವುದಾದರೆ

ಈ ರಾಜ್ಯದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳು ಪ್ರಗತಿಪರದಲ್ಲಿ ಸಾಗಲು ಸಾಧ್ಯವಿದೆ ಎನ್ನುವ ಬಗ್ಗೆ ಈ ಸದನದಲ್ಲಿ ಸರ್ಕಾರ ಮತ್ತು ಆತ್ಮೀಯ ಸ್ನೇಹಿತರು ವಿಚಾರ ಮಾಡಬೇಕಾಗಿದೆ. 14ನೇ ಅಕ್ಟೋಬರ್, 1971ರಲ್ಲಿ ವಿಜಯನಗರ ಉಕ್ಕು ಕಾರ್ಖಾನೆಗೆ ಶಂಕುಸ್ಥಾಪನೆ ಮಾಡಿ ಸುಮಾರು ಏಳೂವರೆ ಸಾವಿರ ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಅಲ್ಲಿ ಈಗಾಗಲೇ 17 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದರ ಒಂದು ಪ್ರಗತಿ ಎಲ್ಲಿಯವರೆಗೆ ಆಗಿದೆ ? ಆ ಬಗ್ಗೆ ನಮ್ಮ ಸಹೋದ್ಯೋಗಿಗಳು ಹಿತ ಚಿಂತನೆ ಏತಕ್ಕೆ ಮಾಡಿಲ್ಲ. ಇಷ್ಟು ದಿನ, ಸರ್ಕಾರ ನಡೆಸಿಕೊಂಡು ಬಂದ ಅವರು ಈ ಬಗ್ಗೆ ಯಾವ ಕಾರ್ಯಕ್ರಮವನ್ನೂ ಏತಕ್ಕೆ ತೆಗೆದುಕೊಳ್ಳಲಿಲ್ಲ ? ಇವತ್ತು ನಮಗೆ ಉಕ್ಕಿನ ಕಾರ್ಖಾನೆಯಿಂದ ಲಕ್ಷಾಂತರ ಜನ ನಿರುದ್ಯೋಗಿಗಳಿಗೆ ಕೆಲಸ ಸಿಗುತ್ತದೆ, ಆದ್ದರಿಂದ ಈ ಬಗ್ಗೆ ಕೇಂದ್ರದ ಮೇಲೆ ಪ್ರಭಾವ ಬೀರುವ ಬಗ್ಗೆ ನಮ್ಮ ಸಹೋದ್ಯೋಗಿಗಳು ಏನೂ ಚಕಾರ ಎತ್ತಲಿಲ್ಲ. 14 ವರ್ಷಗಳಿಂದ ಈ ಬಗ್ಗೆ ಏನು ಮಾಡುತ್ತಿದ್ದೀರಿ ? 87 ಕೋಟಿ ರೂಪಾಯಿ ತೆರಿಗೆ ಹಾಕಿರುವುದರ ಬಗ್ಗೆ ಟೀಕೆ ಮಾಡಿದರು. ಇನ್ನು 3 ದಿವಸಗಳಲ್ಲಿ ಕೇಂದ್ರದ ಆಯವ್ಯಯ ಪಟ್ಟಿ ಬಿಡುಗಡೆಯಾಗುತ್ತದೆ. ಈಗಾಗಲೇ ಹಲವಾರು ಹಣಕಾಸಿನ ತಜ್ಞರು ಸುಮಾರು 1550 ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆ ಬರಬಹುದೆಂದು ಹೇಳಿದ್ದಾರೆ. ಈ ತೆರಿಗೆ ನಮ್ಮೆಲ್ಲರ ಮೇಲೆ ಬೀಳುವುದಿಲ್ಲವೇ ? ಈ ರಾಷ್ಟ್ರದ 74 ಕೋಟಿ ಜನ ಈ ದುಃಖದುಮ್ಮಾನುಗಳನ್ನು ಅನುಭವಿಸಬೇಕಾಗುತ್ತದೆ. ಪ್ರತಿ ವರ್ಷ 1500 ಕೋಟಿ ರೂಪಾಯಿಯು ತೆರಿಗೆ ಹಾಕುವ ಒಂದು ಪದ್ಧತಿ ಈ ರಾಷ್ಟ್ರಕ್ಕೆ ಬಂದಿತಲ್ಲಾ ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಒಂದು ಕಡೆ ಮಹಾ ವಿಜ್ಞಾನಿ ಕಾರ್ಲ್‌ಮಾರ್ಕ್ಸ್ "ಆಧುನಿಕ ಕಾಲದಲ್ಲಿ ಜನತೆಯ ಕೈ ಸೇರುವ ರಾಷ್ಟ್ರೀಯ ಸಂಪತ್ತು ರಾಷ್ಟ್ರೀಯ ಸಾಲ ಮಾತ್ರ" ಎಂದು ಹೇಳಿದ್ದಾರೆ. ಇವತ್ತಿನ ದಿನಸ ರಾಷ್ಟ್ರದ ಜನತೆ ಮೇಲೆ ಭಾರಿ ಪ್ರಮಾಣದ ಸಾಲವನ್ನು ಹೊರಿಸಿದೆ. ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ "ರಾಜಕೀಯ ಮುಖಂಡರು ಮಾಡುವ ಕಾರ್ಯವನ್ನು ಸಾಮಾನ್ಯ ಜನ ಮಾಡುವುದಾದರೆ ಅದಕ್ಕಿಂತರ ನಾಚಿಕೆಗೇಡಿನ ತನ ಇಲ್ಲ" ಎಂದು ಕೌಟಿಲ್ಯ ಹೇಳಿದ್ದಾನೆ. ಬೆಳಿಗ್ಗೆ ಮಾನ್ಯ ಶಾಸಕರಾದ ರಂಗನಾಥ್ ಅವರು ಸಹಕಾರಿ ಸಂಘಗಳ ಬಗ್ಗೆ ಮಾತನಾಡುವಾಗ 20ನೇ ಕಲಂ ಕೆಳಗೆ ಜೈಲಿಗೆ ಹಾಕುವ ವ್ಯವಸ್ಥೆಯನ್ನು ಮಾಡಿದ್ದೀರಿ ಎಂದು ಹೇಳಿದರು. ಇವತ್ತು ದೇಶದ ಸಂಪತ್ತು ಲೂಟಿಯಾಗುತ್ತಿದೆ. ಸಹಕಾರಿ ಹೆಸರಿನಲ್ಲಿ ದೇಶದ ಸಂಪತ್ತನ್ನು ಲೂಟಿ ಮಾಡಿ, ಅವ್ಯವಹಾರ ಮಾಡಿ, ಗೊಂದಲ ಮಾಡಿ ದೇಶದ ಜನರಿಗೆ ಅನ್ಯಾಯ ಮಾಡುವವರಿಗೆ ಕಾರಾಗೃಹ ತೋರಿಸುವುದು ಬೇಡವೇ ? ಇವತ್ತು ಯಾವ ದೇಶದಲ್ಲಿ ಯಾವ ಪಕ್ಷ ಅಧಿಕಾರದಲ್ಲಿ ಇರಲಿ, ಅದು ಮಾಡುವ ಕಾನೂನು ಶಾಶ್ವತವಾಗಿ ಇರಬೇಕಾಗುತ್ತದೆ. ನಾವು ಮಾಡುವ ಕಾರ್ಯ ಶಾಶ್ವತವಾಗಿ ಈ ರಾಜ್ಯದ ಹಾಗೂ ಈ ರಾಷ್ಟ್ರದ ಜನತೆಯ ಕೈಸೇರಬೇಕು. ಈಗ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. 1966ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಮ್ಮ ನೆಚ್ಚಿನ ಪ್ರಧಾನಿಯವರು ಆಯ್ಕೆಯಾದಾಗ ನಮ್ಮ ದೇಶದಲ್ಲಿ ಶೇಕಡಾ 13 ರಷ್ಟು ಜನ ಬಡತನದ ರೇಖೆಯ ಕೆಳಗೆ ಇದ್ದರು. 1969ರಲ್ಲಿ ಕಾಂಗ್ರೆಸ್ ವಿಭಜನೆಯಾ 1971ರಲ್ಲಿ ಚುನಾವಣೆಯಾದಾಗ ನಮ್ಮ ದೇಶದಲ್ಲಿ ಶೇಕಡಾ 21ರಷ್ಟು ಜನ ಬಡತನದ ರೇಖೆಯ ಕೆಳಗೆ ಇದ್ದರು. ಮೊನ್ನೆ ಲೋಕಸಭೆಯಲ್ಲಿ ಚರ್ಚೆಯಾಗುವ ಕಾಲದಲ್ಲಿ ಈ ದೇಶದಲ್ಲಿ ಶೇಕಡಾ 53ರಷ್ಟು ಜನ ಬಡತನದ ರೇಖೆಯ ಕೆಳಗೆ ಇದ್ದಾರೆಂದು ತಿಳಿಸಲಾಗಿದೆ. ಇದು ದೇಶದ ಪ್ರಗತಿಯೇ ? ಇವತ್ತು ನಾಲ್ಕು ಕೋಟಿ ಜನತೆ ನಮ್ಮನ್ನು ಮತ್ತು ನಿಮ್ಮನ್ನು ಆರಿಸಿ ಕಳುಹಿಸಿದೆ. ಅವರ ಒಂದು ಶ್ರೇಯಸ್ಸಿಗಾಗಿ ನಾವು ಕೆಲಸ ಮಾಡೋಣ. ಇವತ್ತಿನ ದಿವಸ ಯಾರು ಬಡತನದ ರೇಖೆಗಿಂತಾ ಅಡಿಯಲ್ಲಿದ್ದಾರೆ ಅವರನ್ನು ಮೇಲೆ ಎತ್ತುವುದು ನಮ್ಮ ಆದ್ಯ ಕರ್ತವ್ಯ. ಆ ಬಗ್ಗೆ ನಾವು ಮಾರ್ಗದರ್ಶಕರಾಗಿ ಕೆಲಸ ಮಾಡೋಣ. ನಾವು ಶಾಸಕರಾಗಿ ಯಾವ ಪಕ್ಷದಲ್ಲಿಯೇ ಇರಲಿ ಆ ಬಗ್ಗೆ ನಾವು ದುಡಿಯಬೇಕಾಗುತ್ತದೆ. ಇವತ್ತು ನಾವು ಶಾಸಕರಾಗಿರಬಹುದು, ಆದರೆ ಈ ಹುದ್ದೆ ನಮಗೆ ಶಾಶ್ವತವಲ್ಲ. ನಾವು ನಶ್ವರರು. ಇದು ಅನಿರೀಕ್ಷಿತವಾಗಿ ಬಂದಿರತಕ್ಕ ಒಂದು ವ್ಯವಸ್ಥೆ. ಕರ್ನಾಟಕ ರಾಜ್ಯದ 4 ಕೋಟಿ ಜನರ ಹಿತರಕ್ಷಣೆ ಮಾಡುವ ಹೊಣೆಗಾರಿಕೆಯನ್ನು ಅಳವಡಿಸಿಕೊಂಡು ಕೆಲಸ ಮಾಡುವುದು ನಮ್ಮ ಕರ್ತವ್ಯ. ಈ ಬಗ್ಗೆ ಹಿತಚಿಂತನೆ ಆಗಬೇಕೇ ವಿನಹ, ನಮ್ಮ ವಿರೋಧ ಪಕ್ಷದ ನಾಯಕರು 5 ನಿಮಿಷಗಳ ಮೊದಲು ಒಂದು ಮಾತನ್ನು ಹೇಳಿದರು. ಸರ್ಕಾರಿ ನೌಕರರ ಪದಾಧಿಕಾರಿಗಳಿಗೆ ಮುಖ್ಯಮಂತ್ರಿ, ಹಾಗೂ ಇತರ ಮಂತ್ರಿಯವರನ್ನು ನೋಡಲು ಅವಕಾಶ ಕೊಡಲಿಲ್ಲವೆಂದು ಹೇಳಿದರು. ಈ ಬಗ್ಗೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ಈ ದಿನ ಸುಮಾರು ಶೇಕಡಾ 1.03ರಷ್ಟು ಜನ ಸರ್ಕಾರಿ ನೌಕರಿಯಲ್ಲಿ ಇದ್ದಾರೆ. ಈಗಾಗಲೇ ಅವರಿಗೆ ಆಯವ್ಯಯದಲ್ಲಿ ತೊಡಗಿಸಿರತಕ್ಕ ಹಣದಲ್ಲಿ ಶೇಕಡಾ 33ರಷ್ಟು ಪಾಲು ಅವರಿಗೆ ಹೋಗುತ್ತಿದೆ. ಬಹುಶಃ ಏನು 53 ಸಾವಿರ ಹುದ್ದೆಗಳನ್ನು ತುಂಬಬೇಕು ಎಂದು ಇದ್ದಾರೆ, ಆ ಒಂದು ಜನರನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಸುಮಾರು ಶೇಕಡಾ 39ರಷ್ಟು ಭಾಗ ಅವರ ಒಂದು ಸಂಬಳಸಾರಿಗೆಗಳಿಗೇ ಹೋಗುತ್ತದೆ. ಈ 3 ಲಕ್ಷ ಜನರ ಹಿತ

ರಕ್ಷಣೆ ಮಾಡುವುದಕ್ಕೆ ಈ ವ್ಯವಸ್ಥೆಯನ್ನು ಮಾಡಲಾಗಿದೆಯೇ ? ಗ್ರಾಮಾಂತರ ಪ್ರದೇಶದ ಮುಗ್ಧ ಜನರ ಹಿತರಕ್ಷಣೆಯನ್ನು ನಾವು ಮಾಡಬೇಕಾಗುತ್ತದೆ ಗ್ರಾಮಾಂತರ ಪ್ರದೇಶದ ಜನರ ಕುಡಿಯುವ ನೀರಿನ ಸೌಲಭ್ಯದ ಬಗ್ಗೆ ಕಳೆದ 11 ವರ್ಷಗಳಲ್ಲಿ ಹಿಂದಿನ ಸರ್ಕಾರ 11 ಸಾವಿರ ಕೊಳವೇ ಬಾವಿಗಳನ್ನು ತೋಡಿಸಿದ್ದಾರೆ ನನ್ನ ಸರ್ಕಾರ 4 ತಿಂಗಳಲ್ಲಿ 16 ಸಾವಿರ ಕೊಳವೆ ಬಾವಿಗಳನ್ನು ಒಂದು ವರ್ಷದಲ್ಲಿ ತೋಡಿಸಿಕೊಟ್ಟು ಅವರ ಹಿತರಕ್ಷಣೆ ಮಾಡಿಲ್ಲವೇ ? ಈ ಬಗ್ಗೆ ತಮ್ಮ ಅನುಕಂಪ ಇಲ್ಲವೇ ? ಈ ಎಲ್ಲಾ ಕಾರ್ಯಗಳನ್ನೂ ಸವಿಸ್ತಾರವಾಗಿ ಮನಗಂಡು, ರಾಜ್ಯದ ಹಿತಕ್ಕೆ ಧಕ್ಕೆಯಾಗಿರುವಾಗ, ರಾಜ್ಯದ ಪುರೋಭಿವೃದ್ಧಿಯ ಬಗ್ಗೆ ಗಮನಕೊಡಬೇಕು. ಇವತ್ತು ಲಕ್ಷೋಪಲಕ್ಷ ವಿದ್ಯಾವಂತರು, ಅವಿದ್ಯಾವಂತರು ಉದ್ಯೋಗವಿಲ್ಲದೆ, ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಇವರ ಬಗ್ಗೆಯೂ ಕೂಡ ನಾವು ಹಿತಚಿಂತಕರಾಗಿ ಕೆಲಸಮಾಡಬೇಕಾಗಿದೆ. ಈ ಎಲ್ಲಾ ಸದಸ್ಯರು ಈ ವ್ಯಾಪ್ತಿಯಲ್ಲಿ ಕಾರ್ಯೋನ್ಮುಖರಾಗಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಅಧ್ಯಕ್ಷರೇ, ...

ಉಪಾಧ್ಯಕ್ಷರು.— ಕೊನೆಯದಾಗಿ ಎಂದು ಹೇಳಿ, ಎರಡನೆಯದಾಗಿ ಅಲ್ಲ.

ಶ್ರೀ ದೊಡ್ಡ ಬೋರೇಗೌಡ.—ಜನತಾ ಸರ್ಕಾರದ ಹೊಣೆಗಾರಿಕೆ ಹೊತ್ತ ಮಂತ್ರಿಗಳು ಮೊನ್ನೆ ತಾನೆ ಉಪಾಧ್ಯಾಯರ ನೇಮಕಾತಿ ಸಮಿತಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಅರಿತು, ಅದನ್ನು ನಿವಾರಣೆ ಮಾಡುವುದಕ್ಕೆ ಸದರಿ ನೇಮಕಾತಿ ಸಮಿತಿಗಳನ್ನೇ ರದ್ದುಪಡಿಸಿದ್ದಾರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಮೊನ್ನೆ ತಾನೆ ನಡೆದ ಪತ್ರಿಕಾಕರ್ತರಾದ ಶ್ರೀ ಸಿದ್ಧರಾಮೇಶ್ ಅವರ ಕೊಲೆ ಪ್ರಕರಣವನ್ನು ಸಿ. ಬಿ. ಐ. ವ್ಯಾಪ್ತಿಗೆ ಒಳಪಡಿಸಿದ್ದಾರೆ ಬಳ್ಳಾರಿ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಒಪ್ಪಿಸಿದ್ದಾರೆ. ಈ 13 ತಿಂಗಳಲ್ಲಿ ಏನಾದರೂ ಘಟನೆ ಆಗಿದ್ದರೆ, ನಮ್ಮ ಸರ್ಕಾರದವರು ವಿರೋಧಪಕ್ಷದವರು ಹೇಳುವುದಕ್ಕಿಂತ ಮುಂಚೆಯೇ ನ್ಯಾಯಾಂಗ ವಿಚಾರಣೆ, ಆಯೋಗ ಅಥವಾ ಸಿ. ಬಿ. ಐ. ತನಿಖೆಗೆ ಒಳಪಡಿಸಿದ್ದಾರೆ. ಶ್ರೀ ಸಿ. ಬೈರೇಗೌಡರಿಗೂ ವಿರೋಧಪಕ್ಷದವರಿಗೂ ಏನು ವ್ಯವಹಾರ ನಡೆಯಿತು ಅದನ್ನೂ ಕೂಡ ನ್ಯಾಯಾಂಗ ವಿಚಾರಣೆಗೆ ಒಪ್ಪಿಸಿದ್ದಾರೆ.

ಶ್ರೀ ಎಂ ಮಹದೇವ್.—ಕೋಟೆಯೆಲ್ಲಾ ಸೂರೆಯಾದ ಮೇಲೆ ಗೇಟ್ ಬಾಗಿಲು ಹಾಕಿದರು ಎನ್ನುವ ತರಹ ಮಾಡಿದ್ದಾರೆ.

ಶ್ರೀ ದೊಡ್ಡ ಬೋರೇಗೌಡ.—ಪವಿತ್ರವಾದ ಕ್ಷೇತ್ರವನ್ನು ಎತಕ್ಕೆ ಕಲುಷಿತವಾಗಿ ಮಾಡುತ್ತೀರಿ ?

ಶ್ರೀ ಎಂ. ಮಹದೇವ್.—ನೀವು ಕಲುಷಿತ ಮಾಡಿದ್ದನ್ನು, ನಾವು ಶುದ್ಧ ಮಾಡುತ್ತಿದ್ದೇವೆ.

ಶ್ರೀ ದೊಡ್ಡ ಬೋರೇಗೌಡ.—ಅಧ್ಯಕ್ಷರೇ ಹಿಂದೆ ನಾನು ವೃತ್ತಪತ್ರಿಕೆಗಳಲ್ಲಿ ನೋಡುತ್ತಿದ್ದೆ. ಹಿಂದಿನ ಸರ್ಕಾರ ಇದ್ದಾಗ ರಾಜ್ಯದಲ್ಲಿ ಎಷ್ಟೋ ಅಹಿತಕರ ಘಟನೆಗಳು ನಡೆದಿರುವುದನ್ನು ನಾವು ನೋಡಿದ್ದೇವೆ. ಇಂತಹ ಘಟನೆಗಳ ಬಗ್ಗೆ ಸರ್ಕಾರ ವಿಚಾರಣೆ ನಡೆಸಬೇಕು ಎಂದು ವಿರೋಧಪಕ್ಷದ ನಾಯಕರು ಎಷ್ಟೇ ಒತ್ತಾಯ ಮಾಡಿದರೂ ಕೂಡ ಆಗಿನ ಸರ್ಕಾರ ವಿಚಾರಣೆ ನಡೆಸಲು ತಯಾರಿರಲಿಲ್ಲ. ಈ ಬಗ್ಗೆ ಅವರ ಹೃದಯ ಎಷ್ಟು ಕಠಿಣವಾಗಿತ್ತು ಎಂಬುದನ್ನು ವರ್ಣನೆ ಮಾಡುವುದಕ್ಕೆ ಸಾಧ್ಯವಿಲ್ಲ. ಅನೇಕಸಾರಿ ಇದಕ್ಕಾಗಿ ವಿರೋಧಪಕ್ಷದವರು ವಾಕ ಔಟ್ ಮಾಡಿದ್ದಾರೆ, ಉಪವಾಸಮಾಡಿದ್ದಾರೆ ಆದರೂ ಕೂಡ ಸರ್ಕಾರದವರು ನೇರವಾಗಿ ಮುಂದೆ ಬಂದು ವಿಚಾರಣೆ ಮಾಡುತ್ತೇವೆ, ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಲಿಲ್ಲ. ಇವತ್ತು ಪ್ರಜಾಪ್ರಭುತ್ವದ ಬಗ್ಗೆ, ದೀನದಲಿತರ ಬಗ್ಗೆ ಅನುಕಂಪ ಉಳ್ಳವರಾಗಿ, ಮೊಸಳೆ ಕಣ್ಣೀರು ಸುರಿಸಿದಂತೆ ನನ್ನ ಸಹದ್ಯೋಗಿ ಸ್ನೇಹಿತರು ಮಾತನಾಡುತ್ತಿದ್ದಾರೆ. ಅವರನ್ನು ಅಭಿನಂದಿಸಬೇಕಾಗಿದೆ. ಅವರು ಈಗ ಪುಕ್ಕ ಉದುರಿದ ನವಿಲಿನ ರೀತಿ ನಗಿದ್ದಾರೆ.

ಶ್ರೀ ಎಂ. ಮಹದೇವ್.—ಅವರು ಸತ್ಯಕ್ಕೆ ದೂರವಾದ ಮಾತನಾಡುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಎಷ್ಟೋ ಕಮಿಷನ್ ನೇಮಕ ಮಾಡಿದ್ದಾರೆ. ಬೇಕಾದರೆ ದಾಖಲೆಯನ್ನು ನೋಡಲಿ.

ಶ್ರೀ ದೊಡ್ಡ ಬೋರೇಗೌಡ.—ಕೊನೆಯದಾಗಿ, ಒಂದು ಮಾತನ್ನು ಹೇಳುತ್ತೇನೆ. ವಿರೋಧ ಪಕ್ಷದವರಿಗೆ ಈ ರಾಜ್ಯದ ಬಗ್ಗೆ ಹೆಚ್ಚಿನ ಆಸಕ್ತಿ ಇದ್ದರೆ ಸಹಕಾರ ಮಂತ್ರಿಗಳು ತಂದಿರುವ ಬಿಲ್ಲಿನ ಬಗ್ಗೆ ಬೆಂಬಲ ಕೊಡಲಿ. ಒಬ್ಬ ಮಂತ್ರಿಗೆ ಒಂದು ತಿಂಗಳಿಗೆ ಪೆಟ್ರೋಲ್‌ಗಾಗಿ ಬಹುಶಃ ಒಂದೂವರೆ ಸಾವಿರ ರೂಪಾಯಿ ಉಪಯೋಗಿಸಬಹುದು ಆದರೆ ನಮ್ಮೂರಲ್ಲಿ ಸಹಕಾರ ಸಂಘದ ಅಧ್ಯಕ್ಷರು ಒಂದು ತಿಂಗಳಿಗೆ 75 ಸಾವಿರ ರೂಪಾಯಿ ಪೆಟ್ರೋಲ್‌ಗೆ ಖರ್ಚು ಮಾಡಿದ್ದಾರೆ. ಅಂದರೆ ಇವರು ರಾಷ್ಟ್ರಪತಿಯವರಿಗಿಂತಲೂ ಮುಂದೆ ಹೋಗಿದ್ದಾರೆ ಇಂತಹ ಜನರಿಗೆ ಸಹಾಯ ಮಾಡಬೇಡಿ. ಈ ರಾಷ್ಟ್ರ ದುರ್ಬಲವಾಗಿದೆ. ಈಗಲೂ ಕಾಲ ಮಿಂಚಿಲ್ಲ ಇಂತಹ ಸಹಕಾರ ಸಂಘಗಳಿಗೆ ಸಹಾಯ ಮಾಡಬೇಡಿ ಕೋಟಿ ಕೋಟಿ ಜನ ನಮ್ಮಲ್ಲಿ ನಂಬಿಕೆ ಇಟ್ಟುಕೊಂಡು ಇಲ್ಲಿಗೆ ಕಳುಹಿಸಿದ್ದಾರೆ. ಕೇವಲ ಕೆಲವಾರು ಜನರ ಬೆಳೆ

ವಣಿಗೆಗಾಗಿ ನಮ್ಮನ್ನು ಕಳುಹಿಸಿಲ್ಲ. ಆದುದರಿಂದ ದಯಮಾಡಿ, ಈ ಬಿಲ್ಲಿಗೆ ಪೂರ್ಣ ಬೆಂಬಲ ನೀಡುವುದಕ ಜೊತೆಗೆ

ಶ್ರೀ ಎಂ. ಮಹದೇವ್.--ನಾವು ಸಹಕಾರಿಗಳಿಗೆ ಸಹಾಯ ಮಾಡುತ್ತೇವೆ. ಪಟ್ಟಭದ್ರ ಹಿತಾಸಕ್ತಿಗಳಿಗೆ ಸಹಾಯ ಮಾಡುವುದಿಲ್ಲ

ಶ್ರೀ ಬೋರೇಗೌಡ.--ಬುದ್ಧಿಜೀವಿ ಶಾಸಕರಾದ ಶ್ರೀ ರಂಗನಾಥ್ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.--ಆ ಬಿಲ್ಲು ಸೋಮವಾರ ಬರುತ್ತದೆ.

ಶ್ರೀ ಬೋರೇಗೌಡ.--ಸೋಮವಾರವೇ ಬರಲಿ. ಈ ಬಿಲ್ಲಿನ ಬಗ್ಗೆ ಮಾನ್ಯ ಶ್ರೀಕಂಠಯ್ಯನವರೂ ಕೂಡ ಬೆಂಬಲ ಕೊಡುತ್ತಾರೆ. ಅವರೂ ಕೂಡ ಕೃಷಿಕರ ಮಕ್ಕಳಾಗಿ ಬಂದಿದ್ದಾರೆ. ಎಲ್ಲರೂ ಕೃಷಿಕರ ಮಕ್ಕಳು, ಕಳೆದ 13 ತಿಂಗಳಲ್ಲಿ ಜನತಾ ಪಕ್ಷದ ಸರ್ಕಾರ ಚರಿತ್ರಾರ್ಹವಾದ ಕೆಲಸವನ್ನು ಮಾಡಿದೆ. ಇದರ ಬಗ್ಗೆ ಒಳ್ಳೆಯ ಮಾತನ್ನು ಹೇಳಿದರೆ ಮುಂದೆ ನಮ್ಮ ಬೆಳವಣಿಗೆಗೆ ಎಲ್ಲಿ ಧಕ್ಕೆಯಾಗುತ್ತದೋ ಎಂಬ ಅನಿಸಿಕೆ ಇವರಿಗೆ ಇದ್ದಂತೆ ಕಾಣುತ್ತದೆ. ನಾವು, ನೀವೆಲ್ಲಾ ಒಂದುಗೂಡಿ ಚುನಾವಣೆಗೆ ಹೋಗೋಣ. ಅಧಿಕಾರಕ್ಕೆ ಬೇಕಾದರೆ ನೀವೇ ಬನ್ನಿ. ನಾವು ವಿರೋಧಿಸುವುದಕ್ಕೆ ಹೋಗುವುದಿಲ್ಲ. ಆದರೆ ನಾವು ಮಾಡಿರುವ ಕಾರ್ಯಗಳು ಏನು ಎನ್ನುವುದನ್ನು ಸವಿಸ್ತಾರವಾಗಿ ಜನತೆಯ ಮುಂದಿಟ್ಟು ಚುನಾವಣೆಯಲ್ಲಿ ಗೆದ್ದು ಬರೋಣ. ಈ ಹಿಂದೆ ಜೀತ ಪದ್ಧತಿಯನ್ನು ಸರ್ಕಾರ ರದ್ದುಪಡಿಸಿದಾಗ ಎಲ್ಲಾ ಶಾಸಕರು ಮೇಜು ಕುಟ್ಟಿ ಸ್ವಾಗತಿಸಿದರು. ಈ ವಿಷಯ ನಮ್ಮ ಸಂಪಾಪತಿಯವರಿಗೂ ಗೊತ್ತಿದೆ. ನನಗೂ ಗೊತ್ತಿದೆ. ಸರ್ಕಾರಿ ಅಧಿಕಾರಿಗಳ ಮನೆಯಲ್ಲಿ 4ನೇ ದರ್ಜೆಯ ನೌಕರರು ಯಾವ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆಂಬುದನ್ನು ನೋಡಬೇಕು. ಮಾನವೀಯತೆ ದೃಷ್ಟಿಯಿಂದ ಅವರನ್ನು ಆ ಕೆಲಸದಿಂದ ಬಿಡುಗಡೆ ಮಾಡಬೇಕು. ಇವರು ಜೀತ ಪದ್ಧತಿ ವ್ಯಾಪ್ತಿಯಲ್ಲಿ ಬರುವುದಿಲ್ಲ. 4ನೇ ದರ್ಜೆ ನೌಕರರು ಏನು ಮಾಡುತ್ತಿದ್ದಾರೆ ಎಂಬುದನ್ನು ನನ್ನ ಜೊತೆ ಬಂದರೆ ತೋರಿಸುತ್ತೇವೆ. ಅದೇ ಹಳ್ಳಿಗಳ ಕಡೆ ಕೂಲಿ ಕೆಲಸಕ್ಕೆ ಬರುವವರು ಗಾಡಿ ಹೊಡೆಯುತ್ತಾರೆ, ಹುಲ್ಲು ತಂದು ಹಾಕುತ್ತಾರೆ. ಆದರೆ ಜಗಲಿ ಮೇಲಿನ ಕಸ ಗುಡಿಸುವುದಿಲ್ಲ. ಜೀತ ಪದ್ಧತಿಯಿಂದ ಜೀವನ ನಡೆಸುತ್ತಿರುವ ಲಕ್ಷೋಪಲಕ್ಷ ಜನರನ್ನು ಬಿಡುಗಡೆ ಮಾಡಬೇಕಾಗಿದೆ. ಇದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ನನ್ನ ಅನಿಸಿಕೆ. ಇದಕ್ಕೆ ನಿಮ್ಮೆಲ್ಲರ ಬೆಂಬಲ ಇದೆಯೆಂದು ಭಾವಿಸಿದ್ದೇನೆ.

ಇನ್ನು ಈಗ್ಗೆ 11 ವರ್ಷಗಳಿಂದ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮಾಡಿರಲಿಲ್ಲ. ಈಗ ನಾವು ಚುನಾವಣೆಗಳನ್ನು ಮಾಡಿದ್ದೇವೆ. ಆದರೆ ಅದರ ಬಗ್ಗೆ ವಿರೋಧ ಪಕ್ಷದವರು ಒಂದು ಒಳ್ಳೆಯ ಮಾತು ಹೇಳಲಿಲ್ಲ. ಕೇವಲ ಅಧಿಕಾರಿಗಳ ನಾಮಕರಣ ಮಾಡಿ ನೀವು ಆಡಳಿತ ನಡೆಸಿಕೊಂಡು ಬಂದಿದ್ದೀರಿ. ಅಲ್ಲಿ ಏನಾಗಿದೆ ಎನ್ನುವುದನ್ನು ವಿಚಾರ ಮಾಡಬೇಕು. ದಾವಣಗೆರೆ ನಗರಸಭೆ ಅಧಿಕಾರಿಗಳ ವ್ಯಾಪ್ತಿಯಲ್ಲಿದ್ದಾಗ ಯಾವ ಪ್ರಗತಿಯ ಹಾದಿಯಲ್ಲಿ ಮುನ್ನಡೆಯಿತು ಎಂಬುದನ್ನು ಸಂಪಾಪತಿಯವರು ಹೇಳಲಿ. ಅವರು ಹಿರಿಯರು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ದಾವಣಗೆರೆ ಮುನಿಸಿಪಾಲಿಟಿಯನ್ನು ಅವರಿಗೇ ವಹಿಸಿದ್ದೆವು.

ಶ್ರೀ ದೊಡ್ಡ ಬೋರೇಗೌಡ.—ಸಂಪಾಪತಿಯವರು ಅಧ್ಯಕ್ಷರಾಗಿದ್ದಾಗ ನಗರಸಭೆ ಯಾವ ರೀತಿ ಕಾರ್ಯೋನ್ಮುಖವಾಗಿ ಜನತೆಯ ಹಿತರಕ್ಷಣೆ ಮಾಡಿತ್ತು ಮತ್ತು ಸರ್ಕಾರಿ ಅಧಿಕಾರಿಗಳು ಇದ್ದಾಗ ಎಷ್ಟರಮಟ್ಟಿಗೆ ಫಲಪ್ರದವಾಗಿ ಕೆಲಸ ನಡೆದಿದೆ ಎಂಬುದನ್ನು ವಿಚಾರ ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.--ಸ್ವಾಮಿ, ನೀವು ಮಹೇಶ್ವರಪ್ಪನವರ ಮಾತು ಕೇಳಿ ಕೇಳಿ ಮಾತನಾಡಬೇಡಿ. ಸ್ವಂತ ವಿಚಾರ ಇದ್ದರೆ ಹೇಳಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.--ನೀವು ಮಂಡ್ಯ ಮತ್ತು ಪಾಂಡವಪುರದ ಬಗ್ಗೆ ಹೇಳಿ. ದಾವಣಗೆರೆ ವಿಷಯವನ್ನು ಏತಕ್ಕೆ ಹೇಳುತ್ತೀರಿ

ಶ್ರೀ ದೊಡ್ಡ ಬೋರೇಗೌಡ.--15 ಗೋಧಿ ಮಿಲ್ಲಿಗೆ ಅವಕಾಶ ಕೊಡುವುದರ ಬಗ್ಗೆ ....

ಉಪಾಧ್ಯಕ್ಷರು.--ಅದನ್ನು ಡಿಮ್ಯಾಂಡ್ ಬಂದಾಗ ಮಾತನಾಡಿ.

ಶ್ರೀ ದೊಡ್ಡ ಬೋರೇಗೌಡ.--ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 25ರಷ್ಟು ಮಹಿಳೆಯರು ಆರಿಸಿ ಬರುವುದಕ್ಕೆ ಅವಕಾಶ ಮಾಡಿದ್ದೇವೆ. ಇದನ್ನು ನೀವು ಸ್ವಾಗತ ಮಾಡಬೇಕಾಗಿತ್ತು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.--ಅಸೆಂಬ್ಲಿಗೆ ಅವಕಾಶ ಮಾಡಿಕೊಟ್ಟಿಲ್ಲ. ಪಂಚಾಯ್ತಿಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ಶ್ರೀ ದೊಡ್ಡ ಬೋರೇಗೌಡ.—ಇದಕ್ಕೆ ಕಾನೂನು ಬೇಕಾದರೆ ಮಾಡೋಣ.

ಶ್ರೀ ಎಂ. ಮಹದೇವ್.—ಒಬ್ಬ ಮಹಿಳೆಯನ್ನೂ ನಾಮಕರಣ ಮಾಡಿಲ್ಲ.

ಶ್ರೀ ಪಿ. ರಾಮ್‌ದೇವ್.—ಮಹಿಳೆಯರು......

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ರಾಮದೇವ್ ಅವರಿಗೆ ಮಹಿಳೆಯರ ಬಗ್ಗೆ ಮಾತನಾಡು ವುದಕ್ಕೆ ಹಕ್ಕೇ ಇಲ್ಲ.

ಶ್ರೀ ಪಿ. ರಾಮ್‌ದೇವ್.—ಮಹಿಳಾ ಮತದಾರರು ಇಲ್ಲವೇ ?

ಶ್ರೀ ದೊಡ್ಡ ಬೋರೇಗೌಡ.—ರಾಜ್ಯದಲ್ಲಿ ಇರತಕ್ಕ ಮತದಾರರಲ್ಲಿ ಶೇಕಡ 49 ಮಹಿಳೆಯರು ಹಾಗೂ ಶೇಕಡ 51 ರಷ್ಟು ಪುರುಷರು ಇದ್ದಾರೆ. ಇವರ ಬಗ್ಗೆ ಮಾನ್ಯ ಶ್ರೀಕಂಠಯ್ಯನವರು ಯೋಚನೆ ಮಾಡಬೇಕು. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ವನ್ನು ಮುಕ್ತಾಯ ಮಾಡುತ್ತೇನೆ, ಜೈಹಿಂದ್.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸ್ನೇಹಿತರಾ ದಂಥ ಮಾನ್ಯ ದೊಡ್ಡಬೋರೇಗೌಡರು ಮಾತನಾಡುತ್ತಾ ನಾನು ಸ್ವತಂತ್ರನಾಗಿ ಗೆದ್ದು ಇಲ್ಲಿ ಸ್ವಲ್ಪ ದಿವಸ ಇದ್ದು ಆ ಕಡೆ ಹೋದರು. ಎಂದು ಹೇಳಿದರು ಆ ತೀರ್ಮಾನವನ್ನು ತೆಗೆದುಕೊಂಡ ದಿವಸವೇ ಪತ್ರಿಕೆಯಲ್ಲಿ ಒಂದು ದೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದೇನೆ. ಮತ್ತೆ ಅವರಿಗೆ ಇನ್ನು ಏನಾದರೂ ವಿಚಾರ ಬೇಕಾಗಿದ್ದರೆ ಮಾನ್ಯದೊಡ್ಡ ಬೋರೇಗೌಡರ ಜೊತೆ ಮಾತನಾಡುತ್ತೇನೆ ಈ ಸಭೆಯಲ್ಲಿ ಹೇಳತಕ್ಕ ಅವಶ್ಯಕತೆ ಇಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ನಮ್ಮ ಮುಂದೆ ಮಂಡಿಸಿರತಕ್ಕ ವಿಷಯದ ಬಗ್ಗೆ ಅನೇಕ ಜನ ಸ್ನೇಹಿತರು ಈಗಾ ಗಲೇ ಮಾತನಾಡಿದ್ದಾರೆ. ನಮ್ಮ ಹೆಗಡೆಯವರ ನೇತೃತ್ವದಲ್ಲಿ ಬಂದಿರತಕ್ಕ ಸರ್ಕಾರಕ್ಕೆ ಒಂದು ದೊಡ್ಡ ಹಿನ್ನೆಲೆ ಇದೆ. ಜನತೆಯಿಂದ ಆರಿಸಿಬಂದಂಥ ಸದಸ್ಯರು ಜನತೆ ವಿಷಯದಲ್ಲಿ ತಮ್ಮ ಸಭ್ಯತೆಯನ್ನು ತೋರಿಸಿ ಕೊಡಬೇಕಾದುದು ಬಹಳ ಅಗತ್ಯ. ಸಾಮಾನ್ಯ ಜನ ನಮ್ಮನ್ನು ಆರಿಸಿದ್ದಾರೆ ಆದ್ದರಿಂದ ಸಾಮಾನ್ಯ ಜನರ ಹಿತವನ್ನು ಕಾಪಾಡತಕ್ಕ ವಿಷಯದಲ್ಲಿ ಆಸಕ್ತಿ ನಮಗೆ ಪೂರ್ಣವಾಗಿ ಇರಬೇಕು. ಅಷ್ಟು ಮಾತ್ರವಲ್ಲ, ನಮ್ಮ ಸರಳತೆ ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಇರಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಅವರು ಭಾಷಣದಲ್ಲಿ ಏನು ಹೇಳಿದ್ದಾರೆ ಅಂದರೆ, ವಿಧಾನ ಸೌಧಕ್ಕೆ ಬೀಗ ಹಾಕಿಕೊಂಡು ಬಿಟ್ಟಿದ್ದರೂ, ಹೆಲಿಕ್ಯಾಪ್ಟ ರ್‌ನಲ್ಲಿ ತಿರುಗುತ್ತಿದ್ದರು, ಕಾರಿನ ಮೇಲೆ ಕೆಂಪು ದೀಪ ಹಾಕಿಕೊಂಡು ಹೋಗುತ್ತಿದ್ದರು. ಪೋಲೀಸ್ ಸಿಬ್ಬಂದಿ ಯಾವಾಗಲೂ ಅವರಿಗೆ ರಕ್ಷಣೆಯಾಗಿರಬೇಕಾಗಿತ್ತು ಎಂದು ಹೇಳಿದ್ದಾರೆ. ಆ ರೀತಿ ಆದದ್ದೆಲ್ಲಾ ಸರಿಯಲ್ಲ ಎಂದು ಹೇಳುವುದರಲ್ಲಿ ನಾನು ಒಬ್ಬ. ಏಕೆಂದರೆ, ನಮ್ಮ ಹಳ್ಳಿಗಾಡಿನ ಜನ ನಮ್ಮಿಂದ ಸಹಾಯ ನಿರೀಕ್ಷಿಸುತ್ತಾರೆ, ಆದ್ದರಿಂದ ಅವರ ವಿಷಯದಲ್ಲಿ ನಾವು ಸರಿಯಾಗಿ ನಡೆದುಕೊಳ್ಳಬೇಕಾಗುತ್ತದೆ. ನಮ್ಮ ಸಹಾಯಕ್ಕೆ ಹರಕುಬಟ್ಟೆ ಜನ ಬರುತ್ತಾರೆ, ಅರೆ ಹೊಟ್ಟೆಯಿಂದ ಇರತಕ್ಕವರು ಬರುತ್ತಾರೆ, ಮನೆಯಲ್ಲಿ ಏನೂ ಇಲ್ಲದೇ ಇರತಕ್ಕವರು ಬರುತ್ತಾರೆ ಅಂತಹವರು ಬಂದಾಗ ಸ್ವಲ್ಪ ಹೆಚ್ಚು ಕಡಿಮೆ ಅವರ ಜೊತೆ ಯಲ್ಲಿ ನಾನೂ ಒಬ್ಬ ಎಂದು ತಿಳಿದು ನಡೆದುಕೊಳ್ಳಬೇಕಾದ್ದು ಅಗತ್ಯ. ಮಹಾತ್ಮ ಗಾಂಧಿಯವರು ಇಡೀ ರಾಷ್ಟ್ರದ ಜನತೆಯ ಕಷ್ಟವನ್ನು ಅರಿತು ಸರಳವಾದ ಜೀವನಕ್ಕೆ ತೊಡಗಿದ್ದರು. ಅಂತಹವರನ್ನು ನಾವು ಉದಾಹರಣೆಯಾಗಿ ಇಟ್ಟುಕೊಂಡಮೇಲೆ ಮಂತ್ರಿಮಂಡಲದಲ್ಲಿರತಕ್ಕವರು ಹಾಗೂ ಶಾಸಕರೂ ಸಹ ಆ ರೀತಿ ನಡೆದುಕೊಳ್ಳಬೇಕಾದ್ದು ಅಗತ್ಯವಿದೆ ಎಂದು ನನ್ನ ಭಾವನೆ. ಆದಕ್ಕೆ ಲೋಪ ಬಂದಾಗ ಈ ಚುನಾವಣೆ ನಡೆಯುವಂಥ ಸಂದರ್ಭ ಬಂತು. ಅದೇ ಒಂದು ದೊಡ್ಡ ಸಹಾಯ ಜನತಾ ಪಕ್ಷ ಅಧಿಕಾರಕ್ಕೆ ಬರಲಿಕ್ಕೆ ಎಂದು ನನ್ನ ಅಭಿಪ್ರಾಯ. ಇಷ್ಟುಮಾತ್ರವಲ್ಲ, ಮಾನ್ಯ ಹೆಗಡೆಯವರಿಗೆ ಇನ್ನೊಂದು ಬಹಳ ದೊಡ್ಡ ಅನುಕೂಲವನ್ನು ಭಗವಂತನು ಕೊಟ್ಟಿದ್ದಾನೆಂದು ತಿಳಿಯುತ್ತೇನೆ. ಅವರಿಗೆ ಒಳ್ಳೆಯ ಭಾಷೆ ಲಭ್ಯವಾಗಿದ್ದೆ ಎಂತಹ ಕಠಿಣವಾದ ಪ್ರಸಂಗ ಬಂದರೂ, ನಿಷ್ಠೂರವಾಗಿ ಹೇಳಬೇಕಾದಾಗಲೂ, ಒಳ್ಳೆಯ ಭಾಷೆ ಉಪ ಯೋಗ ಮಾಡತಕ್ಕ ಭಾಗ್ಯ ಅವರಿಗೆ ಇದೆ. ಆದರಿಂದ ಎದುರು ಪಕ್ಷದವರನ್ನು ಒಲಿಸಿಕೊಳ್ಳುವುದಕ್ಕೂ ಹಾಗೂ ಜನತೆಯ ವಿಶ್ವಾಸವನ್ನು ಪಡೆದುಕೊಳ್ಳುವುದಕ್ಕೂ ಬಹಳ ಸಹಾಯವಾಗಿದೆ ಅವರಲ್ಲದೆ ಬೇರೆಯ ವರು ಮುಖ್ಯಮಂತ್ರಿಗಳಾಗಿದ್ದರೆ, ಇಷ್ಟು ದಿವಸ ಸರ್ಕಾರ ನಡೆಸಲಿಕ್ಕೆ ಸಾಧ್ಯವಾಗುತ್ತಿತ್ತೇ ಎಂದು ನನಗೆ ಅನುಮಾನ ಇದೆ. ಇದು ಮಾನ್ಯ ಹೆಗಡೆಯವರಿಗೂ ಹಾಗೂ ನನಗೂ ಇರತಕ್ಕ ಬಹಳ ದಿವಸದ ವಿಶ್ವಾಸ ದಿಂದ ಈ ಮಾತು ನನ್ನ ಬಾಯಿಂದ ಬರುವಂತಾಯಿತು. ಮಾನ್ಯ ಉಪಾಧ್ಯಕ್ಷರೇ, ನನ್ನ ಮನಸ್ಸಿನಲ್ಲಿರತಕ್ಕ ವಿಷಯವನ್ನು ಸ್ಪಷ್ಟವಾಗಿ ಹೇಳಲೇ ಬೇಕಾಗುತ್ತದೆ. ಇನ್ನು ಇವರು ಜನತಾ ಪಕ್ಷ ಎಂದು ಹೆಸರು ಇಟ್ಟು ಕೊಂಡಿರುವುದು ಇವರಿಗೆ ಬಹಳ ಅನುಕೂಲವಾಯಿತು. ಕಾಂಗ್ರೆಸ್‌ಗೆ ಹಿಂದಿನ ವರ್ಷದ ಚರಿತ್ರೆ ಇದೆ. ಜನತೆ ಎನ್ನುವುದು ಜನಸಾಮಾನ್ಯರ ಬಾಯಲ್ಲಿ ಯಾವಾಗಲೂ ಬರತಕ್ಕ ಪದ ಮಾನ್ಯ ಹೆಗಡೆಯವರು ಏನು

ಹೇಳುತ್ತಾರೆ, ಜನತೆಗಾಗಿ ಇಂತಹ ಸರ್ಕಾರ ಜನತೆ ನಡೆಸುವ ಸರ್ಕಾರ ಎಂದು ಹೇಳುತ್ತಾರೆ. ಪ್ರಜೆಗಳಿಂದ, ಹಾಗೂ ಪ್ರಜೆಗಳಿಗಾಗಿ ನಡೆಸತಕ್ಕ ಸರ್ಕಾರ, ಎಂದೆಲ್ಲಾ ಹೇಳಿ, ತಮ್ಮ ಪಕ್ಷಕ್ಕೆ ಒಂದು ಕೀರ್ತಿ ತೆಗೆದು ಕೊಂಡಿರುತ್ತಾರೆ. ಅದು ಇರತಿ ಈ ಆಡಳಿತ ಪಕ್ಷಕ್ಕೆ ಹಿಂದೆ ಇರತಕ್ಕ ಬೆಂಬಲ ಏನೆಂದರೆ ಪ್ರಚಾರ ಮಾಧ್ಯಮ. ಅದು ಹೇಗೋ ಮಾನ್ಯ ಹೆಗಡೆಯವರ ಕೈಗೆ ಸುಲಭವಾಗಿ ಸಿಕ್ಕಿದೆ. ಅದನ್ನು ಒಲಿಸಿಕೊಳ್ಳತಕ್ಕ ರೀತಿ ನೀತಿ ಅವರಿಗೆ ಬಹಳ ಚೆನ್ನಾಗಿ ಗೊತ್ತು ಮಾನ್ಯ ಹೆಗಡೆಯವರಿಗೆ ಪ್ರಚಾರ ಮಾಧ್ಯಮ ಸುಲಭವಾಗಿ ಸಿಕ್ಕಿರುವುದರಿಂದ ಜನತಾ ಪಕ್ಷ ಕೆಲಸ ಹೆಚ್ಚಾಗಿ ಮಾಡದೇ ಇದ್ದರೂ ಪ್ರಚಾರ ಬಹಳ ಜಾಸ್ತಿಯಾಗಿದೆ.

ಶ್ರೀ ಕೆ ಜಿ ಮಹೇಶ್ವರಪ್ಪ.--ಪ್ರಚಾರ ಕಡಿಮೆ ಎಂದು ನನ್ನ ಅಭಿಪ್ರಾಯ.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಸರ್ಕಾರ ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡುವಾಗ ಗುಟ್ಟಾಗಿ ಮಾಡಲಿಕ್ಕೆ ಆಗುವುದಿಲ್ಲ. ಏನೇನು ಕೆಲಸಗಳು ನಡೆಯುತ್ತವೆ ಅವು ಪ್ರತಿಯೊಬ್ಬರಿಗೂ ಗೊತ್ತಾಗಬೇಕಾಗುತ್ತದೆ. ಮಾನ್ಯ ಮಹೇಶ್ವರಪ್ಪನವರು ಹೇಳುವ ವಾದವನ್ನು ಒಪ್ಪಲಿಕ್ಕೆ ಆಗುವುದಿಲ್ಲ. ಇನ್ನು ಎದುರು ಪಕ್ಷದವರು ಮಾನ್ಯ ಹೆಗಡೆಯವರನ್ನು ಕೆಣಕಿದಾಗ ಮೇಲೆ ಬೀಳುವ ಸ್ವಭಾವ ಇದ್ದರೂ ತಡೆದು ಮಾತನಾಡುತ್ತಾರೆ ಒಂದೊಂದು ಸಾರಿ ಆಡಬಾರದ ಭಾಷೆ ಆಡಿದ್ದಾರೆ. ಹಾಸನದಲ್ಲಿ ಮಾತನಾಡುತ್ತಾ ಈ ಜನತೆ ನನ್ನ ಜೊತೆಯಲ್ಲಿರುವತನಕ ಯಾರೂ ನನಗೆ ಏನೂ ಮಾಡಲಿಕ್ಕೆ ಆಗುವುದಿಲ್ಲ, ಒಂದು ಕೂದಲು ಕೀಳಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಬಂದಿರತಕ್ಕ ಆಧಾರದ ಮೇಲೆ ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಮೂರು ಅಕ್ಷರದ ಶಬ್ದವನ್ನು ಉಪಯೋಗಿಸಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.--ಅವರು ಹೇಳಿರತಕ್ಕದ್ದು ಪತ್ರಿಕೆಯಲ್ಲಿ ಬಂದಿದೆ. ಈ ಭಾಷೆ ಹಳ್ಳಿಗಾಡಿನ ಜನತೆಯಲ್ಲಿ ಸುಲಭವಾಗಿ ಬರುತ್ತದೆ.

ಬಿ. ವಿ ಶ್ರೀ ಕರಿಗೌಡ --ನಾವು ಮುಖ್ಯಮಂತ್ರಿಗಳ ಜೊತೆ ಇದ್ದೆವು. ಅವರು ಆ ರೀತಿಯ ಮಾತನ್ನು ಆಡಿಲ್ಲ ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ ಏತಕ್ಕೆ ಈ ರೀತಿ ಮಾತನಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಕಳೆದ ಸಾರಿ ಎಲ್ಲವನ್ನೂ ಒಪ್ಪಿಕೊಳ್ಳುತ್ತಿದ್ದರು, ಈ ಸಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ಬುದ್ಧಿವಾದ ಹೇಳುತ್ತಿದ್ದಾರೋ ಏನೋ ಗೊತ್ತಾಗುತ್ತಿಲ್ಲ

ಶ್ರೀ ಎನ್. ಹುಚ್ಚಮಾಸ್ತಿಗೌಡ --ಮಾನ್ಯ ಸದಸ್ಯರಾದ ಕರಿಗೌಡರು ನನಗೆ ಬುದ್ಧಿವಾದ ಹೇಳಬೇಕಾಗಿಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕದ್ದು ಸ್ಪಷ್ಟವಾಗಿ ತಿಳಿಸಿದ್ದೇನೆ. ಆ ಮಾತು ಆಡಬಾರದಾಗಿತ್ತು ಎಂದು ಹೇಳುತ್ತಿದ್ದೇನೆ ಜನತೆಯ ಬೆಂಬಲ ಹಾಗೂ ಸದಸ್ಯರ ಬೆಂಬಲ ಇರುವವರೆಗೆ ಇರುತ್ತೇನೆ ಎಂದು ಹೇಳುತ್ತಾರೆ ಇವೊತ್ತು ಇವರಿಗೆ ಜನತೆಯ ಬೆಂಬಲ ಎಷ್ಟು ಇದೆ ? ಇವರ ಪಕ್ಷದವರು 95 ಜನರು ಕಳೆದ ಚುನಾವಣೆಯಲ್ಲಿ ಗೆದ್ದಿದ್ದಾರೆ. ಅಂದರೆ 33.09 ಪರ್‌ಸೆಂಟ್ ಓಟುಗಳು ಇವರಿಗೆ ಬಂದಿದೆ. ಈ 95 ಜನರಲ್ಲಿ 62 ಜನ ಮಾತ್ರ ಜನತಾ ಪಕ್ಷದವರು ಇನ್ನು ಉಳಿದವರು 33 ಜನರು ಕ್ರಾಂತಿರಂಗದವರು. 62 ಜನರು ಗೆದ್ದಿರುವವರು ಯಾಕೆಂದರೆ ಜನತಾರಂಗ ಎಂದು ಮಾಡಿಕೊಂಡು ಅವರ ಜೊತೆಯಲ್ಲಿ ಇಬ್ಬರು ಸಹಕರಿಸಿ, ಒಂದು ಚುನಾವಣೆ ಚಿಹ್ನೆ ತೆಗೆದುಕೊಂಡು ಗೆದ್ದವರು. ಕ್ರಾಂತಿರಂಗಕ್ಕೆ ಚುನಾವಣೆ ಚಿಹ್ನೆ ದೊರಕಿಸಿಕೊಡುವುದಕ್ಕೆ ಅಷ್ಟು ಬೇಗ ಆಗದೇ ಇದ್ದುದರಿಂದ, ಜನತಾ ಪಕ್ಷದ ಜೊತೆಯಲ್ಲಿಯೇ ಜನತಾ ಪಕ್ಷದ ಚಿಹ್ನೆಯನ್ನು ತೆಗೆದುಕೊಂಡು ಚುನಾವಣೆಗೆ ನಿಂತರು 1978 ನೇ ಇಸವಿಯಲ್ಲಿ ಚುನಾವಣೆ ನಡೆದಾಗ 59 ಜನರು ಗೆದ್ದಿದ್ದರು. 1983 ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲೂ ಕೂಡ ಮೂರು ಜನ ಹೆಚ್ಚಾಗಿ ಗೆದ್ದಿದ್ದರು, ಆಷ್ಟೇ ಇದನ್ನು ನೋಡಿದಾಗ ಅದೇ ಕಾಂಗ್ರೆಸ್ ಪಕ್ಷ 180 ಜನ ಇದ್ದುದು 82 ಜನರಿಗೆ ಇಳಿಯಿತು ಆದರೂ ಕೂಡ ಪಕ್ಷಕ್ಕೆ ಓಟು ಬಂದುದು ಶೇಕಡ 42. ಅದೇ ರೀತಿ ವಿರೋಧಪಕ್ಷದವರು, ಬಿ ಜೆ. ಪಿ. ಕಮ್ಯುನಿಸ್ಟ್, ಪಕ್ಷದವರು ಇವರೆಲ್ಲರೂ ಸೇರಿ ನಿಮ್ಮ ಪಕ್ಷಕ್ಕೆ ಬೆಂಬಲವನ್ನು ಕೊಟ್ಟರು. ಇಲ್ಲದಿದ್ದರೆ ನಿಮ್ಮ ಪಕ್ಷ ಅಧಿಕಾರಕ್ಕೆ ಬರುವಷ್ಟು ಸಂಖ್ಯೆ ನಿಮಗೆ ಬಂದಿರಲಿಲ್ಲ ಎನ್ನುವುದು ಸ್ಪಷ್ಟ. ಇಲ್ಲಿರತಕ್ಕಂಥ ಅಂಕಿ ಅಂಶಗಳನ್ನು ಮರೆತು ಸುಮ್ಮನೆ ಪ್ರಚಾರ ಮಾಡಿದರೆ ಆಗುವುದಿಲ್ಲ. ಎಷ್ಟು ಓಟು ಬಂದಿದೆ ಎನ್ನುವುದು ಮುಖ್ಯ. ಆದ್ದರಿಂದ ಅವರಿಗೆ ಜನತಾ ಬೆಂಬಲ ಇರುವವರೆಗೆ ನನ್ನನ್ನು ಯಾರು ಕಿತ್ತುಹಾಕುವುದಕ್ಕೆ ಆಗುವುದಿಲ್ಲವೆಂದು ಹೇಳುವುದಾದರೆ, ಜನತೆಯ ಬೆಂಬಲ ಎಂದರೆ ಸ್ಪಷ್ಟವಾಗಿ ಜನತೆಯ ಬೆಂಬಲ ಆದರೆ ಇತ್ತೀಚೆಗೆ ನಡೆದಂತಹ ಪುರಸಭೆಗಳ ಚುನಾವಣೆಯಲ್ಲಿ ಯಾರಿಗೆ ಜನತೆಯ ಬೆಂಬಲವಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿದ್ದರೂ ಕೂಡ ಈ ಮಾತನ್ನು ಮಾನ್ಯ ಹೆಗಡೆಯವರು ಏತಕ್ಕೆ ಹೇಳುತ್ತಾ ಇದ್ದಾರೆಂದು ಅರ್ಥವಾಗುತ್ತಿಲ್ಲ, ಇನ್ನು ಒಂದು ವಿಚಾರ, ಅದು ಏನೆಂದರೆ ಜನತಾ ಪಕ್ಷದ ಕಾರ್ಯಕ್ರಮ

ಈಗಿರತಕ್ಕಂಥ ಕೆಲಸಗಳಿಗೆ ಹೆಸರುಗಳನ್ನು ಮಾತ್ರ ಬೇರೆ ಬೇರೆ ಕೊಟ್ಟಿರುತ್ತಾರೆ. ಅವರು ಕೊಟ್ಟಿರ ತಕ್ಕಂಥ ಹೆಸರು ಏನೆಂದರೆ ಅಂತ್ಯೋದಯ, ಸೇತುಬಂಧನ, ಗಂಗಾಕಲ್ಯಾಣ ಇತ್ಯಾದಿ ಇದಕ್ಕೆ ಹಿಂದಿನ ಸರ್ಕಾರ ದವರು ಭಾಗ್ಯಜ್ಯೋತಿ, ನೇಗಿಲಭಾಗ್ಯ ವಗೈರೆ ಎಂದು ಹೇಳಿದ್ದರು. ಆದರೆ ಕಾರ್ಯಕ್ರಮವೆಲ್ಲ ಒಂದೇ. ವ್ಯತ್ಯಾಸ ಏನೂ ಇಲ್ಲ. ಈ ಭಾಗ್ಯೋದಯ, ಅಂತ್ಯೋದಯ ಎಲ್ಲ ಎನ್ ಆರ್ ಇ ಪಿ ಪ್ರೋಗ್ರಾಮ್ ಒಳಗೆ ಸೇರಿಹೋಗಿದೆ. ಇದೇನು ಒಂದು ಪ್ರತ್ಯೇಕವಾದ ಕಾರ್ಯಕ್ರಮವಲ್ಲ. ಮಾನ್ಯ ಸ್ನೇಹಿತರು ಅಂತ್ಯೋದಯ ಕಾರ್ಯಕ್ರಮ ಕಳೆದ ವರ್ಷವೇ ಜಾರಿಗೆ ಬಂದಿತು ಎಂದು ಹೇಳಿದರು ಎಲ್ಲೆಲ್ಲಿ ಏನೇನಾಗಿದೆ ಎಂಬುದನ್ನು ಅವರು ತೋರಿಸಲಿ ಮತ್ತೆ ಅನೇಕ ವರ್ಷಗಳಿಂದ ಖಾಯಂ ಆಗಿ ಕೆಲಸ ಇಲ್ಲದೆ ದಿನಗೂಲಿಯ ಮೇಲೆ ತಿಂಗಳಲ್ಲಿ 29 ದಿವಸ ಲೆಕ್ಕ ತೋರಿಸಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದವರನ್ನು ಖಾಯಂ ಮಾಡಿದ್ದೇವೆಂದು ಹೇಳಿದರು. ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲಿ ಸುಮಾರು 15 ಸಾವಿರ ಜನ ಹಂಗಾಮಿಯಾಗಿ ಕೆಲಸ ಮಾಡಿದಂಥವರನ್ನು ಖಾಯಂ ಮಾಡಿದಂಥ ಉದಾಹರಣೆ ಇದೆ ಇವರು ಯಾವುದೇ ಒಂದು ಕಾರ್ಯಕ್ರಮವನ್ನು ಹೊಸದಾಗಿ ಹಾಕಿಕೊಂಡಿದ್ದಾರೆ ಎನ್ನುವುದು ನನ್ನ ಕಣ್ಣಿಗೆ ಕಾಣು ತ್ತಿಲ್ಲ. ಮತ್ತೆ ನಾನಾದರೂ ಹೇಳುವುದು ಇಷ್ಟೇ. ಕಾಂಗ್ರೆಸ್ ಪಕ್ಷವನ್ನು ಟೀಕೆ ಮಾಡತಕ್ಕಂಥದ್ದು ಮಾನ್ಯ ಹೆಗಡೆಯವರಿಗಾಗಲಿ ಅಥವಾ ಅವರ ಸ್ನೇಹಿತರಿಗಾಗಲಿ ಸರಿಯಲ್ಲ. ಏತಕ್ಕೆಂದರೆ ಸ್ವಾತಂತ್ರ್ಯ ಬಂದು ಮೂವತ್ತಾರು ವರ್ಷಗಳಲ್ಲಿ ಶ್ರೀಮಾನ್ ಹೆಗಡೆಯವರು ಕಾಂಗ್ರೆಸ್ ಪಕ್ಷದಲ್ಲಿ ಸುಮಾರು 15 ವರ್ಷಗಳು ಕೆಲಸ ಮಾಡಿದ್ದಾರೆ ಅವರಲ್ಲಿ ಇರತಕ್ಕಂಥ ಗುಣಗಳಾಗಲಿ, ಲಾಭವಾಗಲಿ, ನಷ್ಟವಾಗಲಿ ಎಲ್ಲ ದಕ್ಕೂ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷವೇ ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಬಿ. ವಿ. ಕರೀಗೌಡ.--ಶ್ರೀಮತಿ ಇಂದಿರಾಗಾಂಧಿಯವರ ಕಾಂಗ್ರೆಸ್ ಅಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.--ಹೀಗೆ ಸ್ಪಷ್ಟವಾಗಿ ಇರುವಾಗ ಮತ್ತೆ ಅದೇ ಕಾಂಗ್ರೆಸ್ಸನ್ನು ಅತಿ ದ್ವೇಷದಿಂದ ಹೇಳುತ್ತಾ ಹೋಗುವುದು ಸೂಕ್ತವಲ್ಲವೆಂದು ಅಷ್ಟೇ ನಾನು ಹೇಳುವುದು.

ಶ್ರೀ ಬಿ. ವಿ. ಕರೀಗೌಡ.--1978ನೇ ಇಸವಿಯಲ್ಲಿ ತಾವೇ ಸ್ವತಃ ಶ್ರೀಮತಿ ಇಂದಿರಾಗಾಂಧಿ ಯವರ ವಿರುದ್ಧವಾಗಿ ಕ್ಯಾನ್‌ವಾಸ್ ಮಾಡಲಿಕ್ಕೆ ಹೋಗಿದ್ದೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.--ನಾನು ಕೂಡ ನಿಮ್ಮ ಜೊತೆಯಲ್ಲಿ ಕೆಲವು ದಿವಸಗಳು ಇದ್ದೆ. ಅದು ಕೂಡ ಸ್ಪಷ್ಟವಾಗಿ ಇದೆ.

ಶ್ರೀ ಬಿ. ವಿ. ಕರೀಗೌಡ.--ನಾಳೆ ಯಾರ ಕಡೆ ಹೋಗುತ್ತೀರೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.--ಯಾರ ಕೂಡ ಹೋದರೆ ಲಾಭ ಏನು ಬರುತ್ತದೆ ಎಂದು ನೋಡು ವವರು ಇದ್ದಾರೆ. ನಾನು ಲಾಭ ಮಾಡಿದ್ದೇನೋ ಅಥವಾ ನೀವು ಮಾಡಿದ್ದೀರೋ ಎಂಬುದನ್ನು ನೀವೇ ತಿಳಿದುಕೊಳ್ಳಿ ಸ್ವಾಮಿ. ಮತ್ತೆ ಮಾನ್ಯ ದೇವರಾಜಅರಸ್‌ರವರ ಹೆಸರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ದಿವಂಗತ ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಅವರು ಕೈಗೊಂಡ ಕಾರ್ಯಕ್ರಮಗಳು ಏನು ಇವೆ ಅದನ್ನು ಸ್ಪಷ್ಟವಾಗಿ ಜಾರಿಗೆ ಕೊಡುವ ದಿಸೆಯಲ್ಲಿ ಮನಸಿಟ್ಟು ಕೆಲಸ ಮಾಡಿದರೆ ಜನತೆಗೆ ಬಹಳ ಉಪಕಾರ ಮಾಡಿದ ಹಾಗೆ ಆಗುತ್ತದೆ. ಯೂನಿವರ್ಸಿಟಿಯಲ್ಲಿ ಅಧ್ಯಾಯ ನಕ್ಕೋಸ್ಕರವಾಗಿ ಒಂದು ಕಾಲೇಜನ್ನು ಪ್ರಾರಂಭಮಾಡಿದರೆ ದೊಡ್ಡ ಸಾರ್ಥಕವಾದ ಕೆಲಸ ಮಾಡಿದಂತಾ ಯಿತು ಎಂದು ಹೇಳತಕ್ಕಂಥದ್ದಲ್ಲ. ಮಾನ್ಯ ಅರಸುರವರು ಸಾಮಾನ್ಯ ಜನರಿಗೆ ಲಾಭವಾಗಲಿ ಎನ್ನುವ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಸರ್ಕಾರಿ ನೌಕರಿಯಲ್ಲಿ ಹಿಂದುಳಿದ ಜನಾಂಗಕ್ಕೆ ಅನುಕೂಲವಾಗಲು ಎಷ್ಟು ಮೀಸಲಾತಿಯನ್ನು ಇಟ್ಟಿದ್ದರು ಎಂದರೆ ಇಡಿ ರಾಷ್ಟ್ರದಲ್ಲಿ ಇನ್ನು ಯಾವ ರಾಜ್ಯದಲ್ಲಿಯಾಗಲಿ ಇಷ್ಟೊಂದು ಮೀಸಲಾತಿಯನ್ನು ಇಡಲಿಕ್ಕೆ ಸಾಧ್ಯವಾಗಲಿಲ್ಲ. ಶೇಕಡಾ 58 ಮೀಸ ಲಾತಿ ಅದು ಶ್ರೀ ಮಾನ್ ದೇವರಾಜ ಅರಸ್‌ರವರಿಗೆ ಮಾತ್ರ ಇತ್ತು. 20-24 ವರ್ಷಗಳಿಂದ ಅವರ ಜೊತೆಯಲ್ಲೇ ಕೆಲಸಮಾಡಿದ್ದೇನೆ ಸ್ವಾಮಿ, ಅವರ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ನಿನ್ನೆ ದಿವಸ ನೀವು ಬಂದಿದ್ದೀರಿ.

ಶ್ರೀ ಬಿ. ವಿ. ಕರೀಗೌಡ.--ನಿಮ್ಮಿಂದ ತಿಳಿದು ಕೊಳ್ಳುವುದಕ್ಕೆ ಕೇಳುತ್ತಿದ್ದೇನೆ. ಶ್ರೀ ಮಾನ್ ಅರಸ್‌ರವರನ್ನು ಏತಕ್ಕೆ ಬಿಟ್ಟಿರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.--ಏತಕ್ಕೆ ಬಿಟ್ಟೆ ಎನ್ನುವುವನ್ನು ಹೇಳುತ್ತೇನೆ, ಒಂದು ದಿವಸ ನನ್ನ ಹತ್ತಿರ ಬನ್ನಿ. ಇನ್ನಿತರ ರಾಜ್ಯಗಳಲ್ಲಿ ಕೇವಲ ಮೀಸಲಾತಿ ಇಡುವಂತ ಧೈರ್ಯ ಯಾರು ಮಾಡಲಿಲ್ಲ. ಮಾನ್ಯ ಅರಸುರವರು ಎಷ್ಟು ಧೈರ್ಯದಿಂದ ಆ ಕೆಲಸ ಮಾಡಿದ್ದಾರೆ, ಆ ಕೆಲಸಗಳನ್ನು ಬಹಳ ಆಸಕ್ತಿ ವಹಿಸಿ ಮಾಡಲಿ ಎಂದು ಸಲಹೆ ಮಾಡಲಿಕ್ಕೆ ಇಷ್ಟ ಪಡುತ್ತೇನೆ. ಅನೇಕ ವರ್ಷಗಳಿಂದ ಸರ್ಕಾರದಲ್ಲಿ ಕಂಡು ಬರತಕ್ಕಂಥ ನ್ಯೂನತೆಗಳನ್ನು ಹಾಗೂ ದೋಷಗಳನ್ನು ಎದುರು ಪಕ್ಷದಲ್ಲಿ ಕುಳಿತಿರತಕ್ಕಂಥವರು ಹಾಗೂ

ಆಡಳಿತ ಪಕ್ಷದಲ್ಲಿ ಕುಳಿತಿರತಕ್ಕಂಥವರು, ಸಂದರ್ಭ ಬಂದಾಗ ಎತ್ತಿ ಹೇಳಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಈ ಸರ್ಕಾರ ಹಾಕಿಕೊಳ್ಳುತಕ್ಕಂಥ ಕಾರ್ಯಕ್ರಮಗಳಲ್ಲಿ ಪೂರ್ಣ ಲಾಭ ಜನರಿಗೆ ಸಿಕ್ಕುತ್ತಿಲ್ಲವೆಂದು ಸ್ಪಷ್ಟವಾಗಿ ಕಾಣುತ್ತಿದೆ. ಇನ್ನೂ ಶೇಕಡ 50 ರಷ್ಟು ಜನ ಬಡತನದ ರೇಖೆಯ ಕೆಳಗಡೆಯೇ ಇದ್ದಾರೆಂಬುದಕ್ಕೆ ಸ್ಪಷ್ಟವಾದ ಅಂಕಿಅಂಶಗಳು ಇದೆ. ಹೀಗಿರುವಾಗ ಕೆಳಗಿರುವವರನ್ನು ಮೇಲಕ್ಕೆ ಎತ್ತಲಿಕ್ಕೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ತೀರ ಸಣ್ಣ ರೈತರಿಗೆ ಜಮೀನು ಇಲ್ಲದವರಿಗೆ ವ್ಯವಸಾಯ ಕೂಲಿಕಾರರಿಗೆ, ಹೊಸ ನಿಯಮಗಳನ್ನು ಹಾಕಿಕೊಂಡು ಸಾಲವನ್ನು ಕೊಡಿಸಿ ಅವರ ಜೀವನ ಸ್ವಲ್ಪ ಸುಧಾರಿಸುವ ರೀತಿಯಲ್ಲಿ ಮಾಡಬೇಕೆನ್ನುವ ಸದುದ್ದೇಶದಿಂದ ಕೈಗೊಂಡಿರತಕ್ಕಂಥ ಕಾರ್ಯಕ್ರಮವೇನೋ ಬಹಳ ಒಳ್ಳೆಯ ಕಾರ್ಯಕ್ರಮವಾಗಿರುತ್ತದೆ. ಆದರೆ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ಹಸು ಅಥವಾ ಎಮ್ಮೆಯನ್ನು ಕೊಂಡುಕೊಳ್ಳಲು ಸಾಲ ಅಥವಾ ಬೇರೆ ಯಾವುದಕ್ಕಾದರೂ ಸಾಲ ತೆಗೆದುಕೊಂಡರೆ ಅವರಿಗೆ ಕೊಡತಕ್ಕಂಥ ಸಾಲದಲ್ಲಿ ಮೂರನೇ ಒಂದು ಭಾಗ ಕೂಡ ಅವರಿಗೆ ಸಿಕ್ಕುವುದಿಲ್ಲ. ಇದು ಎಲ್ಲಾ ಕಡೆ ನಡೆದುಕೊಂಡು ಬಂದಿರತಕ್ಕಂಥದ್ದಾಗಿರುತ್ತದೆ. ಇದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ಸರ್ಕಾರದವರು ಕೈಗೊಳ್ಳುತ್ತಾರೆಂದು ನಿರೀಕ್ಷೆ ಮಾಡಿದ್ದೇವೆ. ಇದು ಎಷ್ಟು ದೂರ ಹೋಗಿದೆ ಎಂದರೆ ನಮ್ಮ ಸ್ನೇಹಿತರು ಯಾರೋ ಹೇಳಿದರು. ಹಸು ಎಮ್ಮೆಗಳನ್ನು ಬೇರೆಯವರ ಕಡೆಯಿಂದ ತಂದು ತೋರಿಸುತ್ತಾರೆ ಪೂರ ದುಡ್ಡನ್ನು ತೆಗೆದುಕೊಳ್ಳುತ್ತಾರೆ, ತೆಗೆದುಕೊಂಡ ಮಾರನೇಯ ದಿವಸವೇ 100 ರೂಪಾಯಿಗಳನ್ನು ಸೇರಿಸಿ ಹಸು ಎಮ್ಮೆಯನ್ನು ವಾಪಸ್ ಕೊಟ್ಟುಬಿಡುತ್ತಾರೆ. ಈ ಕಳ್ಳತನವನ್ನು ಹಿಡಿಯಲಿಕ್ಕೆ ಚೈತನ್ಯವಿಲ್ಲವೇ ಎಂದು ಕೇಳಬೇಕಾಗಿದೆ. ಸರ್ಕಾರದ ಮೇಲಿನ ಅಧಿಕಾರಿಗಳು ಅನಿರೀಕ್ಷಿತವಾಗಿ ಸ್ಥಳಗಳಿಗೆ ಭೇಟಿಕೊಟ್ಟು ತಪ್ಪಾಗಿದೆಯೇ ಇಲ್ಲವೇ ಎನ್ನುವುದನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಿಲ್ಲವೆ ಎಂದು ಕೇಳುತ್ತೇನೆ. ಈ ಕೆಲಸವನ್ನು ಶ್ರೀ ರಾಮಕೃಷ್ಣ ಹೆಗಡೆಯವರು ಆಸಕ್ತಿವಹಿಸಿ ಮಾಡಿಲಿ ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮನೆಗಳನ್ನು ಕಟ್ಟಿಸಲು ಸರ್ಕಾರ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದೆ. ಮನೆ ಕಟ್ಟಿಕೊಳ್ಳುವವರಿಗೆ ಸರ್ಕಾರ ಮೂರುವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರೂ ಸಹ ಈ ಜನರ ಕೈಗೆ ಎರಡೂವರೆ ಸಾವಿರಕ್ಕಿಂತ ಹೆಚ್ಚು ಸಿಗುತ್ತಿಲ್ಲ. ಈ ಬಗ್ಗೆ ನನ್ನ ಸ್ಪಷ್ಟವಾದ ಅಭಿಪ್ರಾಯವೆಂದರೆ ತಾಲ್ಲೂಕ್ ಮಟ್ಟದಲ್ಲಿರುವ ಅಧಿಕಾರ ವರ್ಗಕ್ಕೆ ಯಾರ ಭಯವೂ ಇಲ್ಲ. ಇವರಿಗೆ ಭಯ ಎಂಬುದು ಈಗಲೂ ಇಲ್ಲ ಮತ್ತು ಈ ಹಿಂದೆಯೂ ಇರಲಿಲ್ಲ. ಇವರನ್ನು ಸರಿಯಾಗಿ ನೋಡಿಕೊಳ್ಳುವಂತಹ ಜವಾಬ್ದಾರಿಯನ್ನು ಮೇಲಿನ ಅಧಿಕಾರಿಗಳಿಗೆ ವಹಿಸಬೇಕು. ಆಗಲೂ ಏನಾದರೂ ತಪ್ಪು ಕಂಡುಬಂದರೆ ಮೇಲಧಿಕಾರಿಗಳೇ ಶಿಕ್ಷೆ ಅನುಭವಿಸಬೇಕಾಗುತ್ತದೆಂದು ಹೇಳುವಂತಹ ಧೈರ್ಯ ಈ ಪ್ರಜಾಸರ್ಕಾರಕ್ಕೆ ಇಲ್ಲದೇ ಹೋದರೆ ಇದನ್ನು ಯಾರು ಸರಿಪಡಿಸುತ್ತಾರೆ. ಈ ಕೆಲಸ ಮಾಡದಿರುವುದು ಈ ಸರ್ಕಾರದ ತಪ್ಪು ಅಥವಾ ಹಿಂದಿನ ಕಾಂಗ್ರೆಸ್ ಸರ್ಕಾರದ ತಪ್ಪು ಎಂದು ನಾನು ಹೇಳುವುದಿಲ್ಲ. ಇದರ ಒಂದು ಜವಾಬ್ದಾರಿ ಇಲ್ಲಿ ಕುಳಿತುಕೊಂಡಿರುವ 225 ಜನ ಶಾಸಕರ ಮೇಲಿದೆ. ಆದ್ದರಿಂದ ಈ ಒಂದು ದೋಷವನ್ನು ತಪ್ಪಿಸದೆ ಹೋದರೆ ಸರ್ಕಾರ ಕೊಡುತ್ತಿರುವ ಯಾವ ಸಹಾಯವೂ ಸರಿಯಾಗಿ ಬಡವರಿಗೆ ದೊರಕುವುದಿಲ್ಲ ಮತ್ತು ಇವರನ್ನು ಬಡತನದ ರೇಖೆಯಿಂದ ಮೇಲೆತ್ತುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ದೃಷ್ಟಿ ಹರಿಸುವುದು ಅಗತ್ಯವೆಂದು ಮತ್ತು ಈ ಕೆಲಸವನ್ನು ಕೂಡಲೇ ಮಾಡುವುದು ಅಗತ್ಯವೆಂದು ಹೇಳುತ್ತೇನೆ.

ಇನ್ನು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವಂತಹ ಒಂದು ಹೊಸ ಯೋಜನೆ ಕೆಳಗೆ ಪ್ರತಿಯೊಬ್ಬರಿಗೂ [illegible] ಸಾವಿರ ರೂಪಾಯಿಗಳನ್ನು ಜಾಮೀನು ಇಲ್ಲದೆ ಸಾಲ ಕೊಡುವಂತಹ ವ್ಯವಸ್ಥೆಯಾಗಿದೆ. ಇಲ್ಲಿಯೂ ಸಹ ಈ ಸಾಲ ಅರ್ಹರಾಗಿರುವವರಿಗೆ ಸಿಗುತ್ತದೆಯೋ ಅಥವಾ ಇಲ್ಲವೇ ಮತ್ತು ಪೂರ್ತಾ ಹಣ ಸಿಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ಸರ್ಕಾರದವರು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿದೆ. ಅನೇಕ ವಿದ್ಯಾವಂತ ತರುಣರು ಸ್ವಂತ ಉದ್ಯೋಗ ಕೈಕೊಳ್ಳಬೇಕೆಂದು ಹಾತೊರೆಯುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.– ಹಣವಂತರಿಗೆ ಮಾತ್ರ ಈ ಸಾಲ ಸಿಗುತ್ತದೆ, ಬೇರೆಯವರಿಗೆ ಈ ಸಾಲ ಸಿಗುವುದಿಲ್ಲ ಎಂಬುದಕ್ಕೆ ನನ್ನ ಹತ್ತಿರ ಪುರಾವೆ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.– ಯಾರಿಗೆ ನಿಜವಾಗಿಯೂ ಈ ಸಾಲದ ಅವಶ್ಯಕತೆ ಇದೆಯೋ ಅಂತಹವರಿಗೆ ಈ ಸಾಲ ಕೊಡಿಸುವ ವ್ಯವಸ್ಥೆಯಾಗಬೇಕು. ಇದರ ಜೊತೆಗೆ ಹಳ್ಳಿಗಾಡಿನಿಂದ ಬಂದಿರುವಂತಹ ವಿದ್ಯಾವಂತರಿಗೆ ತಾವು ಯಾವ ಉದ್ಯೋಗ ಕೈಕೊಂಡರೆ ಒಳ್ಳೆಯದು ಎಂಬುದರ ಅರಿವು ಇರುವುದಿಲ್ಲ. ಆದ್ದರಿಂದ ಇವರಿಗೆ ಯಾವಯಾವ ಉದ್ಯೋಗಗಳನ್ನು ಕೈಕೊಂಡರೆ ಚೆನ್ನಾಗಿ ಮುಂದುವರೆಯಬಹುದು ಎಂಬು

ದರ ಬಗ್ಗೆ ಅರಿವುಂಟುಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಸರ್ಕಾರದವರು ರಾಜ್ಯದ ನಾನಾ ಕಡೆಗಳಲ್ಲಿ ಕ್ಷಾಮ ನಿವಾರಣಾ ಕೆಲಸಗಳನ್ನು ಕೈಕೊಂಡು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಕಂಟ್ರ್ಯಾಕ್ಟುದಾರರ ಮೂಲಕ ಈ ಕೆಲಸಗಳನ್ನು ಮಾಡಿಸಬಾರದೆಂದು ನಿಯಮವಿದ್ದರೂ ಸಹ ಯಾರಾದರೊಬ್ಬರ ಮೂಲಕವೇ ಈ ಕೆಲಸಗಳು ನಡೆಯುತ್ತಿರುವುದು. ಕೆಲಸದ ನಂತರ ಗ್ರಾಮಸೇವಕರ ಹೆಸರಿಗೆ ಚೆಕ್ ಬರುತ್ತದೆ. ಆಗ ಯಾರು ಕೆಲಸ ಮಾಡಿಸಿರುತ್ತಾರೋ, ಅಂತಹವರಿಗೆ ಶೇಕಡಾ ಹತ್ತರಷ್ಟು ಹಣವನ್ನು ಮುರಿದುಕೊಂಡು ಇನ್ನುಳಿದ ಹಣ ಕೊಡುತ್ತಾರೆ ಇದರಿಂದ ಕೆಲಸ ಸರಿಯಾಗಿ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಶಾಸಕರಾದವರು ಏನಿದ್ದರೂ ತಮ್ಮ ಕ್ಷೇತ್ರದಲ್ಲಿ ಏನೇನು ಕೆಲಸಗಳಾಗಬೇಕು ಎಂಬುದನ್ನು ಹೇಳಬಹುದು ಮತ್ತು ಹಣ ಜಾಸ್ತಿ ಕೊಡಿ ಎಂದು ಹೇಳಬಹುದು ಮತ್ತು ಹಣ ಜಾಸ್ತಿ ಕೊಡಿ ಎಂದು ಹೇಳಬಹುದು. ಆದರೆ ಇರುವಂತಹ ದೋಷವನ್ನು ಪರಿಹರಿಸುವಂತಹ ಹಾಗೂ ನಿವಾರಣೆ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು ಮತ್ತು ಈ ಒಂದು ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕಾಗುತ್ತದೆಂದು ಸಲಹೆ ಮಾಡುತ್ತೇನೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಈಗಾಗಲೆ 10-15 ಲಕ್ಷ ರೂಪಾಯಿಗಳಷ್ಟು ಕೆಲಸಗಳಾಗಿದ್ದರೂ ಸಹ ಹಣವನ್ನು ಇನ್ನೂ ಕೊಟ್ಟಿಲ್ಲ. ಆದಷ್ಟು ಬೇಗ ಈ ಹಣ ಕೊಟ್ಟು ಇರತಕ್ಕಂಥ ಲೆಕ್ಕಾಚಾರವನ್ನು ಪೂರೈಸಬೇಕೆಂದ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಉಪಾಧ್ಯಾಯರನ್ನು ನೇಮಕ ಮಾಡುವ ಕಾಲದಲ್ಲಿ ಆದಂಥ ಕೆಲವು ತಪ್ಪುಗಳ ಕಾರಣದಿಂದ ನೇಮಕಾತಿ ಸಮಿತಿಗಳನ್ನೇ ಅದು ಮಾಡಲಾಗಿದೆ ಎಂದು ಮಾನ್ಯ ವಿದ್ಯಾಮಂತ್ರಿಗಳು ಮೊನ್ನೆ ತಾನೆ ತಿಳಿಸಿದರು ಬೇರೆ ಮಾರ್ಗದಿಂದ ಯಾರುಯಾರು ಕೆಲಸದ ಅನುಕೂಲ ಪಡೆದಿದ್ದಾರೆ ಅಂತಹವರನ್ನು ಈಗ ಕೈಬಿಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಒಳ್ಳೆಯ ತೀರ್ಮಾನ ಕೈಕೊಂಡಿದ್ದಾರೆ. ಇನ್ನು ಮುಂದೆಯಾವುದೇ ಹೊಸ ಸಮಿತಿಗಳನ್ನು ನೇಮಕ ಮಾಡುವಾಗ ಜನತಾ ಪಕ್ಷದವರನ್ನೇ ಬೇಕಾದರೆ ಹಾಕಲಿ ಆದರೆ ಬಹಳ ಚೆನ್ನಾಗಿ ಕೆಲಸ ಮಾಡುವವರನ್ನು ಮತ್ತು ಒಳ್ಳೆಯ ಅನುಭವವಿರುವವರನ್ನು ನೇಮಕ ಮಾಡುವುದು ಅಗತ್ಯವೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಜಿ ಮಹೇಶ್ವರಪ್ಪ.– ತಾವು ಈ ಸಮಿತಿಗಳಲ್ಲಿ ಅಧಿಕಾರೇತರರನ್ನು ಕೈಬಿಡಬೇಕೆಂದು ಹೇಳುತ್ತೀರೋ ಅಥವಾ ಅಧಿಕಾರಿಗಳನ್ನು ಕೈಬಿಡಬೇಕೆಂದು ಹೇಳುತ್ತೀರೋ ?

ಶ್ರೀ ಬಿ. ಎಸ್. ಯಡಿಯೂರಪ್ಪ.– ಈಗಾಗಲೇ ದುಡ್ಡು ಕೊಟ್ಟು ಕೆಲಸ ಪಡೆದಿದ್ದಾರೆ. ಅದ್ದರಿಂದ ಸಮಿತಿಗಳನ್ನು ರದ್ದು ಮಾಡಿದ್ದಾರೆ ಇವರ ಪಾಡೇನಾಗಬೇಕು ?

ಶ್ರೀ ಎಸ್. ಹುಚ್ಚಮಾಸ್ತಿಗೌಡ – ಅಧಿಕಾರಿಗಳಲ್ಲಿಯೂ ಸತ್ಯವಂತರಿದ್ದಾರೆ ಮತ್ತು ಅಧಿಕಾರೇತರರಲ್ಲಿಯೂ ಸತ್ಯವಂತರಿದ್ದಾರೆ. ಅಧಿಕಾರಿಗಳು ಮಾತ್ರ ಸತ್ಯವಂತರು, ಅಧಿಕಾರೇತರರು ಸತ್ಯವಂತರಲ್ಲ ಎಂದು ನಾನು ಹೇಳುವುದಿಲ್ಲ ಅದೇರೀತಿ ಅಧಿಕಾರೇತರರು ಮಾತ್ರ ಸತ್ಯವಂತರು ಅಧಿಕಾರಿಗಳು ಸತ್ಯವಂತರಲ್ಲ ಎಂದೂ ಸಹ ನಾನು ಹೇಳುವುದಿಲ್ಲ. ಅದ್ದರಿಂದ ಇಂತಹ ಸಮಿತಿಗಳನ್ನು ನೇಮಕ ಮಾಡುವಾಗ ನಿಜವಾಗಿಯೂ ಅರ್ಹತೆಯುಳ್ಳವರು ಯಾರಿದ್ದಾರೆಂಬುದನ್ನು ತಿಳಿದುಕೊಂಡು ನೇಮಕ ಮಾಡುವಂತಹ ವಿವೇಚನೆ ಸರ್ಕಾರಕ್ಕೆ ಇರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ – ಈಗ ಯಾರು ಯಾರು ದುಡ್ಡು ಪಡೆದಿದ್ದಾರೆ, ಅಂತಹವರನ್ನು ದುಡ್ಡು ಕೊಟ್ಟವರು ಏನಾದರು ಹಿಡಿದುಕೊಂಡು ಒದ್ದರೆ, ಅಂತಹವರ ಮೇಲೆ ಕೇಸ್ ಹಾಕಬೇಕೆಂದು ಸರ್ಕಾರದವರು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕು.

ಶ್ರೀ ಎಸ್ ಹುಚ್ಚಮಾಸ್ತಿಗೌಡ.—7-8 ತಿಂಗಳ ಹಿಂದೆ ಬೆಂಗಳೂರಿನಲ್ಲಿ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಕೂಡ 3 ಸಾವಿರ ರೂಪಾಯಿಗಳವರೆಗೆ ಲಂಚ ತೆಗೆದು ಕೊಂಡಿದ್ದಾರೆಂಬುದಕ್ಕೆ ರುಜುವಾತುಗಳಿವೆ. ಈ ಕಸ ಗುಡಿಸುವ ಕೆಲಸ ಮಾಡುವವರಿಗೆ ನಾವು ದೊಡ್ಡ ಹೆಸರು ಕೊಟ್ಟಿದ್ದೇವೆ. ಇಂತಹ ತಿರಿದು ತಿನ್ನುವವರ ಹತ್ತಿರವೂ ಲಂಚ ಪಡೆಯುತ್ತಿರುವ ದೂರುಗಳು ಬರುತ್ತಿವೆ ಎಂದು ಮತ್ತು ಇದರ ಕಡೆಗೆ ಗಮನ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದೆ. ಆದರೆ ಹಣ ಪಡೆದಂಥ ಯಾರೊಬ್ಬರನ್ನೂ ಹಿಡಿಯುವ ಪ್ರಯತ್ನ ಮಾತ್ರ ನಡೆಯುಲಿಲ್ಲ. ಇಂತಹ ಸಣ್ಣ ಸಣ್ಣ ಕೆಲಸಗಳಿಗೂ ಹಣ ಪಡೆಯುವ ಜನರು ಇದ್ದಾರೆ. ಇದನ್ನೆಲ್ಲಾ ಸುಧಾರಣೆ ಮಾಡುವವರು ಯಾರು ? ಈ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬತಕ್ಕಂಥ ಕೀರ್ತಿ ನಿಮಗೆ ಬರಬೇಕಾದರೆ ಈ ದಿಶೆಯಲ್ಲಿ ಸೂಕ್ತವಾದಂಥ ಕ್ರಮ ಕೈಗೊಳ್ಳಬೇಕೆಂದು ನಮ್ರತೆಯಿಂದ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಇಡೀ ದೇಶದಲ್ಲಿ ಇಲ್ಲಿಯವರೆಗೆ ನಾವು ಕಾಣದಿರುವಂತಹ ದೊಡ್ಡ ರೈತರ ಚಳುವಳಿ ಮೊನ್ನೆ

ನಡೆಯಿತು, ಸುಮಾರು 30 ಸಾವಿರ ಜನ ರೈತರು ಸೆರೆಮನೆಗೆ ಹೋದಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಆದ್ದರಿಂದ ರೈತರ ಬೇಡಿಕೆಗಳೇನು ಎಂಬುದರ ಕಡೆಗೆ ಸರ್ಕಾರ ಲಕ್ಷ್ಯ ಕೊಡಬೇಕಾಗುತ್ತದೆ. ಈ ರೈತರ ಚಳುವಳಿ ಎಂಬುದು ಯಕ್ಷ ಪ್ರಶ್ನೆ ಇದ್ದಂತೆ. 224 ಜನ ಸದಸ್ಯರ ಪೈಕಿ ಸುಮಾರು 180 ಜನ ಸದಸ್ಯರು ಹಳ್ಳಿಗಾಡಿನ ಪರಿಸ್ಥಿತಿಗಳನ್ನು ತಿಳಿದುಕೊಂಡಿದ್ದಾರೆ. ಹಳ್ಳಿಗಾಡಿನ ಜನರ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದಾರೆ. ನಾವು ಶಾಸಕರಾದ ಕೂಡಲೇ ಹಳ್ಳಿಗಾಡಿನ ಜನರ ಕಷ್ಟಗಳೇನು, ಅವುಗಳನ್ನು ಯಾವ ರೀತಿ ಪರಿಹರಿಸಬೇಕು ಹಾಗೂ ನಿವಾರಣೆ ಮಾಡಬೇಕು ಎಂಬುದರ ಕಡೆಗೆ ನಾವು ಸಾಕಷ್ಟು ಗಮನ ಕೊಡುತ್ತಿಲ್ಲ. ಕಳೆದ 36 ವರ್ಷಗಳಿಂದ ನಾವು ರೈತರ ಬೇಡಿಕೆಗಳನ್ನು ಈಡೇರಿಸುವ ಪರಿಸ್ಥಿತಿಗೆ ಇನ್ನೂ ಬರಲಿಲ್ಲ. ಆ ಜನರಿಗೆ ಸರಿಯಾಗಿ ಕುಡಿಯುವ ನೀರನ್ನು ಒದಗಿಸಿಕೊಡುವುದಕ್ಕೆ ಇನ್ನೂ ಆಗಿಲ್ಲ. ಅದೇ ಬೆಂಗಳೂರು ನಗರದ 7-8 ಜನ ಶಾಸಕರಿಗೆ ಬೆಂಗಳೂರು ನಗರಕ್ಕೆ ಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುವಂತಹ ಸಾಮರ್ಥ್ಯ ಇದೆ. ಆದರೆ ಈ ಒಂದು ಸಾಮರ್ಥ್ಯ ನಮ್ಮಂತಹ 180 ಜನ ಶಾಸಕರಿಗೆ ಇಲ್ಲದಂತೆ ಆಗಿದೆ, ಹಳ್ಳಿಗಾಡಿನಲ್ಲಿರುವ ನಮ್ಮ ತಂದೆ ತಾಯಿಗಳ ಹಾಗೂ ಅಣ್ಣ ತಮ್ಮಂದಿರ ಹಿತವನ್ನು ಮರೆತು ಹೇಗೋ 5 ವರ್ಷಗಳನ್ನು ತುಂಬಿಸುತ್ತೇವೆ. ರೈತರ ಬೇಡಿಕೆಗಳ ಬಗ್ಗೆ ಹೆಚ್ಚು ಲಕ್ಷ್ಯ ಕೊಡಬೇಕಾಗಿದೆ. ಈ ಬಗ್ಗೆ ನಾನು ಕೆಲವು ಸಲಹೆಗಳನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ.

1-00 P.M.

ಈಗ ಪಟ್ಟಣಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭ ಮಾಡಿ ಅಲ್ಲಿ ಮಕ್ಕಳಿಗೆ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಕೊಡಿಸಿ ಅಲ್ಲಿ ಮಕ್ಕಳ ಮನಸ್ಸನ್ನು ವಿದ್ಯಾಭ್ಯಾಸದ ಕಡೆಗೆ ತಿರುಗಿಸುವಂಥ ಕೆಲಸವನ್ನು ಮಾಡುತ್ತಾರೆ. ಆದರೆ ಇಂಥ ಒಂದು ವ್ಯವಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಸಗಳಿಗೂ ಕೂಡ ಇಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತೆ ಇವತ್ತಿನ ದಿವಸ ನಮ್ಮ ರೈತರು ಕೇಳತಕ್ಕಂಥ ಮುಖ್ಯವಾದಂಥ ಬೇಡಿಕೆಗಳು ಯಾವುವೆಂದರೆ ಯಾರು ಬ್ಯಾಂಕ್‌ಗಳಲ್ಲಿ ಸಾಲವನ್ನು ಪಡೆದುಕೊಂಡಿರುತ್ತಾರೋ ಅಂಥವರು ಕೊಡಬೇಕಾದಂಥಾ ಬಡ್ಡಿಯನ್ನು ಬಿಟ್ಟು ಬಿಡಿ ಎಂದು ಕೇಳುತ್ತಿದ್ದಾರೆ ಆದರೆ ಇದು ಬಹಳ ಮಹತ್ವದ ವಿಷಯವೇನು ಅಲ್ಲ. ಸ್ವಾಮಿ, ಇವತ್ತಿನ ದಿವಸ ರಿಜರ್ವ್ ಬ್ಯಾಂಕಿನವರು ಯಾವ ಬಡ್ಡಿಯಲ್ಲಿ ನಿಮಗೆ ಸಾಲವನ್ನು ಕೊಡುತ್ತಾರೋ ಆ ಬಡ್ಡಿಯ ಜೊತೆಗೆ ಒಂದು ಅಥವಾ ಎರಡು ರೂಪಾಯಿಗಳನ್ನು ಜಾಸ್ತಿ ಮಾಡಿ ರೈತರಿಗೆ ಸಾಲ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬಹುದೆಂದು ನಾನು ತಿಳಿದುಕೊಂಡಿದ್ದೇನೆ ಈ ಅಪೆಕ್ಸ್ ಬ್ಯಾಂಕಿನಿಂದ ಡಿಸ್ಟ್ರಿಕ್ಟ್ ಬ್ಯಾಂಕಿಗೆ, ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿಗೆ ಹಣ ಹೋಗಿ ಮುಟ್ಟುವಷ್ಟರಲ್ಲಿ ಶೇಕಡ 6-7 ಪರ್ಸೆಂಟ್ ಜಾಸ್ತಿ ಬಡ್ಡಿಯು ರೈತರ ಮೇಲೆ ಬೀಳುತ್ತದೆ ಆದ್ದರಿಂದ ನಾನು ಹೇಳುವುದೇನೆಂದರೆ, ರಿಜರ್ವ್ ಬ್ಯಾಂಕಿನಿಂದ ನೇರವಾಗಿ ಅಪೆಕ್ಸ್ ಬ್ಯಾಂಕಿಗೆ ಬಂದು ಅಪೆಕ್ಸ್ ಬ್ಯಾಂಕಿನಿಂದ ನೇರವಾಗಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮುಖಾಂತರ ರೈತರಿಗೆ ಸಾಲವನ್ನು ಒದಗಿಸಿಕೊಟ್ಟರೆ ಇದರಿಂದ ಯಾವ ತೊಂದರೆಯೂ ರೈತರಿಗೆ ಆಗುವುದಿಲ್ಲ-ಮತ್ತು ಇದರಿಂದ ಸಕಾಲದಲ್ಲಿ ರೈತರಿಗೆ ಸಾಲ ದೊರೆಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ, ಇವತ್ತಿನ ದಿವಸ ರೈತರಿಂದ ಹೆಚ್ಚು ಬಡ್ಡಿ ಹಣವನ್ನು ವಸೂಲು ಮಾಡಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರು ಮತ್ತು ಇತರೆ ಅಧಿಕಾರಿಗಳು ಇಡೀ ರಾಷ್ಟ್ರವನ್ನು ಸುತ್ತಿಕೊಂಡು ಬರುವುದಕ್ಕೆ ಆ ಹಣವನ್ನು ಉಪಯೋಗ ಮಾಡುತ್ತಿದ್ದಾರೆ. ಅವರು ಮಾಡುತ್ತಿರುವಂಥ ವ್ಯಾಪಾರಗಳನ್ನು ನೋಡಿದರೆ ನಮಗೆ ತಲೆ ತಿರುಗಿ ಬರುತ್ತದೆ.

ಶ್ರೀ ಪಿ ರಾಂದೇವ್,- ಸ್ವಾಮಿ, ಬ್ಯಾಂಕಿನ ಬೋರ್ಡ್ ಮೀಟಿಂಗ್‌ನಲ್ಲಿ ವಿಸ್ಕಿಯನ್ನು ತರಿಸಿ ಕುಡಿದಿರತಕ್ಕಂಥ ನಿದರ್ಶನಗಳುಕೂಡ ಇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.- ಸ್ವಾಮಿ, ಈ ವಿಷಯ ಮಾನ್ಯಮಂತ್ರಿಗಳಾದಂಥ ಶ್ರೀಮಾನ್ ಚಾಲಪ್ಪನವರಿಗೂ ಕೂಡ ಗೊತ್ತಿದೆ ಆದರಿಂದ ತಾವು ವಸೂಲು ಮಾಡುತ್ತಿರುವ ಬಡ್ಡಿಯ ಪ್ರಮಾಣವನ್ನು ಸ್ವಲ್ಪ ಕಡಿಮೆ ಮಾಡಿ ಎಂದು ನಾನು ಸಲಹೆಮಾಡುತ್ತೇನೆ. ಮತ್ತೆ ಇವತ್ತಿನ ದಿವಸ ಸರ್ಕಾರದವರು ರೈತರಿಗೆ ಒದಗಿಸಿಕೊಡುತ್ತಿರುವ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳಿಗೆ ರಿಯಾಯಿತಿ ಕೊಟ್ಟು ಸರ್ಕಾರಕ್ಕೆ ಸರಿಯಾಗಿ ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು ಮತ್ತು ಆ ರೀತಿ ಒದಗಿಸಿಕೊಟ್ಟಂತಹ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳು ದೋಷಪೂರ್ಣವಾಗಿದ್ದರೆ ಅಂಥದ್ದನ್ನು ಸರ್ಕಾರದವರು ಕಂಡು ಹಿಡಿದು ಯಾರು ಈ ಕೆಲಸವನ್ನು ಮಾಡುತ್ತಾರೋ ಅಂಥವರಿಗೆ ಸರ್ಕಾರದವರು ಉಗ್ರವಾದಂಥ ಶಿಕ್ಷೆ ಕೊಡುವಂಥ ಏರ್ಪಾಡು ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಮತ್ತು ಇಡೀ ರಾಷ್ಟ್ರದಲ್ಲಿಯೇ ನಿರುದ್ಯೋಗ ಸಮಸ್ಯೆ ಎಂಬುದು ಬಹಳ ವ್ಯಾಪಕವಾಗಿ ಬೆಳೆದಿದೆ. ಹಳ್ಳಿಗಾಡು ಪ್ರದೇಶ

ಗಳಿಂದ ಯಾರ್ಯಾರು ಬಡ ನಿರುದ್ಯೋಗಿಗಳು ಬರುತ್ತಾರೋ ಅವರಿಗೆ ಇಂತಿಷ್ಟು ಹುದ್ದೆಗಳನ್ನು ಮೀಸಲಾಗಿಡಬೇಕೆಂದು ನಾನು ಈ ಹಿಂದೆ ಸಲಹೆ ಮಾಡಿದೆ. ಅದೇ ರೀತಿಯಲ್ಲಿ ಇಂಜನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಕೂಡ ಸೀಟುಗಳನ್ನು ಮೀಸಲಾಗಿಡಬೇಕೆಂದು ನಾನು ಕೇಳಿಕೊಂಡಿದ್ದೆ. ಹಳ್ಳಿಗಾಡು ಪ್ರದೇಶಗಳಿಂದ ಬಂದಂಥ ಮಕ್ಕಳು ಹೆಚ್ಚು ಹೆಚ್ಚು ಹಣವನ್ನು ಕೊಟ್ಟು ಈ ಇಂಜನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ದೊರಕಿಸಿಕೊಳ್ಳುವುದು ಕಷ್ಟವಾಗುತ್ತದೆ. ಇನ್ನು ನಮ್ಮ ರಾಜ್ಯದಲ್ಲಿ ಹೊಗೆಸೊಪ್ಪು ಬೆಳೆಯತಕ್ಕಂಥ ಬೆಳೆಗಾರರಿಗೆ ಬಹಳ ಕಷ್ಟವಾಗಿದೆ. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಆ ಭಾಗದ ರೈತರು ಎಷ್ಟು ಕಷ್ಟಪಡುತ್ತಿದ್ದಾರೆ ಎಂಬುದು ತಮಗೂ ಕೂಡ ಗೊತ್ತಿದೆ. ಮತ್ತು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಸ್ವಾಮಿ, ಒಂದು ಕೆ ಜಿ ಹೊಗೆ ಸೊಪ್ಪಿಗೆ ತಾವು ಕೊಡುತ್ತಿರುವುದು ಕೇವಲ 8 ರೂಪಾಯಿಗಳು ಮಾತ್ರ. ಆದರೆ ಅವರು ಹೆಚ್ಚು ಕೇಳುತ್ತಿರುವುದು ಇನ್ನು 4 ರೂಪಾಯಿಗಳು ಅಂದರೆ ಒಟ್ಟು ಒಂದು ಕೆ.ಜಿ. ಹೊಗೆ ಸೊಪ್ಪಿಗೆ 12 ರೂಪಾಯಿಗಳು ಮಾತ್ರ. ಶ್ರೀಮಾನ್ ದೇವರಾಜ ಅರಸ್‌ರವರು ಆ ಭಾಗದ ಪರಿಸ್ಥಿತಿಯನ್ನು ನೋಡಿಕೊಂಡು ಬರಲು ನನ್ನನ್ನು ಕಳುಹಿಸಿಕೊಟ್ಟಿದ್ದರು. ನನ್ನ ಜೊತೆಯಲ್ಲಿ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಪಿ. ಪಿ. ಹೆಗಡೆಯವರು ಕೂಡ ಬಂದಿದ್ದರು. ಸ್ವಾಮಿ ಇವತ್ತು ಒಂದು ಕೆ. ಜಿ. ಹೊಗೆಸೊಪ್ಪಿಗೆ ತಾವು 8 ರೂಪಾಯಿ ಕೊಟ್ಟು ಕೊಂಡುಕೊಂಡು ಹೋಗಿ ಅದರಿಂದ ಬೀಡಿ ತಯಾರು ಮಾಡಿದರೆ ತಮಗೆ ಒಂದು ಕೆ. ಜಿ.ಗೆ ಸುಮಾರು 125 ರೂಪಾಯಿಗಳು ಸಿಗುತ್ತದೆ. ಆದ್ದರಿಂದ ಸರ್ಕಾರದವರು ಒಂದು ಕೆ. ಜಿ. ಹೊಗೆಸೊಪ್ಪಿಗೆ 12 ರೂಪಾಯಿಗಳ ಪರಿಹಾರವನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಒಂದು ವ್ಯವಸ್ಥೆಯನು ಮಾಡಬೇಕೆಂದು ನಾನು ಕೇಳಿಕೊಳುತ್ತೇನೆ. ಇನ್ನು ಹತ್ತಿ ಬೆಳೆಯ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನಮ್ಮ ಮಾನ್ಯ ಕೆ. ಹೆಚ್. ಪಾಟೀಲ್‌ರವರು ಒಂದು ಯೋಜನೆಯನ್ನು ಮಾಡಿದ್ದಾರೆ. ಅದು ಏನೆಂದರೆ ಹತ್ತಿಯನ್ನು ಮೂರು ಪ್ರಮಾಣದಲ್ಲಿ ವಿಂಗಡಣೆ ಮಾಡುತಾರೆ. ಉತ್ತಮವಾದ ಹತ್ತಿಯನ್ನು ಒಂದು ಕಡೆ ಶೇಕರಣೆಮಾಡುತ್ತಾರೆ. ಮಧ್ಯಮ ಪ್ರಮಾಣದ ಹತ್ತಿಯನ್ನು ಒಂದು ಕಡೆ ಶೇಕರಣೆ ಮಾಡುತ್ತಾರೆ. ತೀರಾ ಕಳಪೆ ಮಟ್ಟದ ಹತ್ತಿಯನ್ನು ಒಂದು ಕಡೆ ಶೇಕರಣೆ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಹತ್ತಿಗೆ ಒಳ್ಳೆಯ ಬೆಲೆ ಸಿಗುತ್ತದೆ.

ಹತ್ತಿಯನ್ನು ಯಾರು ಬೆಳೆಯುತ್ತಾರೋ ಅವರಿಗೆ ಹೆಚ್ಚು ಬೆಲೆಯನ್ನು ಕೊಡಿಸಿ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ ಇನ್ನು ತರಕಾರಿ ಬೆಳೆಯತಕ್ಕಂಥವರ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಇವತ್ತು ಬೆಂಗಳೂರು ಸಿಟಿಗೆ ರೈತರು ಬೆಳೆದಂಥ ತರಕಾರಿಯನ್ನು ತೆಗೆದುಕೊಂಡು ಬಂದು ಮಾರಾಟ ಮಾಡಿದರೆ ಅತನಿಗೆ ಅದರಿಂದ ಒಳ್ಳೆಯ ಬೆಲೆ ಸಿಗುತ್ತಿಲ್ಲ. ಆದರೆ ಅದೇ ಒಬ್ಬ ಸಣ್ಣ ವ್ಯಾಪಾರದಾರರು ಗ್ರಾಹಕರಿಗೆ ತರಕಾರಿಯನ್ನು ಮಾರಾಟ ಮಾಡಿದರೆ ಅವನಿಗೆ ಹೆಚ್ಚು ಹಣ ದೊರೆಯುತ್ತದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಸರ್ಕಾರದವರೇ ನೇರವಾಗಿ ರೈತರಿಂದ ತರಕಾರಿಯನು ಕೊಂಡುಕೊಂಡು ಬೊಂಬಾಯಿ ಇತರೇ ದೊಡ್ಡ ದೊಡ್ಡ ಪಟ್ಟಣಗಳಿಗೆ ಕಳುಹಿಸಿ ಕೊಟ್ಟರೆ ನಮ್ಮ ಸರ್ಕಾರಕ್ಕೆ ಹೆಚ್ಚು ಲಾಭ ಬರುತ್ತದೆ. ಈ ಒಂದು ಕೆಲಸವನ್ನು ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿರುತ್ತೇನೆ ಇನ್ನು ಆಹಾರ ಪದಾರ್ಥಗಳನ್ನು ಶೇಕರಣೆ ಮಾಡುವಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನಾವು ಒಂದು ಕ್ವಿಂಟಾಲ್ ಭತ್ತವನ್ನು 160 ರೂಪಾಯಿಗಳಿಗೆ ಕೊಂಡುಕೊಳ್ಳುತ್ತೇವೆಂದು. ನಮ್ಮ ಆಹಾರ ಮಂತ್ರಿಯವರು ಹೇಳಿದರು ಅದರೆ ಇವತ್ತಿನ ದಿವಸ ಒಂದು ಕ್ವಿಂಟಾಲ್ ಭತ್ತದ ಬೆಲೆ ಸುಮಾರು 170 ರೂಪಾಯಿಗಳಿಗೆ ಬಂದಿದೆ. ಸ್ವಾಮಿ ನಮ್ಮ ಮಾನ್ಯ ಮಂತ್ರಿಗಳು ಇನ್ನು ಸುಗ್ಗಿಯ ಕಾಲವೆಂದೇ ತಿಳಿದುಕೊಂಡಿದ್ದಾರೆ. ಆದರೆ ಸುಗ್ಗಿಯ ಕಾಲ ಹೋಗಿದೆ. ಈಗ ಸುಗ್ಗಿಯ ಕಾಲ ಮುಗಿದು ಒಂದು ತಿಂಗಳಾಗುತ್ತಾ ಬಂದಿದೆ. ಮತ್ತೆ ಸುಗ್ಗಿಯ ಕಾಲ ಬರಬೇಕಾದರೆ ಜೂನ್ ಮತ್ತು ಜುಲೈ ತಿಂಗಳವರೆಗೆ ಕಾಯಬೇಕಾಗುತ್ತದೆ. ಆದರಿಂದ ಮಾನ್ಯ ಮಂತ್ರಿಗಳು ಬರೀ ಶಾಸನ ಸಭೆಯಲ್ಲಿ ನಾವು ಆಹಾರ ಪದಾರ್ಥಗಳನ್ನು ಶೇಕರಣೆ ಮಾಡುತ್ತೇವೆಂದು ಹೇಳಿದ್ದಾರೆ ಆಗುವುದಿಲ್ಲ ಆದ್ದರಿಂದ ಆದಷ್ಟು ಬೇಗ ಆಹಾರ ಪದಾರ್ಥಗಳನ್ನು ಸಂಗ್ರಹಣೆ ಮಾಡುವಂಥ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ನಮ್ಮ ಪಶು ಸಂಗೋಪನಾ ಮಂತ್ರಿಗಳು ಸದನದಲ್ಲಿ ಮಾತನಾಡುತ್ತಾ ಹಳ್ಳಿಗಾಡು ಪ್ರದೇಶಗಳಲ್ಲಿ ಮಿಶ್ರ ತಳಿ ಕೇಂದ್ರವನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು' ಬಹಳ ಸಂತೋಷ, ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಮೂರು ನಾಲ್ಕು ತರಹದ ಮಿಶ್ರ ತಳಿ ರಾಸುಗಳು ಇವೆ ಹಳ್ಳಿಕಾರು ತಳಿ ಇದೆ. ಅಮೃತಮಹಲ್ ತಳಿ ಇದೆ ಮತ್ತು ದೇವಣಿ ತಳಿ ಇದೆ ಈ ಮೂರು ತಳಿಗಳು ಸಹ ಹೆಚ್ಚು ಪ್ರಸಿದ್ಧವಾದ ತಳಿಗಳು, ಈ ಮೂರು ತಳಿಯ ಮತ್ತು ಬೇರೆ ಬೇರೆ ಜಾತಿಯ ತಳಿಗಳ ವೀರ್ಯವನ್ನು ಶೇಖರಣೆ ಮಾಡಿ, ಪ್ರಯೋಗಶಾಲೆಯಲ್ಲಿ ಕ್ರಾಸ್ ಮಾಡಿ ಹಾಲನ್ನು ಹೆಚ್ಚು ಉತ್ಪಾದನೆ ಮಾಡತಕ್ಕ ಹೊಸ ತಳಿಯನ್ನು ಕಂಡು ಹಿಡಿಯುವ "ತಳಿ ಅಭಿವೃದಿ ಕೇಂದ್ರ" ಮಾಡು

ವುದರಿಂದ ಅನುಕೂಲವಾಗುತ್ತದೆ. ತಳಿ ಅಭಿವೃದ್ಧಿ ಮಾಡತಕ್ಕ ಕೇಂದ್ರಗಳನ್ನು ಮಾಡಿ ಹೈನುಗಾರಿಕೆ ಉದ್ಯಮ ಹೆಚ್ಚು ಮುಂದುವರೆಯುವಂತೆ ಮಾಡ ಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ನಮ್ಮ ಸರ್ಕಾರ ಮಂಡಿಸಿರತಕ್ಕ.........

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಹುಚ್ಚಮಾಸ್ತಿಗೌಡರು ಆ ಕಡೆ ಇದ್ದರೂ ನಮ್ಮ ಸರ್ಕಾರವೆಂದ ಹೇಳುತಿದ್ದಾರೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ.— ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಜನ ನಮಗೆ ಓಟು ಕೊಟ್ಟ ಮೇಲೆ ಚುನಾವಣೆಯಲ್ಲಿ ಆರಿಸಿ ಬಂದಂತಹ ಸದಸ್ಯರಿಗೆಲ್ಲಾ ಸೇರಿದ್ದು ಈ ಸರ್ಕಾರ. ನಿಮ್ಮ ಪಕ್ಷ ದವರು ಮಾತ್ರ ನಮ್ಮ ಸರ್ಕಾರವೆಂದು ಹೇಳಬೇಕೆಂದೂ ಬೇರೆ ಪಕ್ಷದವರು ನಮ್ಮ ಸರ್ಕಾರದವರೆಂದು ಹೇಳ ಬಾರದೆಂದು ತಿಳಿದುಕೊಳ್ಳಬೇಡಿ, ಈ ಸರ್ಕಾರದ ಮೇಲೆ ಈ ಮನೆಯಲ್ಲಿರತಕ್ಕ ಸದಸ್ಯರಿಗೆಲ್ಲಾ ಅಧಿಕಾರ-ವಿದೆ. ಈ ಸರ್ಕಾರ ನಮಗೆ ಮಾತ್ರ, ಬೇರೆ ಪಕ್ಷದವರು ಆರಿಸಿ ಬಂದಿರುವ ಕ್ಷೇತ್ರಗಳಲ್ಲಿರುವ ಜನರು ನಮ್ಮ ಪಕ್ಷಕ್ಕೆ ಓಟು ಕೊಟ್ಟಿಲ್ಲ, ಅವರು ಓಟು ಕೊಡದೆ ಇರುವುದರಿಂದ ಈ ಸರ್ಕಾರದ ಮೇಲೆ ಅವರಿಗೆ ಹಕ್ಕಿಲ್ಲ-ವೆಂದು ತಿಳಿದು ಕೊಳ್ಳಬೇಡಿ. ಚುನಾವಣೆ ಆದಮೇಲೆ, ಒಂದು ಸರ್ಕಾರ ರಚನೆಯಾದ ಮೇಲೆ ರಾಜ್ಯದ ಎಲ್ಲಾ ಜನರಿಗೂ ಈ ಸರ್ಕಾರದ ಮೇಲೆ ಹಕ್ಕಿರುತ್ತದೆ. ಇದನ್ನು ಮರೆಯಬೇಡಿ. ಇಷ್ಟು ಹೇಳಿ ನನಗೆ ಮಾತ ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರತಕ್ಕ ಆಯವ್ಯಯಪತ್ರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಾ, ಕೆಲವು ವಿಷಯಗಳನ್ನು ಪ್ರಸ್ತಾಪಮಾಡುತ್ತಾನೆ. ಈ ಆಯವ್ಯಯ ಪತ್ರದಲ್ಲಿ ಕಾರ್ಮಿಕರ ಬಗ್ಗೆ ಏನೂ ತಿಳಿಸಿಲ್ಲ. 'ಕಾರ್ಮಿಕ ಭವನ' ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಎಲ್ಲಿ ನಿರ್ಮಾಣ ಮಾಡುತ್ತಾರೋ ಗೊತ್ತಿಲ್ಲ. ಎಲ್ಲಿ ಮಾಡುತ್ತೇವೆಂದು ತಿಳಿಸದೆ ಇರುವುದರಿಂದ, ಕಾರ್ಮಿಕಭವನ ಎಲ್ಲಿ ನಿರ್ಮಾಣ ವಾಗುತ್ತದೆ ಎಂಬುದು ಅರ್ಥವಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಕಳೆದ ವರ್ಷ ಬಜೆಟ್ಟಿನಲ್ಲಿ ಕಾರ್ಮಿಕರ ಬಗ್ಗೆ ಬಹಳ ಜಾಸ್ತಿ ಯಿತ್ತು.

ಶ್ರೀ ಪಂಪಾಪತಿ.—ಕಾರ್ಮಿಕರನ್ನು ಇಷ್ಟೊಂದು ಅಲಕ್ಷಿಸುವುದು ಸಾಧುವಾದುದಲ್ಲ. ಆಯವ್ಯಯ ಪತ್ರದ 17ನೇ ಪುಟ ಐಟಂ ನಂ. 48ರಲ್ಲಿ ಕಾರ್ಮಿಕ ಭವನ ನಿರ್ಮಾಣಕ್ಕೆ ನಿವೇಶನ ಆರಿಸಲಾಗಿದೆ. ನಿರ್ಮಾಣ ಕಾರ್ಯ ಶೀಘ್ರವೇ ಆರಂಭಗೊಳ್ಳುವುದು. ಎಂದು ಹೇಳಿ ಅಷ್ಟಕ್ಕೆ ಬಿಟ್ಟಿದ್ದಾರೆ. ಸರ್ಕಾರ ಕಾರ್ಮಿಕರನ್ನು ಬಹಳ ಅಲಕ್ಷಮಾಡಿದೆ ದಯವಿಟ್ಟು ಸರ್ಕಾರದವರು ಕಾರ್ಮಿಕರನ್ನು ಅಲಕ್ಷ ಮಾಡದೆ ಅವರ ಯೋಗ್ಯತೆಗೆ ತಕ್ಕ ಪುರಸ್ಕಾರವನ್ನು ನೀಡಬೇಕು. ಮತ್ತೊಂದು ವಿಚಾರಕ್ಕೆ ಈ ಸರ್ಕಾರವನ್ನು ಅಭಿ ನಂದಿಸ ಬೇಕಾಗಿದೆ. ಅದೇನೆಂದರೆ ಭೂಹೀನ ಕೃಷಿ ಕಾರ್ಮಿಕ ವರ್ಗಕ್ಕೆ ಸೇರಿದ ಮಹಿಳೆಯರಿಗೆ ಹೆರಿಗೆಯ ಮುನ್ನ ಮತ್ತು ಹೆರಿಗೆಯ ಅನಂತರದ ಅವಧಿಯಲ್ಲಿ ಮೂರು ತಿಂಗಳ ಕಾಲ ತಿಂಗಳಿಗೆ 50 ರೂಪಾಯಿಗಳ ಹೆರಿಗೆ ಭತ್ಯೆ ಕೊಡುವ ಯೋಜನೆ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಈ ವಿಷಯವನ್ನು ಮೂರ್ನಾಲ್ಕು ವರ್ಷಗಳಿಂದ ಸರ್ಕಾರಕ್ಕೆ ಹೇಳುತ್ತಾ ಬಂದಿದ್ದೆ, ಮಾನ್ಯ ಮುಖ್ಯಮಂತ್ರಿಗಳು ಈ ಸಾರಿ ಗಮನಕ್ಕೆ ತೆಗೆದು ಕೊಂಡು ಹೆರಿಗೆ ಭತ್ಯವನ್ನು ಕೊಟ್ಟಿದ್ದಾರೆ, ಈಗ ಕೊಟ್ಟಿರುವ ಹೆರಿಗೆ ಭತ್ಯ ಕಡಿಮೆಯಾಗಿದೆ. ಈಗ ಪ್ರಾರಂಭದಲ್ಲಿ 50 ರೂಪಾಯಿ ಕೊಡುತ್ತಿದ್ದಾರೆ ಇದು ಹೆಚ್ಚಾಗಬೇಕೆಂದು ನನ್ನ ಅಭಿಪ್ರಾಯ ಯಾರು ಗಮನಿಸದೆ ಇದ್ದಂತಹ ವಿಷಯ ಇದು. ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ ಆದಕ್ಕಾಗಿ ನಾನು ಮುಖ್ಯ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆಹಾರ ಧಾನ್ಯಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದ್ದಾರೆ ಅದಕ್ಕೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಲವೊಂದು ಪಾನೀಯಗಳ ಮೇಲಿನ ತೆರಿಗೆ ಯನ್ನು 40 ಪರ್ಸೆಂಟ್‌ನಿಂದ 10 ಪರ್ಸೆಂಟ್‌ಗೆ ಇಳಿಸಿ 30 ಪರ್ಸೆಂಟ್ ಕಡಿಮೆ ಮಾಡಿದ್ದಾರೆ, ಇವುಗಳ ಮೇಲಿನ ತೆರಿಗೆಗಳನ್ನು ಏತಕ್ಕೋಸ್ಕರ ಕಡಿಮೆ ಮಾಡಿದ್ದೀರಿ ? ಇವುಗಳನ್ನೆಲ್ಲಾ ಹಣವಂತರು ಸೇವನೆ ಮಾಡುತ್ತಾರೆ ಇವುಗಳಿಂದ ಸರ್ಕಾರಕ್ಕೆ ಆದಾಯ ಜಾಸ್ತಿ ಬರುತ್ತಿತ್ತು. 185 ಕೋಟಿ ರೂಪಾಯಿ ಕೊರತೆ ತೋರಿಸಿ ಇಂತಹವುಗಳಿಗೆಲ್ಲಾ ತೆರಿಗೆ ಕಡಿಮೆ ಮಾಡಿರುವುದು ಸರಿಯಲ್ಲ. ಶ್ರೀಮಂತರು ಸೇವನೆ ಮಾಡತಕ್ಕ ಪಾನೀಯಗಳಿಗೆಲ್ಲಾ ಹೆಚ್ಚು ತೆರಿಗೆಯನ್ನು ಹಾಕಬೇಕು. ಥ್ರೀಸ್ಟಾರ್, ಫೋರ್‌ಸ್ಟಾರ್, ಫೈವ್ ಸ್ಟಾರ್ ಹೋಟೆಲುಗಳ ಮೇಲೆ ಇದ್ದಂತಹ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ, ಸಾಮಾನ್ಯ ಜನರು ಉಪ ಯೋಗಿಸತಕ್ಕಂತಹ ಪದಾರ್ಥಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದ್ದರೆ ಅವರಿಗೆ ಅನುಕೂಲ

ವಾಗುತ್ತಿತ್ತು. ಶ್ರೀಮಂತರು ಉಪಯೋಗಿಸತಕ್ಕಂತಹ ಪದಾರ್ಥಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿರತಕ್ಕದ್ದು ಅಷ್ಟೊಂದು ಸೂಕ್ತವಲ್ಲ ಇದನ್ನೆಲ್ಲಾ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಗರಸಭೆಗಳ ಬಗ್ಗೆ ಏನನ್ನೂ ಹೇಳಿಲ್ಲ. ಇವತ್ತು ನಗರಸಭೆಗಳಿಗೆ ಸರ್ಕಾರ ಅನುಧಾನ ರೂಪದಲ್ಲಿ ಸಹಾಯ ಕೊಡುತ್ತಿದೆ. ನಗರಸಭೆಗಳಲ್ಲಿ ಅಭಿವೃದ್ಧಿ ಕಾರ್ಯಗಳ ಕೆಲಸ ಬಹಳ ಕುಂಠಿತವಾಗುತ್ತಿದೆ. ನಗರಸಭೆಗಳ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸರ್ಕಾರ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು. ನಗರಸಭೆಗಳಿಗೆ ಹೆಚ್ಚಿನ ಸಹಾಯವನ್ನು ಕೊಡುವುದಕ್ಕೆ ಸರ್ಕಾರ ಮುಂದೆ ಬರಬೇಕೆಂದು ಕೇಳಿಕೊಳ್ಳುತ್ತೇನೆ ನೀವು ಹೆಚ್ಚು ಸಹಾಯ ಮಾಡದಿದ್ದರೆ ನಗರಸಭೆಗಳು ಬೆಳೆಯುತ್ತಾ ಹೊಗುತ್ತವೆ, ಆದರೆ ನಗರಾಭಿವೃದ್ಧಿ ಕೆಲಸಕಾರ್ಯಗಳು ಮಾತ್ರ ಆಗುವುದಿಲ್ಲ. ಅಲ್ಲಿರತಕ್ಕ ನಾಗರಿಕರಿಗೆ ತೊಂದರೆಯಾಗಿ ರೋಗರುಜಿನಗಳು ಹರಡುವುದಕ್ಕೆ ಅನುಕೂಲ ವಾಗುತ್ತದೆ. ಇದನ್ನು ದಯವಿಟ್ಟು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತು ಕೊಳಚೆಪ್ರದೇಶಗಳ ನಿರ್ಮೂಲನದ ಬಗ್ಗೆ ಆಯವ್ಯಯ ಪತ್ರದಲ್ಲಿ ಏನನ್ನೂ ಹೇಳಿಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲೂ ಕೊಳಚೆಪ್ರದೇಶಗಳು ಇವೆ. ಕೊಳಚೆಪ್ರದೇಶಗಳಲ್ಲಿರತಕ್ಕ ಜನರೂ ವಸತಿ ಇಲ್ಲದೆ ಇರುವುದರಿಂದ ಅಲ್ಲಿವಾಸವಾಗಿದ್ದಾರೆ. ಕೊಳಚೆಪ್ರದೇಶದಲ್ಲಿರತಕ್ಕ ಜನರಿಗೆ ಸರಿಯಾದ ಸೌಕರ್ಯಗಳನ್ನು ಒದಗಿಸಿ ಕೊಡುವ ಬಗ್ಗೆ ಈ ಆಯವ್ಯಯಪತ್ರದಲ್ಲಿ ತಿಳಿಸದೆ ಇರುವುದರಿಂದ ಬಡ ಜನರಿಗೆ ಬಹಳ ತೊಂದರೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಗಣನೆಗೆ ತೆಗೆದುಕೊಂಡು ಸಾಮಾನ್ಯ ಜನರ ಹಿತರಕ್ಷಣೆ ಮಾಡತಕ್ಕಂಥ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಇಷ್ಟೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮಚಂದ್ರ ರಾವ್ (ಉಲ್ಲಾಳ್).—ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ಹಾಳಾಗಿದೆ. ಅದರ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ನಿಮಗೆಲ್ಲರಿಗೂ ಇರಬೇಕಾದುದು ಬಹಳ ಆಗತ್ಯ. 1983 84 ರಲ್ಲಿ 550 ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಬಜೆಟ್ ತಂದಿದ್ದಾರೆ. ಅದು ಅಲ್ಲದೇ ಕಂಟಿನ್‌ಜೆನ್ಸಿ ಫಂಡ್ಸ್ 60 ಕೋಟಿ ರೂಪಾಯಿಯಾಗಿದೆಯೆಂದು ಹೇಳಿ ಆದರ ಬಗ್ಗೆ ಸಭೆಯ ಒಪ್ಪಿಗೆಯನ್ನು ಪಡೆದುಕೊಂಡಿದ್ದಾರೆ. ಹಣ ಹೇಗೆ ಖರ್ಚಾಗುತ್ತಿದೆ, ನಮ್ಮ ಸರ್ಕಾರ ಹಿಡಿತ ಮೀರಿ ಹೋಗುತ್ತಿದೆ ಎಂಬುದಕ್ಕೆ ಈ ಎರಡೂ ಉದಾಹರಣೆಗಳಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಈ ವರ್ಷ 269.61 ಕೋಟಿ ರೂಪಾಯಿ ಕೊರತೆಯಿದೆ. ಈ ಕೊರತೆ ಬಹಳ ಜಾಸ್ತಿ. 87 ಕೋಟಿ ಟ್ಯಾಕ್ಸ್ ಹಾಕಿದ್ದಾರೆ. ಈ ಟ್ಯಾಕ್ಸ್ ಕೂಡ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಆದರ ಜೊತೆಗೆ ಟ್ಯಾಕ್ಸ್ ಹಾಕಿದ ಮೇಲೆ 181.67 ಕೋಟಿ ಕೊರತೆ ಉಳಿಯುತ್ತದೆ. ಇದೇನು ಸಾಮಾನ್ಯವಾದ ಕೊರತೆಯಲ್ಲ. ಇಷ್ಟು ಗಂಭೀರವಾದ ಆರ್ಥಿಕ ಸ್ಥಿತಿ ಇರುವಾಗ ಎರಡು ಕೆಲಸ ನಡೆಯಬೇಕು. ಒಂದು, ಕೇಂದ್ರಸರ್ಕಾರದಿಂದ ಹೆಚ್ಚು ಹಣ ಪಡೆಯಲಿಕ್ಕೆ ಪ್ರಯತ್ನಿಸಬೇಕು. ಅಂದರೆ ಇಂದಿರಾಗಾಂಧಿ ಅಥವಾ ಕೇಂದ್ರಸರ್ಕಾರದ ಕಾಲಿಗೆ ಬೀಳಬೇಕಾದುದ್ದು ಇಲ್ಲ ಸ್ಪಷ್ಟವಾದ ನೀತಿ ನಿರೂಪಣೆ ಬೇಕು. ಕೆಲವು ಸೂಚನೆಗಳನ್ನು ಹಿಂದೆ ನಾನು ಕೊಟ್ಟಿದ್ದೆ. ಇದರಲ್ಲಿ ಪಕ್ಷ ಪಂಗಡ ಭೇದವಿಲ್ಲದೆ ನಾವೆಲ್ಲರೂ ಬೆಂಬಲ ಕೊಡಬೇಕು. ಇದಕ್ಕೆ ಒತ್ತಾಯ ತರಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಇದರಲ್ಲಿ ಬರಬೇಕಾದಂಥ ಹಣ ಉದಾಹರಣೆಗೆ, ಪೇಜ್ 44 ರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. "Central plan schemes, Centrally sponsored schemes, Externally aided projects and central pension. The arrears of this assistance are substantial and I have taken up this question with the Government of India"

"While Government of India holds back large amounts for long periods of time, the State has to pay interest on the ways and means advances and on the overdraft from the Reserve Bank of India." ನಮಗೆ ಬರುವಂಥ ಹಣ, ನಾವು ಖರ್ಚು ಮಾಡಿದಂಥ ಹಣ ರಾಷ್ಟ್ರೀಯ ಧ್ಯೇಯ ಧೋರಣೆ ಆಧಾರದ ಮೇಲೆ ಖರ್ಚು ಮಾಡಿದಂಥ ಹಣ ವೇಯ್ಸ್ ಅಂಡ್ ಮೀನ್ಸ್ ಆದರ ಮೇಲೆ ಬಡ್ಡಿ ಕೊಡಬೇಕೆಂದು ಹೇಳಿದರೆ ಹೇಗೆ ? ಇದು ಬಹಳ ಚೆನ್ನಾಗಿದೆ.

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

. "I Would, therefore, urge that the interst rate on ways and means advance be reduced to 5% and that on overdraft to 9%." ಆದ್ದರಿಂದ ನಾನು ಕಾಗ್ರೆಂಸ್ ಬಂಧುಗಳಿಗೆ ಹೇಳುವಂತಾದ್ದು, ಈ ವಿಷಯದಲ್ಲಿ ಪಕ್ಷಾತೀತರಾಗಿ ರಾಜ್ಯದ ಹಿತರಕ್ಷಣೆಯ ದೃಷ್ಟಿಯಿಂದ ಹೋರಾಡಬೇಕು. ನಾಳೆ ಇವರು ಅಧಿಕಾರದಿಂದ ಹೋಗಬಹುದು ಮತ್ತು ನೀವು ಅಧಿಕಾರಕ್ಕೆ ಬರಬಹುದು. ಆದರೆ ಈ ವಿಷಯದಲ್ಲಿ ರಾಜ್ಯಕ್ಕೆ ಎಷ್ಟು ಅನ್ಯಾಯ ಆಗುತ್ತಿದೆ ಎಂಬುದನ್ನು ನೋಡಬೇಕು. ಇದೇ ಸಮಯದಲ್ಲಿ ಇಲ್ಲಿ ಬಹಳ ಮುಖ್ಯವಾದದ್ದು ಪ್ರವಾಹ ಮತ್ತು ಬರಗಾಲಗಳು ಬರುತ್ತವೆ. ಅಂತಹ ಸಮಯದಲ್ಲಿ ಸರ್ಕಾರದ ನಿಲುವು ಏನು ? ಎಷ್ಟು ಚಿಂತನೆ ಮಾಡಿದರೂ ಕೂಡ ನನಗೆ ಅರ್ಥವಾಗುವುದಿಲ್ಲ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ 70-80 ಕೋಟಿ ಅಂದಾಜು ಮಾಡಿದ್ದು. ಆದರೆ ಅವರು ಲೆಕ್ಕ ಹಾಕಿದ್ದು ಸೀಲಿಂಗ್ 73 ಕೋಟಿ. ಅದೇ ರೀತಿಯಲ್ಲಿ ಪ್ರವಾಹ ವಿಚಾರದಲ್ಲಿ ಇಲ್ಲೇ ಅವರ ಪಕ್ಷಭೇಧ ಇರುವಂತಾದ್ದು. ಒಂದು ರಾಜ್ಯ ಸರ್ಕಾರ ಕೇಂದ್ರಸರ್ಕಾರದಿಂದ ಹೆಚ್ಚು ಬರಲಿ ಎಂದು ಎಕ್ಸಾಗರೇಟೆಡ್ ಫೀಗರ್ಸ್ ಕೊಟ್ಟಿರಬಹುದು. ಇವರು 87 ಕೋಟಿ ಎಂದು ತೀರ್ಮಾನ ಮಾಡಿದ್ದರೆ, ಕೇಂದ್ರಸರ್ಕಾರದವರು ಬರೇ 23 ಕೋಟಿ ಎಂದು ಹೇಳಿದರೆ, ಸುಮಾರು 50 ಕೋಟಿಯಷ್ಟು ಪ್ರವಾಹ ಮತ್ತು ಬರಗಾಲದಲ್ಲಿ ಹೆಚ್ಚು ಕಡಿಮೆ ಬರುತ್ತದೆ ಎಂದು ಹೇಳಿದರೆ ಇದರ ಬಗ್ಗೆ ಕೇಂದ್ರಸರ್ಕಾರದ ಮೇಲೆ ಪಕ್ಷಪಂಗಡ ಭೇಧ ಇಲ್ಲದೆ ನಾವು ಒತ್ತಾಯ ಮಾಡಬೇಕಾದುದು ನ್ಯಾಯವಾದುದಾಗಿದೆ. ಮಾನ್ಯ ಹುಚ್ಚ ಮಾಸ್ತಿಗೌಡರು ಕೆಲವು ಮಾತನ್ನು ಹೇಳಿದರು. ಆ ಕಡೆಯುವರೇ ಇರಲಿ, ಈ ಕಡೆಯುವರೇ ಇರಲಿ, ಒಮ್ಮೆ ಆರಿಸಿ ಬಂದನಂತರ ಐದು ವರ್ಷಗಳ ಕಾಲ ರಾಜ್ಯದ ಹಿತರಕ್ಷಣೆ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ ರಾಜ್ಯ ಸರ್ಕಾರವೂ ಕೂಡ ಪ್ರಯತ್ನ ಮಾಡಬೇಕು. ಪ್ರಯತ್ನ ಮಾಡದೆಯೇ ಎಂದು ಕೇಳಿದರೆ ನನಗೆ ದುಃಖವಾಗುತ್ತದೆ. ಕಳೆದವರ್ಷ ಬಡ್ಜೆಟ್ಟನಲ್ಲಿ ಹೇಳಲಾಗಿತ್ತು ಏನೆಂದರೆ ನಮ್ಮ ಸರ್ಕಾರ ಹಲವಾರು ಸಂಸ್ಥೆಗಳನ್ನು ಇಂಡಸ್ಟ್ರಿಯಲ್ ಫಂಡ್ ಅಂಡ್ ಕಮರ್ಶಿಯಲ್ ಸಂಸ್ಥೆಗಳನ್ನು ನಡೆಸುತ್ತಿದೆ, ಆದರಿಂದ ದೊಡ್ಡ ರೀತಿಯಲ್ಲಿ ಫಾಯದೆ ಪಡೆಯಲಿಕ್ಕೆ ಪ್ರಯತ್ನ ಮಾಡಬೇಕು ಅಂತ. ಈ ಒಂದು ವರ್ಷದಲ್ಲಿ ಸರ್ಕಾರ ಈ ದಿಸೆಯಲ್ಲಿ, ನಾನು ಮಾತ್ರವಲ್ಲ ಕೆಲವು ಸದಸ್ಯರು ಇದರ ಬಗ್ಗೆ ಮಾತನಾಡಿದ್ದೆವು. ಒಂದೊಂದು ಫಾಕ್ಟರಿಯನ್ನೂ ತೆಗೆದು ಅದರ ಚರಿತ್ರೆ ಹೇಳಿ ಇವರು ಹಿಂದೆ ಹೇಗೆ ಲಾಭ ಸಂಪಾದಿಸುತ್ತಿದ್ದವು, ಈಗ ಎಕ್ಸಪೇಶನ್ ಸ್ಕೀಮ್‌ನಲ್ಲಿ ನಷ್ಟವಾಗಲಿಕ್ಕೆ ಶುರುವಾಯಿತು ಎಂದು ಹೇಳಿದ್ದೆವು. ಇಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ—**"A picture of Karnataka Budget 1983-84" Page 10. Table 5, dividends and profits—275 lakhs—19%—income** ಇದರ ಬಗ್ಗೆ ನಾವು ಜವಾಬ್ದಾರರು. ಇಲ್ಲಿ 225 ಮಂದಿ ಶಾಸಕರು ಏನು ಇದ್ದೇವೆ ನಾವು ಇದಕ್ಕೆ ಜವಾಬ್ದಾರರು ಎಂದು ಹೇಳುತ್ತೇನೆ. ಬಣ್ಣ ಬಣ್ಣದ ಬೈಂಡಿಂಗ್ ಮಾಡಿಸಿದ ಪುಸ್ತಕಗಳನ್ನು ಕೊಟ್ಟಿದ್ದಾರೆ. ಇವುಗಳ ಮೂಲಕ ಹಾದುಹೋಗುವಾಗ ಈ ಸರ್ಕಾರಕ್ಕೆ ಮತ್ತು ಈ ಸಂಸ್ಥೆಗಳಿಗೆ ಏನು ಸಂಬಂಧ ಎಂದು ಗೊತ್ತಾಗುವುದಿಲ್ಲ. ವಿದ್ಯಾಭ್ಯಾಸಕ್ಕೆ ಕೇಳಿದರೆ ದುಡ್ಡಿಲ್ಲವೆಂದು ಹೇಳುತ್ತಾರೆ, ಆರೋಗ್ಯಕ್ಕೆ ಕೇಳಿದರೆ ದುಡ್ಡಿಲ್ಲವೆಂದು ಹೇಳುತ್ತಾರೆ, ಹೀಗಿರುವಾಗ ಇಲ್ಲಿ ಮಾತ್ರ ಕೆಲವು ಫ್ಯಾಕ್ಟರಿಗಳಿಗೆ ಎಷ್ಟು ಹತ್ತು ಕೋಟಿ, ಇಪ್ಪತ್ತು ಕೋಟಿ, ಮುವತ್ತು, ನಲವತ್ತು ಕೋಟಿ ಸಾಲ ಕೊಡುತ್ತಿರುವಾಗ ಕಳೆದ ಮೂರು-ನಾಲ್ಕು ವರ್ಷಗಳಿಂದ ಈ ಹಣಕ್ಕೆ ಒಂದು ಪೈಸೆ ಬಡ್ಡಿಯನ್ನೂ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ ಎಂದರೆ ಇದು ಏಕೆ ? ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಸಿಗಲಿಕ್ಕೆ ಬೇಕಾದರೆ ಹೋರಾಟ ಮಾಡೋಣ. ಆದರೆ ಅದನ್ನು ತೆಗೆದುಕೊಳ್ಳಬೇಕಾದ್ದು ಅವರ ಕಾಲಿಗೆ ಬಿದ್ದು ಅಲ್ಲ. ಯಾವ ಕ್ರೈಟೇರಿಯಾ ಆಧಾರದ ಮೇಲೆ ಕೊಡಬೇಕೋ ಅದರ ಪ್ರಕಾರ ಕೊಡಲಿ. ಇದೇ ಸಮಯದಲ್ಲಿ ನಾವು ಕೂಡ ಪ್ರಯತ್ನ ಮಾಡಬೇಕು. ಮಾಡದೇ ಇದ್ದರೆ ಇನ್ನಾದರೂ ಇದನ್ನು ಮಾಡೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. DY SPEAKER :—**The debate is concluded. The Hon'ble Chief Minister will reply to the Debate at 2-30 p.m. Now the Houses stands adjourned to meet again at 2-30 p m.**

(The House re-assembled at 2-30 P M)

Mr. Speaker.--(Sri D. B. CHANDRE GOWDA) in the Chair.

Mr. Speaker—Now the Hon'ble Chief Minister to reply to the diseussion on the Budget Speech.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).-- ಮಾನ್ಯ ಅಧ್ಯಕ್ಷರೇ, ಬರುವ ವರ್ಷದ

ಮುಂಗಡ ಪತ್ರದ ಬಗ್ಗೆ ಸಾರ್ವತ್ರಿಕವಾಗಿ ಸ್ವಾಗತ ಸಿಕ್ಕಿದೆ. ಈ ಮನೆಯಲ್ಲಿ ಎಷ್ಟು ಸಿಕ್ಕಿದೆಯೋ ಅದಕ್ಕಿಂತ ಹೆಚ್ಚಾಗಿ ಹೊರಗಡೆ ಸಿಕ್ಕಿದೆ. ಅದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಸಾರ್ವತ್ರಿಕವಾಗಿ ಅಂತ ನಾನು ಏತಕ್ಕೆ ಹೇಳಿದೆ ಎಂದರೆ ಸಮಾಜದ ಎಲ್ಲ ವರ್ಗಗಳೂ ಇದರಲ್ಲಿ ಸೇರಿವೆ. ಇದನ್ನು ರೈತರು ಸ್ವಾಗತಿಸಿದ್ದಾರೆ, ಇದನ್ನು ವ್ಯಾಪಾರಸ್ಥರು ಸ್ವಾಗತಿಸಿದ್ದಾರೆ, ಇದನ್ನು ದೊಡ್ಡ ಉದ್ದಿಮೆಗಾರರು ಸ್ವಾಗತಿಸಿದ್ದಾರೆ ಮತ್ತು ಇದನ್ನು ಸಣ್ಣ ಪುಟ್ಟ ಕೈಗಾರಿಕೆಗಳು ನಡೆಸತಕ್ಕಂಥವರು ಸಹ ಸ್ವಾಗತಿಸಿದ್ದಾರೆ, ಜೊತೆಗೆ ಬಳಕೆದಾರರು ಸ್ವಾಗತಿಸಿದ್ದಾರೆ. ಪ್ರೆಸ್‌ನವರು ತಮ್ಮ ಮೆಚ್ಚುಗೆಯನ್ನು ಈ ಮುಂಗಡ ಪತ್ರದ ಬಗ್ಗೆ ವ್ಯಕ್ತ ಮಾಡಿದ್ದಾರೆ. ನನಗೆ ಇದರ ಬಗ್ಗೆ ಒಂದೇ ಒಂದು ಸಮಾಧಾನ ಏನು ಎಂದರೆ ಯಾವ ವರ್ಗದಿಂದಲೂ ಸಹ ಈ ಮುಂಗಡ ಪತ್ರದ ವಿರುದ್ಧವಾಗಿ ಉಗ್ರವಾದಂಥಾ ಟೀಕೆ, ಸಲಹೆ ಬರಲಿಲ್ಲ. ಸನ್ಮಾನ್ಯ ಸದಸ್ಯರುಗಳು ಈ ಚರ್ಚೆಯಲ್ಲಿ ಏನು ಭಾಗವಹಿಸಿದ್ದಾರೆ ಅವರಲ್ಲಿ ಕೆಲವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಇನ್ನು ಕೆಲವರು ಟೀಕೆಗಳನ್ನು ಮಾಡಿದ್ದಾರೆ, ಅವೆಲ್ಲವನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ ನಮ್ಮ ವಿರೋಧಪಕ್ಷದ ನಾಯಕರಿಂದ ನಾನು ಏನು ನಿರೀಕ್ಷಣೆ ಮಾಡಿದ್ದೆ ಎಂದರೆ ಈ ಬಡ್ಜೆಟ್ ಮೇಲೆ ಅವರು ಭಾಷಣ ಮಾಡುವಾಗ ಅಭೂತಪೂರ್ವವಾಗಿ ಭಾಷಣ ಮಾಡುತ್ತಾರೆ ಎಂದು ತಿಳಿದಿದ್ದೆ. ಅವರು ಅರ್ಥಮಂತ್ರಿಗಳಾಗಿ ಮಾತನಾಡಬಹುದು ಅಥವಾ ವಿರೋಧ ಪಕ್ಷದ ನಾಯಕರಾಗಿಯಾದರೂ ಮಾತನಾಡಬಹುದು ಎಂದು ತಿಳಿದಿದ್ದೆ. ಆದರೆ ಅದು ನಿರಾಸೆಯಾಗಿದೆ ಎಂದು ನಾನು ಹೇಳಲಿಕ್ಕೆ ಖೇದವಾಗುತ್ತದೆ. ಅವರು ಹಿಂದಿನ ಅರ್ಥಮಂತ್ರಿಗಳಾಗಿಯೂ ಭಾಷಣ ಮಾಡಲಿಲ್ಲ ಎಂದರೆ ಅವರು ಅನುಭವ ಎಷ್ಟು ಇದೆ ಅನ್ನುವುದು ಗೊತ್ತಾಗುತ್ತದೆ. ಈ ಬಡ್ಜೆಟ್ ಅನ್ನು ಸರಿಕೂಡಿಸುವಂಥಾ ಕೆಲಸ ಎಷ್ಟು ಕಷ್ಟದ್ದು, ಎಲ್ಲಾ ವರ್ಗಗಳಿಗೂ ನ್ಯಾಯವನ್ನು ತರತಕ್ಕಂಥಾ ರೀತಿಯಲ್ಲಿ ಹಣದ ಹೂಡಿಕೆ ಮಾಡತಕ್ಕಂಥಾದ್ದು ಎಷ್ಟು ಕಷ್ಟದ್ದು ಎನ್ನುವುದು ಬಹುಶಃ ಅವರು ಮರೆತಿದ್ದಾರೆ ಎಂದು ಕಾಣುತ್ತದೆ. ಅವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡುತ್ತಾ ಇರುವುದರಿಂದ ಅವರಿಂದ ನಾನು ಕೆಲವೊಂದು ಒರಿಜಿನಲ್ ಸಜೆಷನ್ ಆಗಲಿ ಅಥವಾ ಯಾವುದಾದರೂ ಸೂಚನೆಗಳಾಗಲಿ ಬರಬಹುದು ಎಂದು ತಿಳಿದುಕೊಂಡಿದ್ದೆ ಆ ರೀತಿ ಅವರು ಮಾಡಲಿಲ್ಲ. ಅವರು ಮುಂಗಡ ಪತ್ರದ ಮೇಲೆ ಮಾಡಿದಂಥಾ ಭಾಷಣ ಯಾವರೀತಿ ಇತ್ತು ಎಂದರೆ ಒಂದು ಕತ್ತಲು ಕೋಣೆಯಲ್ಲಿ ಅಮವಾಸ್ಯೆ ರಾತ್ರಿ ಒಂದು ಕರೀಬೆಕ್ಕನ್ನು ಹಿಡಿದುಕೊಳ್ಳುವ ಪ್ರಯತ್ನ ಮಾಡಿದ ಹಾಗೆ ಇತ್ತು ಎಂದು ಕಾಣುತ್ತದೆ; obviously which is not in existence. ಅವರಿಂದ ಯಾವ ಹೊಸ ಸೂಚನೆಯೂ ಸಿಕ್ಕಲಿಲ್ಲ. ಪ್ರಾರಂಭದಲ್ಲಿ ನಾನು ನಾಲ್ಕಾರು ಮಾತುಗಳನ್ನು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ ಈ ಮಾನ್ಯ ಸದನಕ್ಕೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಹಣಕಾಸಿನ ಪರಿಸ್ಥಿತಿ ಅತ್ಯಂತ ತೃಪ್ತಿಕರವಾಗಿದೆಯೆಂದು ನಾನು ಹೇಳುವುದಿಲ್ಲ. ಆದರೆ ಯಾವುದೇ ರೀತಿಯ ವಿವಂಚನೆಗೆ ಕಾರಣವಾಗುವ ಸ್ಥಿತಿಯಲ್ಲೂ ಇಲ್ಲ; ಎಂದು ಹೇಳುತ್ತೇನೆ. ಆದರೆ ಏನೋ ಗೊತ್ತಿಲ್ಲ, ಕಳೆದ 1 ತಿಂಗಳು 2 ತಿಂಗಳಿಂದ ಮಾನ್ಯ ವಿರೋಧಪಕ್ಷದ ನಾಯಕರು, ಸುಮಾರು ಕಳೆದ ಒಂದು ವರ್ಷದಿಂದ ಪುನ. ಪುನ: ಏನು ಮಾತನ್ನು ಹೇಳುತ್ತಿದ್ದರೋ ಅದನ್ನು ಹೇಳಲಿಲ್ಲ. ಅದು ಏನೆಂದರೆ ಸರ್ಕಾರ ದಿವಾಳಿಯಾಗಿದೆ, ಓವರ್ ಡ್ರಾಫ್ಟ್ ಬಹಳ ಹೆಚ್ಚಿದೆ, ರಿಸರ್ವ್ ಬ್ಯಾಂಕ್‌ನವರು ಚೆಕ್ ಆನರ್ ಮಾಡುವುದಿಲ್ಲ, ಕೇಂದ್ರ ಸರ್ಕಾರದಿಂದ ನೋಟೀಸ್ ಬಂದಿದೆ ಎಂದು. ಅಂಥಾದ್ದ್ಯಾವುದೂ ಆಗಲಿಲ್ಲ. ಓವರ್‌ಡ್ರಾಫ್ಟ್ ಇಲ್ಲ ಎಂದು ನಾನು ಹೇಳುವುದಿಲ್ಲ. ಈಗ ಸದ್ಯಕ್ಕೆ ಸುಮಾರು 40 ರಿಂದ 42 ಕೋಟಿ ರೂಪಾಯಿ ಇರಬಹುದು ಅಷ್ಟೆ. ಆದರೆ ಬೇರೆ ಬೇರೆ ಇನ್ನು ಕೆಲವು ರಾಜ್ಯಗಳ ಜೊತೆಗೆ ನಾವು ಹೋಲಿಸಿ ನೋಡಿದಾಗ ಈ ಮೊತ್ತ ಬಹಳ ಕಡಿಮೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಸಲದ ಯೋಜನಾ ವೆಚ್ಚ ಎಂದರೆ ಬರುವ ವರ್ಷದ್ದು. ನಾವು ಕನಿಷ್ಠ ಪಕ್ಷ 650 ಕೋಟಿ ಇರಬೇಕೆಂದು ಹೇಳಿ ಅದಕ್ಕೆ ಯೋಜನಾ ಅಯೋಗದ ಮನ್ನಣೆಯನ್ನೂ ಕೂಡ ನಾವು ಪಡೆದಿದ್ದೇವು. ಈ ಯೋಜನಾ ವೆಚ್ಚದ ಗಾತ್ರವನ್ನು ನಾವು ನಿರ್ದಿಷ್ಟಪಡಿಸುವಾಗ, ಮೂಲತಃ ನಮ್ಮ ರಿಸೋರ್ಸಸ್, ಸಂಪನ್ಮೂಲಗಳನ್ನು, ಅವರು ಲೆಕ್ಕ ಹಾಕಿದ್ದು, ಕೇವಲ 575 ಕೋಟಿ ಆಗಬಹುದು ಎಂದು, ಅದರಲ್ಲಿ ಈ ವರ್ಷ ಎಂದರೆ, 83-84ನೇ ವರ್ಷದ ಕೊನೆಗೆ ಸುಮಾರು 55-56 ಕೋಟಿಯಷ್ಟು ಡೆಫಿಸಿಟ್ ಆಗುತ್ತದೆ ಇದನ್ನು ಲೆಕ್ಕಕ್ಕೆ ತೆಗೆದುಕೊಂಡು, ಅಂದರೆ ಒಟ್ಟು ಸಂಪನ್ಮೂಲಗಳಲ್ಲಿ, ಇದನ್ನು ಕಳೆದು 575 ಕೋಟಿಯಷ್ಟು, ನಮ್ಮ ಯೋಜನೆಗಳಿಗಾಗಿ, ನಮ್ಮ ಸಂಪನ್ಮೂಲಗಳು ಲಭ್ಯವಾಗಬಹುದೆಂಬ ಅಂದಾಜನ್ನು ಅವರು ಮಾಡಿದರು. ಯೋಜನಾ ಆಯೋಗದವರ ಜೊತೆ ಚರ್ಚೆ ಮಾಡುವಾಗ ಈ ಒಂದು ಗಾತ್ರ ಬಹಳ ಸಣ್ಣದಾಯಿತು. ನಾವು ಹೆಚ್ಚಾಗಿ ಸಂಪನ್ಮೂಲಗಳನ್ನು ಕೂಡಿಸುತ್ತೇವೆ. ಕನಿಷ್ಠ ಪಕ್ಷ 650 ಕೋಟಿ ಗಾತ್ರದ ಯೋಜನೆ ಬೇಕೆಂದು ಆಗ್ರಹ ಮಾಡಿದ್ದೆವು. ಅದಕ್ಕೆ ಅವರೂ ಒಪ್ಪಿಕೊಂಡಿದ್ದಾರೆ. ತಮ್ಮ ಭಾಷಣದ

ಸಂದರ್ಭದಲ್ಲಿ ಮಾನ್ಯ ಮೊಯಿಲಿಯವರು ಒಂದು ಮಾತನ್ನು ಹೇಳಿದರು. 72-73ನೇ ವರ್ಷದ ಯೋಜನೆ ಪ್ಲಾನ್ ಔಟ್-ಲೇ 475 ಕೋಟಿ ಎಂದು ಹೇಳುತ್ತಾ ಬಂದಿದ್ದೀರಿ, ಇಲ್ಲೀ ಅದು 50 ಕೋಟಿ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಲಾಗಿದೆ ಎಂದು, ಅದು ನಿಜ ಅಲ್ಲವೆಂದು ನಾವು ಎಂದೂ ಹೇಳಲಿಲ್ಲ. ನಾವು ಈ ಮಾತನ್ನು ಹೇಳುವಾಗಲೆಲ್ಲ, ಒರಿಜಿನಲ್ ಔಟ್-ಲೇ ಬಗ್ಗೆ ಪ್ರಸ್ತಾಪ ಮಾಡಿದ್ದೇವೆಯೇ ಹೊರತು, ಕಳೆದ ವರ್ಷ ಕೂಡಾ, ಅಂದರೆ 83-84ನೇ ವರ್ಷವೂ ಕೂಡಾ 575 ಕೋಟಿ ಎಂದು ನಾನು ಹೇಳಿದ್ದೇನೆ. ಹಿಂದಿನ ವರ್ಷದ್ದು ಸುಮಾರು 510-515, 520 ಕೋಟಿ ರೂಪಾಯಿವರೆಗೆ ಹೋಗಬಹುದು, ಹಾಗಾದರೆ ಈ ವರ್ಷ 575 ಕೋಟಿ ರೂಪಾಯಿಗಳ ವೆಚ್ಚದ ನಿಗದಿಯನ್ನು ನಾವು ಏನು ಮಾಡಿದ್ದೇವೆ ಅದಕ್ಕೂ ಮೀರಿ ಖರ್ಚಾಗುತ್ತದೆ. ಈ ವರ್ಷ ಸುಮಾರು 670 ಕೋಟಿ ಖರ್ಚಾಗುತ್ತದೆ ಎಂದು ನನ್ನ ಅಂದಾಜು. ಹಾಗಿದ್ದರೆ 675 ಕೋಟಿ ರೂಪಾಯಿಗಳ ಯೋಜನೆ ಹಿಂದಿನ ವರ್ಷದ ಜೊತೆಗೆ ನಾವು ಹೋಲಿಸಿ ನೋಡಿದಾಗ ಈ ವರ್ಷ ಗ್ರೋತ್ ರೇಟ್ ಸಾಕಷ್ಟಿಲ್ಲ ಎಂದು ಹೇಳತಕ್ಕದ್ದು ಒಂದು ಭಾವನೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಆಗಬಹುದು. ನನ್ನ ದೃಷ್ಟಿಯಲ್ಲಿ ಇದೂ ಕೂಡಾ ತಾತ್ಕಾಲಿಕ, ಕಾರಣ ಇಷ್ಟೇ, 8ನೇ ವಿತ್ತ ಆಯೋಗದ ಕೊನೆಯ ರಿಪೋರ್ಟ್ ಅಥವಾ ಶಿಫಾರಸ್ಸು ಇನ್ನೂ ಬಂದಿಲ್ಲ. ಅದು ಯಾವತರಹ ಶಿಫಾರಸ್ಸು ಮಾಡುತ್ತದೆ ಎಂಬುದನ್ನು ನಾವು ಊಹಿಸುವುದೂ ಕೂಡಾ ಕಷ್ಟ. ಆದರೂ ಸಾಲ ತೀರಿಸುವ ಸಂಬಂಧದಲ್ಲಿ ಮತ್ತು ಅನುದಾನದ ಸಂಬಂಧವಲ್ಲಿ ಸಾಕಷ್ಟು ನ್ಯಾಯ ನಮಗೆ ಸಿಗುತ್ತದೆ, ಮತ್ತು ಸಾಕಷ್ಟು ಹಣ ಸಿಗುತ್ತದೆ ಎಂದು ಹೇಳತಕ್ಕ ನಿರೀಕ್ಷೆಯನ್ನು ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಯಾರೂ ತಪ್ಪು ಭಾವಿಸಕೂಡದು. ವಿತ್ತೀಯ ಆಯೋಗದವರು ಇಲ್ಲಿಗೆ ಬಂದಾಗ ನಮ್ಮ ಸರ್ಕಾರದ ಪರವಾಗಿ ನಾವು ಅವರ ಎದುರಿಗೆ ಬಹಳ ಪರಿಣಾಮಕಾರಿಯಾಗಿ ನಮ್ಮ ಕೇಸನ್ನು ಮಂಡಿಸಿದ್ದೇವೆ. ಮಾನ್ಯ ಮೊಯಿಲಿಯವರು, ಇನ್ನು ಇತರ ವಿರೋಧ ಪಕ್ಷದ ಧುರೀಣರೂ ಇದ್ದರು. ಅವರ ಜೊತೆಗೂ ನಾವು ಸಮಾಲೋಚನೆ ಮಾಡಿದ್ದೇವೆ. ಅತ್ಯಂತ ಪರಿಣಾಮಕಾರಿ ಯಾದ ರೀತಿಯಲ್ಲಿ ಕರ್ನಾಟಕ ರಾಜ್ಯದ ಕೇಸನ್ನು ಅವರ ಮುಂದಿಟ್ಟಿದ್ದೇವೆಂದು ಮಾನ್ಯ ಮೊಯಿಲಿಯವರೂ ಒಪ್ಪಿಕೊಂಡಿದ್ದಾರೆ. ನಾವು ಅವರಿಗೆ ಬಹಳ ಆಗ್ರಹಪೂರ್ವಕವಾಗಿ ಕೇಳಿಕೊಂಡೆವು. ಈ ವರ್ಷದ ಕೊನೆಯಲ್ಲಿ ರೆವಿನ್ಯೂ ಸರ್‌ಪ್ಲಸ್ ನಮಗೆ ಆಗುವುದಿಲ್ಲ. ಇದನ್ನು ಅವರು ಯಾವ ರೀತಿ ಲೆಕ್ಕ ಮಾಡಿದರೋ ಗೊತ್ತಿಲ್ಲ. ಈ ವರ್ಷದ ಕೊನೆಯಲ್ಲಿ ರೆವಿನ್ಯೂ ಡಿಫಿಸಿಟ್ ನಮ್ಮದು ಅಗುವುದಿಲ್ಲ ಎಂದು ಹೇಳತಕ್ಕ ಆಧಾರದ ಮೇಲೆ ಅವರು ತಾತ್ಕಾಲಿಕ ವರದಿಯನ್ನು ಕೊಟ್ಟ ಹಾಗೆ ಕಾಣುತ್ತದೆ. ಇದರಿಂದಾಗಿ ನಾಲ್ಕಾರು ರಾಜ್ಯಗಳಿಗೆ ಯಾವ ಹಣ ಸಹಾಯ ಸಿಗುತ್ತದೋ, ಆ ಸಹಾಯ ನಮ್ಮ ಕರ್ನಾಟಕ ರಾಜ್ಯಕ್ಕೆ ಸಿಗಲಿಲ್ಲ. ಈಗ ಕಳೆದ ವರ್ಷದ ರಿವೈಸ್ಡ್ ಎಸ್ಟಿಮೇಟನ್ನು ನಾವು ನೋಡಿದರೆ ರೆವಿನ್ಯೂ ಬಾಬಿಗಾಗಿ ಅಂದರೆ ರಾಜಸ್ವ ಬಾಬಿನಲ್ಲಿ ರೆವಿನ್ಯೂ ಸರ್‌ಪ್ಲಸ್ ಇಲ್ಲ, ಸುಮಾರು 11 ಕೋಟಿಯಷ್ಟು ಇದರಲ್ಲಿ ಡಫಿಸಿಟ್ ಇದೆ. ಇದು ನಮ್ಮ ರಿವೈಸ್ಡ್ ಲೆಕ್ಕದ ಪ್ರಕಾರ ಆಗುತ್ತದೆ. ನಾವು ಅಂದಾಜು ಮಾಡಿದ್ದು ಸುಮಾರು 48 ಕೋಟಿಯಷ್ಟು ಸರ್‌ಪ್ಲಸ್ ಆಗಬಹುದೆಂದು ಹೇಳತಕ್ಕದ್ದು. ಬರುವ ವರ್ಷದ ಮುಂಗಡ ಪತ್ರದಲ್ಲಿ ನಮ್ಮ ಲೆಕ್ಕದ ಪ್ರಕಾರ; ಅಂದಾಜಿನ ಪ್ರಕಾರ ಈ ಕೊರತೆ ಇನ್ನೂ ಹೆಚ್ಚಾಗುತ್ತದೆ. ವಿತ್ತೀಯ ಆಯೋಗದವರು ಕೊನೆಗಳಿಗೆಯಲ್ಲಾದರೂ ತಮ್ಮ ತಾತ್ಕಾಲಿಕ ವರದಿಯನ್ನು ಕೊಡುವಾಗ ಯಾವ ಒಂದು ತಪ್ಪು ಲೆಕ್ಕಾಚಾರದ ಮೇಲೆ ತೀರ್ಮಾನಕ್ಕೆ ಬಂದರೋ ಈ ರೀತಿ ಒಂದು ತಪ್ಪು ಗ್ರಹಿಕೆಯನ್ನು ಅವರು ಮಾಡಕೂಡದು. ಕೊನೆಗಳಿಗೆಯಲ್ಲಾದರೂ ಆ ತಪ್ಪನ್ನು ಅವರು ಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ, ರಾಜ್ಯ ಸರ್ಕಾರಕ್ಕೆ ಇರತಕ್ಕಂಥ ಇತಿಮಿತಿಗಳ ಬಗ್ಗೆ ಒಂದೆರಡು ಮಾತನ್ನು ಒಂದು ರಾಜಕೀಯ ಪಕ್ಷಕ್ಕೆ ಸೇರಿದ ವ್ಯಕ್ತಿಯಾಗಿ ಹೇಳುತ್ತಿಲ್ಲ. ಇಡೀ ದೇಶ ಒಂದು. ಅದರಲ್ಲಿ ಏನೂ ಸಂದೇಹ ಇಲ್ಲ. ನಮ್ಮ ಸಂವಿಧಾನದ ಪ್ರಕಾರ ರಾಜ್ಯಸರ್ಕಾರಗಳಿಗೆ ಕೆಲವು ಅಧಿಕಾರಗಳಿವೆ, ಕೆಲವು ಜವಾಬ್ದಾರಿಗಳಿವೆ ಮತ್ತು ಕೆಲವು ಸಂಪನ್ಮೂಲಗಳೂ ಇವೆ. ಅದೇ ರೀತಿಯಲ್ಲಿ ಕೇಂದ್ರಸರಕಾರಕ್ಕೂ ಜವಾಬ್ದಾರಿ ಇದೆ, ಅಧಿಕಾರ ಇದೆ, ಸಂಪನ್ಮೂಲಗಳಿವೆ. ಈಗ ಕಳೆದ 30 ವರ್ಷಗಳ ಅನುಭವದ ಬೆಳಕಿನಲ್ಲಿ, ಈ ಅಧಿಕಾರ ಸಂಪನ್ಮೂಲಗಳು ಮತ್ತು ಜವಾಬ್ದಾರಿ, ಇವೆಲ್ಲವುಗಳನ್ನೂ ವಿವೇಕದಿಂದ ನಾವು ಪುನಃ ಪರಿಶೀಲನೆ ಮಾಡಿ ನ್ಯಾಯಬದ್ಧವಾದ ರೀತಿಯಲ್ಲಿ ಒಂದು ಹೊಸ ವ್ಯವಸ್ಥೆಯನ್ನು ತರತಕ್ಕಂಥ ಅವಶ್ಯಕತೆ ಇದೆ ಎಂದು ಹೇಳಿ ನನ್ನ ಬಲವಾದಂಥ ಅಭಿಪ್ರಾಯ. ರಾಜ್ಯ ಸರಕಾರದ ಆಯ-ವ್ಯಯ, ಅದು ಕ್ಯಾಪಿಟಲ್ ಅಕೌಂಟ್ ಇರಬಹುದು, ರೆವಿನ್ಯೂ ಅಕೌಂಟ್ ಇರಬಹುದು, ಯೋಜನೆಗೆ ಸಂಬಂಧಪಟ್ಟದ್ದು ಇರಬಹುದು, ಯೋಜನೇತರ ಕೆಲಸಗಳಿಗೆ ಖರ್ಚು ಮಾಡಿದಂಥಾದು ಇರಬಹುದು. ಇವೆಲ್ಲವುದರ ಮೇಲೆ ಒಂದಲ್ಲ ಒಂದು ರೀತಿಯಾದ ಕಂಟ್ರೋಲ್ ಕಡಿವಾಣ ಅದು ಇದ್ದೇ ಇದೆ. ನಮಗೆ ಕೇಳತಕ್ಕಂಥವರು ಯೋಜನಾ ಆಯೋಗದವರು ಇದ್ದಾರೆ, ನಮಗೆ

ಕೇಳತಕ್ಕಂಥವರು ರಿಸರ್ವ್ ಬ್ಯಾಂಕಿನವರಿದ್ದಾರೆ, ನಮಗೆ ಕೇಳತಕ್ಕಂಥವರು "ನಬಾರ್ಡ್" ಎಂಬ ಸಂಸ್ಥೆ ಸಂಸ್ಥೆ ಅವರೂ ಕೂಡಾ ನಮ್ಮನ್ನು ಕೇಳುವವರು, ನಮಗೆ ಕೇಳತಕ್ಕಂಥ ಕೇಂದ್ರ ಸರಕಾರ ಇದೆ. ಯಾವುದೇ ರೀತಿಯಲ್ಲಿ ರಾಜ್ಯ ಸರ್ಕಾರ ದುಂದು ವೆಚ್ಚ ಮಾಡಿದರೆ, ವಿವೇಕರಹಿತ ರೀತಿಯಲ್ಲಿ ಹಣಕಾಸಿನ ವ್ಯವಸ್ಥೆಯನ್ನು ನಡೆಸಿಕೊಂಡು ಬಂದರೆ ಅದನ್ನು ನಿಲ್ಲಿಸತಕ್ಕಂಥ ಅಥವಾ ನಿಲ್ಲಿಸದೇ ಇದ್ದರೆ ಉಗ್ರವಾದ ಪರಿಣಾಮವನ್ನು ಉಂಟು ಮಾಡತಕ್ಕ ಅಧಿಕಾರ ಕೇಂದ್ರ ಸರ್ಕಾರದಲ್ಲಿದೆ. ಆದ್ದರಿಂದ ನಾವು ಈ ಚೌಕಟ್ಟಿನ ಹೊರಗೆ ಒಂದು ಕಾಲು ಕೂಡ ಹಾಕುವುದಕ್ಕೆ ಸಾಧ್ಯವಿಲ್ಲ. ಅದು ಎಂಥ ಅಗತ್ಯವಾದ ಕೆಲಸಗಳೇ ಆಗಿರಲಿ, ಕುಡಿಯುವ ನೀರಿನಂತಹ ಪ್ರಾಥಮಿಕ ಅವಶ್ಯಕತೆಯ ಕಾರ್ಯಕ್ರಮವಾಗಿರಲಿ ನಾವು ಈ ಒಂದು ಚೌಕಟ್ಟಿನೊಳಗೆ ಕೆಲಸ ಮಾಡಬೇಕೇ ಹೊರತು, ಇದರ ಹೊರಗಡೆ ಕೈಕಾಲು ಹಾಕುವುದಕ್ಕೆ ಸಾಧ್ಯವಿಲ್ಲ. ಆದರೆ ಕೇಂದ್ರಸರ್ಕಾರದ ಸ್ಥಿತಿ ಹಾಗೆ ಇಲ್ಲ. ಕೇಂದ್ರಸರ್ಕಾರಕ್ಕೆ ಅಪಾರವಾದಂಥ ಸಂಪನ್ಮೂಲಗಳು ಇವೆ. ಎಕ್ಸೈಜ್, ಕಸ್ಟಂಸ್, ಇನ್‌ಕಂಟ್ಯಾಕ್ಸ್, ವೆಲ್ತ್‌ಟ್ಯಾಕ್ಸ್ ಇವೆಲ್ಲಾ ಇವೆ. ಇವೆಲ್ಲವರ ಹೊರತಾಗಿ ನಾನು ಒಂದು ವಿಚಾರವನ್ನು ಯೋಜನಾ ಆಯೋಗದವರ ಮುಂದೆ ಇಟ್ಟಿದ್ದೇನೆ. ವಿತ್ತೀಯ ಆಯೋಗದವರ ಮುಂದೆ ಕೂಡ ಇಟ್ಟಿದ್ದೇನೆ. ಬಾಕಿ ಎಲ್ಲಾ ಹೋಗಲಿ ಕನಿಷ್ಟಪಕ್ಷ ಸಾಲವನ್ನಾದರೂ ಕೂಡ ಬ್ಯಾಂಕಿನಿಂದ ನಮಗೆ ಬೇಕಾದಷ್ಟು ಪಡೆಯುವಂಥ ಅಧಿಕಾರ ಇಲ್ಲ ಎನ್ನುವುದನ್ನು ಮಾನ್ಯ ಸದಸ್ಯರ ತಿಳುವಳಿಕೆಗಾಗಿ ಹೇಳುತ್ತಿದ್ದೇನೆ ನಾವು ನೀರಾವರಿ ಯೋಜನೆಗಳಿಗೆ ಬಂಡವಾಳ ಹಾಕುತ್ತೇವೆ, ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಬಂಡವಾಳ ಹಾಕುತ್ತೇವೆ, ಇದು ಉತ್ಪಾದನಾ ಮಟ್ಟಕ್ಕೆ ಬಂದಾಗ, ಅದೇರೀತಿ ರೈತರು ಖುಷ್ಕಿ ಭೂಮಿಯಿಂದ ಬೆಳೆಯುವುದನ್ನು ಬಿಟ್ಟು ನೀರಾವರಿ ಸೌಲಭ್ಯವನ್ನು ಉಪಯೋಗಿಸಿಕೊಂಡು ಕಬ್ಬೋ, ಭತ್ತವನ್ನೊ ಇನ್ನಿತರ ಬೇರೆ ಬೆಳೆಯನ್ನು ಬೆಳೆಯುತ್ತಾರೆ. ಉತ್ಪಾದನೆ ಹೆಚ್ಚಾಗುತ್ತದೆ. ಈ ಒಂದು ಆದಾಯದಲ್ಲಿ ಹೆಚ್ಚುವರಿ ಆಗಿದ್ದನ್ನು ಬ್ಯಾಂಕಿನಲ್ಲಿ ಇಡುತ್ತಾರೆ. ಅರ್ಥಾತ್ ಬ್ಯಾಂಕಿನಲ್ಲಿರತಕ್ಕ ದುಡ್ಡು ನಮ್ಮ ರೈತರ ದುಡ್ಡು ವ್ಯಾಪಾರಸ್ಥರ ದುಡ್ಡು. ಉತ್ಪಾದನೆ ಆದದ್ದು ನಾವು ಹಾಕಿದಂಥ ಬಂಡವಾಳದಿಂದ. ಕೇಂದ್ರಸರ್ಕಾರದವರು ಸಾಲದ ರೂಪದಲ್ಲಿ ಕೊಟ್ಟಿರಬಹುದು, ಅದಕ್ಕೆ ಅವರು ಬಡ್ಡಿ ಹಾಕಿರುತ್ತಾರೆ. ಸಂಪೂರ್ಣವಾಗಿ ನಾವು ಹಾಕಿದಂಥ ಬಂಡವಾಳದಿಂದ ಸ್ವಲ್ಪಮಟ್ಟಿನ ಉತ್ಪಾದನೆ ಆದರೆ ಅದು ಬ್ಯಾಂಕಿನಲ್ಲಿ ಹೋಗುತ್ತೆ. ಈ ಹಣ ನಮ್ಮದೇ ಈ ರಾಜ್ಯದ್ದೇ, ರಾಜ್ಯದ ಜನತೆಯದೇ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳೋಣವೆಂದರೆ ಇಲ್ಲ ಇಂತಿಷ್ಟೇ ನಿರ್ದಿಷ್ಟ ಮಾಡಬೇಕು. ನಾನು ಒಪ್ಪಿದೆ, ಪಂಚವಾರ್ಷಿಕ ಯೋಜನೆ ತಯಾರು ಮಾಡುವಾಗ, ಸಂಪನ್ಮೂಲಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ ಬ್ಯಾಂಕಿನಲ್ಲಿ ಎಷ್ಟಿದೆ ಎನ್ನುವುದನ್ನು ಕೂಡ ತೆಗೆದುಕೊಂಡು ಮಾಡುತ್ತಾರೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ ಆದರೆ, ಆ ರೀತಿಯ ಗಣನೆಗೆ ತೆಗೆದುಕೊಂಡಾಗ ಆಯಾಯಾ, ರಾಜ್ಯದ ಅವಶ್ಯಕತೆಯನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕು. ಕೇಂದ್ರದವರು ಮಾರ್ಕೆಟ್ ಲೋನನ್ನು ಎತ್ತುತ್ತಾರೆ. ಈ ವರ್ಷವೂ ಕೂಡ ಸುಮಾರು 3000 ಕೋಟಿಗಿಂತಲೂ ಹೆಚ್ಚಿಗೆ ಸಾಲ ಎತ್ತಿದ್ದಾರೆ ನಾವು 150 ಕೋಟಿ ಕೊಡಿ ಅಂದರೆ ಅದಕ್ಕೆ ಒಪ್ಪುವುದಿಲ್ಲ ಹೀಗೆ ಕೇಂದ್ರ ಸರ್ಕಾರದ ಹತ್ತಿರ ಬೇರೆ ಬೇರೆ ಬಾಬುಗಳಿಂದ ಬರತಕ್ಕಂಥ ಆದಾಯದ ಹೊರತು ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವಂಥ ಸೌಲಭ್ಯ ಇದೆ, ಬೇರೆ ಬೇರೆ ದೇಶಗಳಿಂದ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ, ವಿಶ್ವಬ್ಯಾಂಕಿನಿಂದ ಸುಮಾರು 5,000 ಕೋಟಿ ಸಾಲ ತಂದಿರುವುದು ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ಅವರಿಗೆ ಅಡೆ ತಡೆ ಯಾವುದೂ ಇಲ್ಲ ಅಲ್ಲದೆ ರಿಸರ್ವಬ್ಯಾಂಕ್ ಅವರ ಕೆಳಗೆ ಇರುವುದರಿಂದ ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರವೇ ಅದು ನಡೆಯುತ್ತಿದೆ. ನಾಸಿಕ್‌ಪ್ರೆಸ್ ಅವರ ಕೈಯಲ್ಲಿರುವುದರಿಂದ ಬಾಕಿ ಬಾಬುಗಳಲ್ಲಿ ಸಾಕಷ್ಟು ಹಣ ಸಿಗದಿದ್ದರೆ ನೋಟುಗಳನ್ನು ಮುದ್ರಣ ಮಾಡಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅಪಾರವಾದಂಥ ಹಣದ ಸೌಲಭ್ಯ ಇರತಕ್ಕಂಥ ಕೇಂದ್ರ ಸರ್ಕಾರ ಒಂದು ಕಡೆ ಇದ್ದರೆ, ಅತ್ಯಂತ ಬಿಕ್ಕಟ್ಟಿನ ಹಣಕಾಸಿನ ಸ್ಥಿತಿಯಲ್ಲಿ ಕೆಲಸ ಮಾಡತಕ್ಕಂಥ ರಾಜ್ಯ ಸರ್ಕಾರಗಳು ಒಂದು ಕಡೆ ಇವೆ. ಈ ದಿವಸ ಬಹಳ ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗಿದೆ ; ಯೋಜನ ಆಯೋಗದವರ ಜೊತೆ ಯೋಜನೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ವರ್ಷ ಹೋದವರಲ್ಲಿ ನಾವೇ ಮೊದಲಿಗರು. ಮೊದಲು ನಾನು ಏತಕ್ಕೆ ಹೋಗಬೇಕೆಂದು ಅಂದುಕೊಂಡರೂ ; ವಿಧಾನ ಮಂಡಲದ ಅಧಿವೇಶನ ಕರೆದಿದ್ದುದರಿಂದ; ಬಡ್ಜೆಟ್ ತಯಾರು ಮಾಡತಕ್ಕಂಥಾದ್ದು ಇದ್ದುದರಿಂದ ಕೊನೆಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಭಾವಿಸಿ ನಾನೇ ಮೊದಲು ಹೋಗಿದ್ದು ; ಬಹುಶಃ ಅದೇ ತಪ್ಪಾಯಿತೇನೋ ಎಂದು ನನಗೆ ಅನ್ನಿಸಿತು ಈ ವಿಚಾರದಲ್ಲಿ ಕೇಂದ್ರಸರ್ಕಾರ ಅರ್ಥಮಂತ್ರಿಗಳಿಗೂ ಮತ್ತು ಯೋಜನ ಆಯೋಗದ ಉಪಾಧ್ಯಕ್ಷರಿಗೂ ಪತ್ರ ಬರೆಯಲಿದ್ದೇನೆ

ಯಾವರೀತಿ ನಮ್ಮ ರಾಜ್ಯದ ಬಗ್ಗೆ ವರ್ಷದ ಕೊನೆಗೆ ಆಗಬಹುದಾದ ಡಿಫಸಿಟನ್ನು, ಒಟ್ಟು ಸಂಪನ್ಮೂಲಗಳನ್ನು ಕಳೆದು ನಮ್ಮ ಯೋಜನೆ ಗಾತ್ರವನ್ನು ನಿರ್ಧಾರ ಮಾಡಬೇಕೆಂದು ಅಗ್ರಹ ಮಾಡಿದ್ದೀರೋ ಅದೇ ರೀತಿಯ ಅಗ್ರಹವನ್ನು ಬೇರೆ ರಾಜ್ಯಗಳಿಗೂ ಅಗ್ರಹ ಮಾಡಿಲ್ಲ. ಈ ಒಂದು ಅಗ್ರಹ ನಿಮ್ಮ ಮೇಲೆ ಮಾಡದಿದ್ದರೂ ಯೋಜನ ಆಯೋಗದವರ ಚರ್ಚೆಯಾಗಿರುವುದರಿಂದಲೇ ಅಟೋಮ್ಯಾಟಿಕಾಗ್ಗಿ ಬರುವ ವರ್ಷ ಯೋಜನ ವೆಚ್ಚ 55 ಕೋಟಿ ಹೆಚ್ಚಾಗುತ್ತದೆ, ಅಂದರೆ 650 ಕೋಟಿ ಬದಲು 700 ಅಥವಾ 705 ಕೋಟಿ ಗಾತ್ರದ ಮೊತ್ತ ಅಗುತ್ತಿತ್ತು. ಆದರೂ ನನ್ನ ನಿರೀಕ್ಷೆ ಇದೆ ಮುಂದಿನ ವರ್ಷ ಯೋಜನೆಯ ಒಟ್ಟು ವೆಚ್ಚ 650 ಕೋಟಿ ಅಲ್ಲ ; ಯಾವುದೇ ಸಂದರ್ಭದಲ್ಲಿ 700 ಕೋಟಿಗಿಂತ ಕಡಿಮೆಯಾಗುವುದಿಲ್ಲ. 950 ಕೋಟಿ ಇಟ್ಟುಕೊಂಡರೂ ಬೇರೆ ಕೆಲವು ರಾಜ್ಯಗಳ ಜೊತೆ ತುಲನೆ ಮಾಡಿದಾಗ ಹಿಂದಿನ **ವರ್ಷದ ಯೋಜನೆ** ಗಾತ್ರಕ್ಕೂ ಬರುವ ವರ್ಷದ ಯೋಜನೆ ಗಾತ್ರಕ್ಕೂ ಇಷ್ಟು ಪರ್ಸೆಂಟೇಜ್ ವೃದ್ಧಿಯಾಗುತ್ತದೆ. ಆದರೆ, ಅದೇ ಮಟ್ಟದಲ್ಲಿ ಅನೇಕ ರಾಜ್ಯಗಳು ವೃದ್ಧಿಯಾಗಿಲ್ಲ. ಇದರಿಂದ ನಮ್ಮ ಮನಸ್ಸಿಗೆ ಸಮಾಧಾನ ಮಾಡಿಕೊಳ್ಳಬಹುದು. ನಾನು ಈ ಗಾಗಲೇ ನನ್ನ ಬಡ್ಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದೇನೆ ; ಪುನ: ಹೇಳಿದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ. ನಾವು ಬೇರೆ ಬೇರೆ ಮೂಲಗಳಿಂದ ಅಡ್ವಾನ್ಸ್ ತೆಗೆದುಕೊಳ್ಳುತ್ತೇವೆ ; ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ತೆಗೆದುಕೊಳ್ಳುತ್ತೇವೆ. ಓವರ್ ಡ್ರಾಫ್ಟ್ ತೆಗೆದುಕೊಳ್ಳುತ್ತೇವೆ. ಅನೇಕ ಸಂದರ್ಭದಲ್ಲಿ ಓವರ್‌ಡ್ರಾಫ್ಟ್ ತೆಗೆದುಕೊಳ್ಳುವಂಥ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರವೇ ನಿರ್ಮಾಣ ಮಾಡುತ್ತೆ

3-00 p. m.

ಹಾಗೇನೆ ಸೆಂಟ್ರಲ್ ಗ್ರಾಂಟ್ಸ್ ಮತ್ತು ಬೇರೆ ಬೇರೆ ಖಾತೆಗಳಿಗೆ ಕೇಂದ್ರ ಸರ್ಕಾರದಿಂದ ನಮಗೆ ಬರತಕ್ಕ ಹಣವಿದೆ ಅವರು ನಮಗೆ ಕಾಲಕಾಲಕ್ಕೆ ಸರಿಯಾಗಿ ಪಾವತಿ ಮಾಡಿದರೆ ನಾವು ಓವರ್‌ಡ್ರಾಫ್ಟ್ ಮಾಡಿ ಪುನಃ ಪುನಃ ಅವರ ಮೊರೆ ಹೋಗತಕ್ಕಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಈಗ ತಮಗೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ನಮ್ಮ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿಗೆ ಕಳೆದ ವರ್ಷ 10 ಕೋಟಿಯನ್ನು ನಾವು ಕೊಟ್ಟಿದ್ದೇವೆ ಕಾಯಿದೆ ಪ್ರಕಾರವಾಗಿ ಕೇಂದ್ರ ಸರ್ಕಾರದವರು ನಮಗೆ ಕೊಡಬೇಕಾದ ಹಣವನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಕೊಡುವುದಿಲ್ಲವೆಂದು ಹೇಳುತ್ತಿಲ್ಲ, ಆದರೆ ಅವರ ಶೇರುಧನ ಇಲ್ಲಿಯವರೆಗೂ ನಮಗೆ ಪಾವತಿಯಾಗಿಲ್ಲ. ನ್ಯಾಶನಲ್ ಸೇವಿಂಗ್ಸ್ ಹಣ 6-7 ತಿಂಗಳಿಗೆ 10-15 ಕೋಟಿ ರೂಗಳು ಅವರ ಹತ್ತಿರ ಶೇಖರಣೆ ಯಾಗಿರುತ್ತದೆ. ಅದನ್ನು ಸಹ ಕೂಡಲೇ ಕಳುಹಿಸುವುದಿಲ್ಲ. ಅದೇ ರೀತಿಯಾಗಿ ಬೇರೆ ಬೇರೆ ಪ್ಲಾನ್‌ನಲ್ಲಿ ಅವರು ಕೊಡತಕ್ಕ ಹಣ ಕೊಡಬಾರದೇ ಹೋಗುವುದರಿಂದ ನಾವು ಓವರ್ ಡ್ರಾಫ್ಟ್‌ಗೆ ಮೊರೆ ಹೋಗದೇ ಬೇರೆ ಉಪಾಯವಿರುವುದಿಲ್ಲ ವೇಸ್ ಅಂಡ್ ಮೀನ್ಸ್‌ನ್ನು ತೆಗೆದುಕೊಂಡರೆ ಅದಕ್ಕೆ ಕೇಂದ್ರ ಸರ್ಕಾರದವರು 9 ಪರ್ಸೆಂಟ್ ಬಡ್ಡಿಯನ್ನು ಚಾರ್ಜ್ ಮಾಡುತ್ತಾರೆ. ಓವರ್ ಡ್ರಾಫ್ಟ್ ಮೇಲೆ ಶೇಖಡ 13 ರಷ್ಟು ಹಾಕುತ್ತಾರೆ. ಇದು ಯಾವ ಮಾರ್ವಾಡಿ ನೀತಿನೋ ಗೊತ್ತಿಲ್ಲ. ಇದಕ್ಕೆ ನಮಗೆ ಎಲ್ಲಿರುತ್ತದೆ ? ಅವರು ನಮಗೆ ಇದನ್ನು ಕೊಡುವುದಿಲ್ಲ ಇದಕ್ಕಾಗಿ ನಾವು ಹಣವನ್ನು ಉಪಯೋಗಿಸಬೇಕಾಗುತ್ತದೆ. ನಮ್ಮ ಹಣ ಅವರ ಹತ್ತಿರಾನೇ ಇರುತ್ತದೆ, ಅಂಥಾದ್ದರಲ್ಲಿ ನಮ್ಮ ಹಣಕ್ಕೇ ಅವರು ಬಡ್ಡಿ ತೆಗೆದುಕೊಳ್ಳುತ್ತಾರೆ. ನಾವು ಇಲ್ಲಿ ಓವರ್ ಡ್ರಾಫ್ಟ್‌ನ್ನು ತೆಗೆದುಕೊಂಡರೆ ಅದಕ್ಕೆ ಶೇಖಡ 13 ರಷ್ಟು ಹಾಕುತ್ತಾರೆ. ಆದುದರಿಂದ ನಮಗೆ ಸೇರಬೇಕಾದಂಥ ಹಣ ಏನಿದೆಯೋ ಅಷ್ಟನ್ನು ಕೂಡಲೇ ಒದಗಿಸಿ ಕೊಡಿ ಇಲ್ಲದಿದ್ದರೆ ಓವರ್ ಡ್ರಾಫ್ಟ್ ಮೇಲೆ ಮತ್ತು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಮೇಲೆ 5 ಪರ್ಸೆಂಟ್ ಮತ್ತು ಓವರ್ ಡ್ರಾಫ್ಟ್ ಮೇಲೆ ಶೇಖಡ 9 ರಂತೆ ಚಾರ್ಜ್ ಮಾಡಿ ಎಂದು ಕೇಂದ್ರ ಸರ್ಕಾರದವರಿಗೆ ಹೇಳಿದ್ದೇನೆ. ಅದರ ಬಗ್ಗೆ ಕಳೆದ ಸಾರಿಯ ಬಜೆಟ್‌ನಲ್ಲಿ ಸೂಚನೆ ಮಾಡಿದ್ದೇನೆ. ನಾವು ಖರ್ಚು ಮಾಡತಕ್ಕದ್ದನ್ನು ಕೇಂದ್ರ ಸರ್ಕಾರದವರು, ರಿಸರ್ವ್ ಬ್ಯಾಂಕಿನವರು ಮತ್ತಿತ್ತರ ಸಂಘ ಸಂಸ್ಥೆಗಳು ನಿಗಾ ವಹಿಸಿ ನೋಡುತ್ತಿರುತ್ತಾರೆ. ನಿಗಾ ಇರಬೇಕು ಇರಬಾರದೆಂದು ಹೇಳುತ್ತಿಲ್ಲ. ಏತಕ್ಕೆಂದರೆ ರಾಜ್ಯ ಸರ್ಕಾರ ಸರ್ವತಂತ್ರವಲ್ಲ, ರಾಜ್ಯ ಸರ್ಕಾರದಲ್ಲೂ ಕೂಡಾ ಬಹಳಷ್ಟು ತಪ್ಪಾಗಬಹುದು. ಹೇಳುವವರು ಕೇಳುವವರು ಇರಬೇಕು. ಆದರೆ ನಾನು ಹೇಳುವುದು ಏನೆಂದರೆ ಕೇಂದ್ರ ಸರ್ಕಾರ ಮಾಡತಕ್ಕ ಖರ್ಚಿನ ಮೇಲೆ ಯಾರದೂ ಇಲ್ಲ. ನೀವು ಕೇಳಬಹುದು ಪಾರ್ಲಿಮೆಂಟ್ ಇಲ್ಲವೇ ಎಂದು. ಪಾರ್ಲಿಮೆಂಟಿನಲ್ಲಿ ಯಾವ ರೀತಿಯಾಗಿ ವಿಮರ್ಶೆ ಮಾಡಬಹುದೋ ಅಥವಾ ಕ್ರಿಟಿಕಲ್ ಎಗ್ಜಾಮಿನೇಷನ್ ಕೇಂದ್ರ ಸರ್ಕಾರದ ಖರ್ಚಿನ ಮೇಲೆ ಆಗಬೇಕೋ ಅದು ಪ್ರತಿಯೊಂದು ಬಾಬಿನ ಮೇಲೂ ಆಗುತ್ತಿಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇನ್ನು ಈ ಸಾರಿ ಡಿಮ್ಯಾಂಡ್‌ಗಳನ್ನು ಗಿಲಿಟಿನ್‌ಗೆ ಹಾಕುವಂಥಾ ಪರಿಸ್ಥಿತಿ ಬರುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ನೀವು ಸಮಯವನ್ನು ಪ್ರತಿಯೊಬ್ಬರೂ ಸರಿಯಾಗಿ ಹಂಚಿಕೊಂಡು, ಪ್ರತಿಯೊಬ್ಬರೂ

ಸಮಯಕ್ಕೆ ಸರಿಯಾಗಿ ಮಾತನಾಡಿದರೆ ಗಿಲಿಟಿನ್‌ಗೆ ಹಾಕುವಂಥಾ ಪ್ರಮೇಯ ಬರುವುದಿಲ್ಲ. ಈ ವರ್ಷ ಕೇಂದ್ರ ಸರ್ಕಾರದವರ ಬಜೆಟ್‌ನಲ್ಲಿ ಒಂದೊಂದು ಸಲ ಗಿಲಿಟಿನ್‌ಗೆ ಹಾಕುವಂಥಾ ಪ್ರಸಂಗಗಳು ಬಂದು ಒಂದೊಂದು ನಿಮಿಷದಲ್ಲಿ ಪಾಸ್ ಆಗಿ ಹೋಗಿದೆ. ಅದರ ಮೇಲೆ ಚರ್ಚೆ ಮಾಡುತ್ತಿಲ್ಲ. ಯಾವುದು ಯೋಜನೆಗೆ ಸೇರಬೇಕು, ಯಾವುದು ಸೇರಬಾರದು ಎನ್ನುವ ಬಗ್ಗೆ ಬೇಕಾದಷ್ಟು ತಿಕ್ಕಾಟ ಮಾಡುತ್ತೇವೆ. ನಾವು ಯಾವುದೇ ಯೋಜನೆಗಳಲ್ಲಾಗಲೀ, ಎಷ್ಟೇ ಮಹತ್ವದ ಯೋಜನೆಗಳಲ್ಲಾಗಲೀ ಯೋಜನೆಗಳಲ್ಲಿ ಸೇರಿಸದೇ ಇದ್ದರೆ ನಮಗೆ ಬೇರೆ ಯಾವುದೇ ತರಹದ ಸಹಾಯ ಸಿಗುವುದಿಲ್ಲ, ಮತ್ತೆ ಯೋಜನೆಗೆ ಸೇರದೇ ಇರುವಂಥಾ ಕೆಲಸಗಳನ್ನು ತೆಗೆದುಕೊಳ್ಳಕೂಡದು ಎಂದು ಹೇಳುವಂಥಾ ಕಟ್ಟುನಿಟ್ಟಾದ ನಿಯಮಗಳು ಇದೆ. ಆದುದರಿಂದ ಇದನ್ನು ಹೇಳುವಾಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ವೀರಪ್ಪಮೊಯ್ಲಿಯವರು ತಪ್ಪು ಭಾವನೆ ಮಾಡಿಕೊಳ್ಳಬಾರದು. ಇದನ್ನೆಲ್ಲಾ ಯಾವ ಉದ್ದೇಶದಿಂದ ಹೇಳುತ್ತಿದ್ದೇನೆ ಎಂದರೆ --

ಶ್ರೀ ಕೆ. ಶಿವಮೂರ್ತಿ:-ಹೇಳುವುದೆಲ್ಲಾ ಹೇಳಿ ಬಿಟ್ಟು ರಾಜಕೀಯದ ಮಾತನಾಡುತ್ತಿದ್ದೀರಿ.

ಶ್ರೀ ಎಸ್ ಸೂರ್ಯನಾರಾಯಣ ರಾವ್;-ನಮ್ಮ ರಾಜ್ಯಕ್ಕೆ ಬರಬೇಕಾದಂಥ ಹಣ ಬರದಿದ್ದರೆ ಅದನ್ನು ಹೇಳಿದರೆ ತಪ್ಪೇನಿತೆ, ಏತಕ್ಕೆ ರಾಜಕೀಯ ಬೇಡನೆಂದು ಹೇಳುತ್ತಿದ್ದೀರಿ ?

ಶ್ರೀ ಕೆ. ಶಿವಮೂರ್ತಿ -ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಎಲ್ಲರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆ. **This kind of situation is faced, more or less, by all the States in the country. I know everything.**

(Interruptions)

ಅಧ್ಯಕ್ಷರು.--ತುಂಬಾ ತಿಳಿದುಕೊಂಡಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ..

Sri K.SHIVAMURTHY -- **I am not here to taught by anybody about all these thinght.**

Mr SPEAKER --**Please rusume your seat.**

ಶ್ರೀ ರಾಮಕೃಷ್ಣ ಹೆಗಡೆ.--ಮಹಾ ಪಂಡಿತರು.........

ಶ್ರೀ ಕೆ. ಶಿವಮೂರ್ತಿ.--ರಾಜ್ಯ ಮತ್ತು ಕೇಂದ್ರದ ಸಂಬಂಧ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ರಾಜಕೀಯವಾಗಿ ಏತಕ್ಕೆ ಮಾತನಾಡುತ್ತಿದ್ದೀರಿ,.

ಅಧ್ಯಕ್ಷರು.-- ಪದೇ ಪದೇ ಈ ರೀತಿಯಾಗಿ ಸದನದಲ್ಲಿ ಮಾತನಾಡುವುದು ಸರಿಯಲ್ಲ. ತಮಗೆ ಎಲ್ಲಾ ವಿಚಾರ ಗೊತ್ತಿರಬಹುದು ದಯವಿಟ್ಟು ಕುಳಿತುಕೊಳ್ಳಿ, ನನಗೇ ಎಷ್ಟೋ ವಿಷಯಗಳು ಗೊತ್ತಿಲ್ಲ. ಆದುದರಿಂದ ನಾವು ಕೇಳುತ್ತೇವೆ ತಾವು ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಕೆ ಶಿವಮೂರ್ತಿ.--ನಾನಾ ಅಧ್ಯಕ್ಷರನ್ನು ಬಿಟ್ಟು ಬೇರೆ ಯಾರಿಗೂ ಕೇರ್ ಮಾಡುವುದಿಲ್ಲ

ಅಧ್ಯಕ್ಷರು -- ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.--ಕೇಂದ್ರದಿಂದ ನಮಗೆ ಎಷ್ಟು ಬರಬೇಕಾಗಿದೆ, ನಾವು ಎಷ್ಟು ಹಣವನ್ನು ಪಡೆದುಕೊಳ್ಳಬೇಕಾಗಿದೆ ಎನ್ನುವ ಬಗ್ಗೆ ಹೇಳುತ್ತಿದ್ದಾರೆ. ಕೇಂದ್ರ ಎಂದಾಕ್ಷಣ ಇವರು ಏತಕ್ಕೆ ಉರಿದು ಬೀಳುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.-- ಅಧ್ಯಕ್ಷರೇ, ಮಾನ್ಯ ಶಿವಮೂರ್ತಿಯವರು ಬಹಳ ಪಂಡಿತರು, ಅದರ ಬಗ್ಗೆ ಸಂದೇಹವಿಲ್ಲ. ನನಗೆ ಅವರಷ್ಟು ಜ್ಞಾನವಿಲ್ಲ ಒಪ್ಪಿಕೊಳ್ಳುತ್ತೇದೆ ಅವರಿಗೆ ಅಪಾರವಾದ ಜ್ಞಾನವಿದೆ, ಬಹಳ ವರ್ಷಗಳ ಅನುಭವವಿದೆ.

[ಗೊಂದಲ]

ಶ್ರೀ ರಾಮಕೃಷ್ಣ ಹೆಗಡೆ.-- ಆದುದರಿಂದ ಅಧ್ಯಕ್ಷರೇ, ಯೋಜನೆಗೆ ಸೇರಿದಂಥವುಗಳಿಗೆ ಮಾತ್ರ ನಾವುಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆಯೇ ಹೊರತು ಬೇರೆ ಯೋಜನೆಗಳಿಗೆ ಸಾಧ್ಯವಿಲ್ಲ. ಈಗ ವಿಜಯನಗರ ಉಕ್ಕಿನ ಕಾರ್ಖಾನೆಯಲ್ಲಿ ಸೇರಿರುವಂಥಾದ್ದು ಮತ್ತು ಮಂಗಳೂರು ರಿಫೈನರಿ ಕಾರ್ಖಾನೆ ಇದು ಸಹ ಯೋಜನೆಯಲ್ಲಿ ಸೇರಿರುವಂಥಾದ್ದು. ಇವೆರಡಕ್ಕೂ ಸಹ 6 ನೇ ಪಂಚವಾರ್ಷಿಕ ಯೋಜನೆ ಮುಗಿಯುತ್ತಾ ಬಂತು ಆದರೂ ಸಹ ಇದಕ್ಕೆ ಇಲ್ಲಿಯವರೆಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಕೆಲವೊಂದು ಭಾಗದಲ್ಲಿ ಕೇಂದ್ರ ಸರ್ಕಾರ ವೆಚ್ಚ ಮಾಡುವುದನ್ನು ನೋಡಿದರೆ ಯಾವುದನ್ನು ಯೋಜನೆಯಲ್ಲಿ ಹಾಕಿದಂಥ ಮಾಡಬೇಕಾಗಿತ್ತೋ ಅದನ್ನು ಮಾಡಿದಹಾಗೆ ಕಾಣುವುದಿಲ್ಲ. ಇದನ್ನು ನಾನು ಉದಾಹರಣೆಗೆ

ಹೇಳುತ್ತೇನೆ ಅಷ್ಟೆ, ಏಷ್ಯಾಡ್ ಬಗ್ಗೆ ಬೇಕಾದಷ್ಟು ಸಲ ಚರ್ಚೆಯಾಯಿತು, ಅದು ಯೋಜನೆಯಲ್ಲಿ ಸೇರಿ ದಂಥದ್ದಲ್ಲ, ಮಾರುತಿ ಕಾರು ಯೋಜನೆಯಲ್ಲಿ ಸೇರಿದಂಥದ್ದಲ್ಲ

ಶ್ರೀ ಕೆ. ಶಿವಮೂರ್ತಿ.--ಹೆಲಿಕ್ಯಾಪ್ಟರ್ ಯೋಜನೆಯಲ್ಲಿ ಸೇರಿದೆಯೋ ?

[ಗೊಂದಲ]

ಅಧ್ಯಕ್ಷರು.--ಈ ರೀತಿ ಪದೇ ಪದೇ ತಾವು ಇಂಟರ್‌ವಿ ಮಾಡುತ್ತಾ ಇದ್ದರೆ ಫ್ಲೋ ಥಾಟ್ ಹೋಗುತ್ತದೆ. ಆಮೇಲೆ ಗಂಭೀರವಾಗಿ ಪ್ರಶ್ನೆ ಕೇಳಿ ನೀವು ನಿಯಮಗಳನ್ನು ಮೀರಿದರೆ ನಾನು ನನ್ನ ನಿಯಮಗಳೊಳಗೆ ಏನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.--ಮಾನ್ಯ ಅಧ್ಯಕ್ಷರೆ ಆದುದರಿಂದ ಕೇಂದ್ರ ಸರ್ಕಾರದ ವೆಚ್ಚದ ಮೇಲೂ ಕೂಡ ಒಂದಲ್ಲ ಒಂದುರೀತಿಯ ವೀಕ್ಷಣೆ ಆಗಬೇಕು ಅದು ವಿಮರ್ಶೆ ಆಗಬೇಕು, ಅದರ ಒಂದು ಪದ್ಧತಿ ಬರಬೇಕು, ಎಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ ಮಾನ್ಯ ಸದಸ್ಯರು ಕೆಲವೊಂದು ನಿರ್ದಿಷ್ಟವಾಗಿ ಎತ್ತಿದ ವಿಚಾರಗಳ ಬಗ್ಗೆ ಈಗ ನಾನು ಹೋಗುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಬೆಳಿಗ್ಗೆ ಕೂಡ ಒಂದು ವಿಚಾರವನ್ನು ಎತ್ತಿದರು ಮತ್ತು ತಮ್ಮ ಭಾಷಣದಲ್ಲೂ ಹೇಳಿದರು. ಅದು ಏನೆಂದರೆ, ಸರ್ಕಾರಿ ನೌಕರರ ಸಮಸ್ಯೆಗಳು. ಮಾನ್ಯ ಅಧ್ಯಕ್ಷರೆ ನಮ್ಮ ಸರ್ಕಾರಿ ಕರ್ಮಚಾರಿಗಳ ಒಂದು ಸಂಸ್ಥೆ ಇದೆ ಈ ಸಂಸ್ಥೆಯಲ್ಲಿ ಎರಡು ಪಂಗಡ ಇದೆ. ಈ ಎರಡು ಗುಂಪಿನವರ ಜೊತೆಗೆ ನಾನು ಒಂದಕ್ಕಿಂತ ಹೆಚ್ಚು ಸಲ ಮಾತನಾಡಿದ್ದೇನೆ ಈ ಸರ್ಕಾರಿ ಕರ್ಮಚಾರಿಗಳ ಸಮಸ್ಯೆಗಳನ್ನು ನಾನು ಕೇಳಿದ್ದೇನೆ ಅವರೂ ನಮಗೆ ಮೆಮೊರ್ಯಾಂಡಂ ಕೊಟ್ಟರು. ಮಾನ್ಯ ಮೊಯ್ಲಿಯವರು 334ನೇ ಕಲಮಿನ ಕೆಳಗೆ ಎತ್ತಿದಂಥ ವಿಚಾರದಲ್ಲಿ ಅದನ್ನು ಬರೆದಿದ್ದಾರೆ. ಕೆಲವು ಸಲ ಭೇಟಿಯಾಗಲಿಕ್ಕೆ ಬಂದರು, ಮನೆಯಲಿದ್ದರೂ ಇಲ್ಲ ಎಂದು ಹೇಳಿದರೆಂದು ಹೇಳಿದ್ದಾರೆ. ಕೊನೆಗೆ 8-30 ಗಂಟೆಗೆ ಭೇಟಿಯಾದದ್ದು ನಿಜ, ನಾನು ಮನೆಯಲ್ಲಿದ್ದರೂ ಇಲ್ಲ ಎಂದು ಹೇಳಿದ್ದು ನಿಜ. ನೀವು ಏಕೆ ಎಂದು ಕೇಳಬಹುದು. ನನಗೆ Spondulysis ನೋವು ಬರುತ್ತದೆ, ಆ ದಿವಸ ನನಗೆ ವಿಪರೀತ ನೋವು ಇತ್ತು ಕೆಳಗೆ ಇದ ವರಿಗೆ ಹೇಳಿದೆ, ಯಾರಾದರೂ ಕೇಳಿದರೆ, ಭೇಟಿಯಾಗಲಿಕ್ಕೆ ಬಂದರೆ ನಾಳೆ ಬರಬೇಕು, ಇವತ್ತು ಮನೆಯಲ್ಲಿ ಇಲ್ಲ ಎಂದು ಹೇಳಿ ಎಂದೂ ಹೇಳಿದೆ. ನಾನು ಸುಳ್ಳು ಹೇಳುವುದಿಲ್ಲ. ಏಕೆಂದರೆ ನಾನು ಕೆಳಗೆ ಬರುವಂಥ ಸ್ಥಿತಿಯಲ್ಲಿ ಇರಲಿಲ್ಲ. ಇವರು ಸಾಯಂಕಾಲ ಬಂದರು, ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರಲಿಲ್ಲ. ನಾಳೆ ಬೆಳಿಗ್ಗೆ ಬರಲಿ ಭೇಟಿಯಾಗಿ ಎಂದು ಹೇಳಿ ಕಳಿಸಿದೆ. ಅವರು ಇಲ್ಲ ಬೆಳಿಗ್ಗೆವರೆಗೆ ಇಲ್ಲೇ ಇರುತ್ತೇವೆ ಎಂದು ಹೇಳಿದರು. ಆಮೇಲೆ ನಾನು ಯೋಚನೆ ಮಾಡಿದೆ. ಅವರು ಎಷ್ಟೇ ಹಟ ಹಿಡಿದರೂ ನಾವು ಹಟ ಹಿಡಿಯುವುದು ಸರಿಯಲ್ಲ ಎಂದು 8, 8-30 ಗಂಟೆಗೆ ಹೋಗಿ ಭೇಟಿಯಾದೆ. ನೀವು ಇಷ್ಟೆಲ್ಲಾ ಆಗ್ರಹ ಮಾಡುವ ಬದಲು ನಾಳೆ ಬೆಳಿಗ್ಗೆ ಭೇಟಿಯಾದರೂ ಆಗಬಹುದು, ನಾನು ಎಂದೂ ಇಲ್ಲ, ಎಂದು ಹೇಳುತ್ತಾ ಇಲ್ಲ, ಅನೇಕ ಸಾರಿ ಭೇಟಿಯಾಗಿದ್ದೀರಿ ಎಂದೆ. ಅವರ ಬೇಡಿಕೆಗಳಲ್ಲಿ ಕೆಲವೊಂದು ಬೇಡಿಕೆಗಳನ್ನು ಈಗಾಗಲೇ ಅಂಗೀಕರಿಸಿದ್ದೇವೆ. ಇಲ್ಲಿಯವರೆಗೆ 5 ಡಿ.ಎ. ಇನ್‌ಸ್ಟಾಲ್‌ಮೆಂಟ್ ಅವರಿಗೆ ಕೊಟ್ಟಿದ್ದೇವೆ ಆಮೇಲೆ Relaxation of certain conditions for grant of next higher scale under the scheme of time-bound advancement ಪ್ರಮೋಷನ್‌ಗೆ, ಅದನ್ನೂ ಕೂಡ ನಾವು ಒಪ್ಪಿಕೊಂಡಿದ್ದೇವೆ. Constitution of an official committee to examine the anomaly of pay-scales, ಆ ಕಮಿಟಿ ಕೂಡ ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಅದರಲ್ಲಿ ತಮ್ಮ ಪ್ರತಿನಿಧಿಯೊಬ್ಬರನ್ನು ಹಾಕಬೇಕು ಎಂದು ಎರಡು ಪಂಗಡದವರೂ ಹೇಳುತ್ತಾರೆ. ಹಿಂದೆ ಇದರ ಬಗ್ಗೆ ಹಾಕಿರತಕ್ಕಂಥಾದ್ದು ನನಗೆ ನೆನಪಿದ್ದಮಟ್ಟಿಗೆ ಇಲ್ಲ ಅದನ್ನು ನಾನು ಹೇಳಿದೆ. ಇದನ್ನು ರಿಜೆಕ್ಟ್ ಮಾಡಿಲ್ಲ ಯೋಚನೆ ಮಾಡುತ್ತೇನೆ, ಹಾಕುವುದಿಲ್ಲ ಎನ್ನುವುದು ಸೂಕ್ತವಲ್ಲ, ಬೇಕಾದರೆ ಹಾಕೋಣ, ಯೋಚನೆ ಮಾಡುತ್ತೇನೆ ಎಂದು ಹೇಳಿದೆ. ಆಮೇಲೆ ಅನೇಕ ಖಾತೆಗಳಲ್ಲಿ ಸುಮಾರು 50 ಸಾವಿರ ವೇಕನ್ಸೀಸ್ ಏನಿವೆ ಅದನ್ನು ತುಂಬಬೇಕು ಎಂದು ಹೇಳಿದರು. ಈಗಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. Extension of the benefit of liberalised pension formula to the Government servants who have retired from service prior to 1-1-1982. ಇದನ್ನೂ ಕೂಡ ನಾವು ಒಪ್ಪಿಕೊಂಡಿದ್ದೇವೆ. ಆಮೇಲೆ Absorption of PWD gang coolies and gangmen in monthly rated establishment. ಇಲ್ಲಿಯವರೆಗೆ ಆರ್ಡರ್ ಹೊರಟಿಲ್ಲ ಎಂದು ಹೇಳಬಹುದು. ಕಾಯಿದೆ ಪ್ರಕಾರ ಒಂದು ಖಾತೆಯಿಂದ ಮತ್ತೊಂದು

ಖಾತೆಗೆ ಹೋಗಬೇಕು 2½ ಸಾವಿರ ಜನರನ್ನು ಖಾಯಂ ಮಾಡಬೇಕು ಮತ್ತು ಬಾಕಿಯವರ ವಿಚಾರದಲ್ಲೂ ಇಷ್ಟರಲ್ಲೇ ತೀರ್ಮಾನ ತೆಗೆದುಕೊಳ್ಳುತ್ತೇವೆ. ಆಮೇಲೆ Extension of benefit of HRA workers in rural areas. ಇದನ್ನು ನನ್ನ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೇನೆ. 5 ರೂಪಾಯಿಗಳ ಮನೆ ಬಾಡಿಗೆ ಭತ್ಯವನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೂ ಕೊಡುತ್ತೇವೆಂದು ಹೇಳಿದೆ. ಆಮೇಲೆ ಮೊನ್ನೆ ಹೇಳಿದ್ದರಲ್ಲಿ ಮೂರು ವಿಚಾರಗಳನ್ನು ಹೇಳಿದರು. ಮೊದಲನೆಯದು, ಇಂಟರಿಂ ರಿಲೀಫ್ ಕೊಡಬೇಕು. ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ, ಕೇರಳ ಸರ್ಕಾರದವರು ಕೊಟ್ಟಿದ್ದಾರೆ, ಇಲ್ಲೂ ಕೊಡಬೇಕು ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಒಂದು ಹೊಸ ಪೇ ಕಮೀಷನ್ ಮಾಡಿದಾರೆ, ಅಲ್ಲಿ ಬಹಳ ವರ್ಷಗಳಿಂದ ರಿವಿಜನ್ ಆಗಿಲ್ಲ. ಮಾನ್ಯ ಮೊಯ್ಲಿಯವರು ಅರ್ಥ ಮಂತ್ರಿಗಳಾಗಿದ್ದಾಗ 1982ನೇ ಇಸವಿಯಲ್ಲಿ ಮಾಡಿದಂಥ ವೇತನದ ಪರಿಷ್ಕರಣ ಬಹಳ ಚೆನ್ನಾಗಿದೆ. ಇವತ್ತು ನಮ್ಮ ಸರ್ಕಾರಿ ನೌಕರರ ವೇತನವನ್ನು ಅನೇಕ ದೃಷ್ಟಿಯಿಂದ ಬೇರೆ ಕಡೆ ಮತ್ತು ಕೇಂದ್ರದ ಜೊತೆಗೆ ತುಲನೆಮಾಡಿ ನೋಡಿದರೆ ಸಾಕಷ್ಟು ತೃಪ್ತಿಕರವಾಗಿದೆ ಎಂದು ಹೇಳಬಹುದು. ಆದುದರಿಂದ ಇಂಟರಿಂ ರಿಲೀಫ್ ಕೊಡಬೇಕು ಅಂದರೆ ಏಕೆ ಇಂಟರಿಂ ರಿಲೀಫ್ ಕೊಡುವುದು, ತಾತ್ಕಾಲಿಕವಾದಂಥ ಪರಿಹಾರ ಕೊಡಬೇಕು ಅಂದರೆ ಅದಕ್ಕೆ ಒಂದು ಅರ್ಥವಿದೆ. ಕೇಂದ್ರ ಸರ್ಕಾರದವರು ಮಾಡಿದ್ದಾರೆ ಎಂದು ನಾವು ಮಾಡಲಿಕ್ಕೆ ಆಗುವುದಿಲ್ಲ. ಅದೇ ರೀತಿ ಕೇಂದ್ರ ಸರ್ಕಾರದವರು ಬೋನಸ್ ಕೊಡುತ್ತಾರೆ, ತಮಗೂ ಕೊಡಬೇಕು ಎಂದು ಹೇಳಿದರು. ಕೇಂದ್ರ ಸರ್ಕಾರದವರು ಈ ಒಂದು ನಿರ್ಣಯವನ್ನು ಏಕೆ ತೆಗೆದುಕೊಂಡರೋ ನನಗೆ ಗೊತ್ತಿಲ್ಲ. ಈ ಬಗ್ಗೆ ಹಿಂದೆ ಒಂದು ಸಲ ಹೇಳಿದ್ದೆ ಎಂಬ ನೆನಪು ಇದೆ. ಕೇಂದ್ರ ಸರ್ಕಾರದವರ ಹತ್ತಿರ ದುಡ್ಡು ಬೇಕಾದಷ್ಟು ಇದೆ. ಏನು ಬೇಕಾದರೂ ಮಾಡಬಹುದು, ಅದನ್ನು ನಾವು ಇಲ್ಲಿ ಮಾಡುವುದಕ್ಕಾಗುವುದಿಲ್ಲ, ಹುಲಿಯ ಬೆನ್ನು ನೋಡಿ ನರಿ ಮೈ ಸುಟ್ಟುಕೊಂಡ ಹಾಗೆ ಆಗುತ್ತದೆ ಎಂದು ಹೇಳಿದೆ. ಸರ್ಕಾರಿ ಕರ್ಮಚಾರಿಗಳಿಗೆ ಯಾವ ಆಧಾರದ ಮೇಲೆ ಬೋನಸ್ ಕೊಡುತ್ತಾರೋ ಗೊತ್ತಿಲ್ಲ. ಏಕೆಂದರೆ ಪ್ರಾಫಿಟಿಗೂ ಬೋನಸ್‌ಲಿಂಕ್ ಇರಬೇಕು ಎನ್ನುವುದು ಮೂಲಭೂತ ತತ್ವ. ಕೈಗಾರಿಕಾ ಕ್ಷೇತ್ರದಲ್ಲಿ ನಾವು ಈ ಒಂದು ನಿರ್ಣಯವನ್ನು ಒಪ್ಪಿಕೊಂಡಿದ್ದೇವೆ. ಲಾಭವಾಗಲಿ, ಆಗದೇ ಇರಲಿ ಶೇಕಡ 8.3 ರಷ್ಟು ಕೊಡಲೇಬೇಕು ಎಂದು. ಈಗ ಸರ್ಕಾರ ಇಂಡಸ್ಟ್ರಿ ಅಲ್ಲ. ಕೇಂದ್ರ ಸರ್ಕಾರದವರು ಯಾವ ಆಧಾರದ ಮೇಲೆ ಕೊಟ್ಟರೋ, ನಮಗೆ ತಿಳಿಸಲೂ ಇಲ್ಲ, ನಮ್ಮನ್ನು ಕೇಳಲು ಇಲ್ಲ. ಅಂತಹ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾದರೂ ಕೂಡ ಕೇಂದ್ರ ಸರ್ಕಾರದ ನೌಕರರು ಎಷ್ಟು ಇದ್ದಾರೆ, ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯ ಸರ್ಕಾರದ ನೌಕರರು ಇದ್ದಾರೆ ಎಂಬುದನ್ನು ಗಮನಿಸಬೇಕು, ಮತ್ತು ಕೇಂದ್ರ ಸರ್ಕಾರದ ಕಚೇರಿಗಳು ರಾಜ್ಯಗಳಲ್ಲಿರುವುದರಿಂದ, ಕೇಂದ್ರ ಸರ್ಕಾರದ ಒಬ್ಬ ಲಿಫ್ಟ್ ಮ್ಯಾನ್‌ಗೆ ಸಿಕ್ಕತಕ್ಕ ಭತ್ಯ ಬೇರೆ, ನಮ್ಮ ಲಿಫ್ಟ್‌ಮ್ಯಾನ್‌ಗೆ ಸಿಕ್ಕುವ ಭತ್ಯ ಬೇರೆ, ಆದರೆ ಒಂದೇ ಕಡೆ ಇರುತ್ತಾರೆ. ಒಂದೇ ಕಡೆ ಕೆಲಸ ಮಾಡಬೇಕು. ಒಂದೇ ಕಡೆ ಸಾಮಾನುಗಳನ್ನು ಖರೀದಿ ಮಾಡಬೇಕು. ಇದರಲ್ಲಿ ಇವನಿಗೊಂದು ರೀತಿಯ ಭತ್ಯ, ಅವನಿಗೊಂದು ರೀತಿಯ ಭತ್ಯವನ್ನು ಕೊಟ್ಟರೆ ಸಾಮಾನ್ಯವಾಗಿ ಹೊಟ್ಟೆ ಉರಿ ಇರುತ್ತದೆ. ಕೇಂದ್ರ ಸರ್ಕಾರದವರಿಗೆ ಎರಡು ಹೊಟ್ಟೆ, ನಮ್ಮವರಿಗೆ ಒಂದು ಹೊಟ್ಟೆ ಏನೂ ಇಲ್ಲ. ಆದ್ದರಿಂದ ಅನಾವಶ್ಯಕವಾಗಿ ಡಿಸ್‌ಗಸ್ಟ್ ಪ್ರಾರಂಭವಾಗುತ್ತದೆ. 1600 ರೂ. ಸಂಬಳ ಬರುವುದಕ್ಕಿಂತ ಕಡಿಮೆ ಬರುವವರಿಗೆ 15 ದಿವಸಗಳ ಬೋನಸ್ ಕೊಡಬೇಕೆಂದು ತೀರ್ಮಾನ ಮಾಡಿದರು. ಈಗ ಅದನ್ನು ನಾವು ಇಲ್ಲಿ ಕೊಡುವುದಕ್ಕಾಗುವುದಿಲ್ಲ. ಆದರೆ ಕೇಂದ್ರ ಸರ್ಕಾರದ ನೌಕರರಿಗೆ ಸಿಕ್ಕದೇ ಇರತಕ್ಕ ಸೌಲಭ್ಯ ನಮ್ಮ ಸರ್ಕಾರದ ನೌಕರರಿಗೆ ಇದೆ. ಅದೇನೆಂದರೆ ಎರಡು ವರ್ಷಗಳಿಗೊಂದು ಸಾರಿ 30 ದಿನದ ರಜಾವನ್ನು ಎನ್‌ಕ್ಯಾಷ್ ಮಾಡಿಕೊಳ್ಳಬಹುದು. ಕೇಂದ್ರ ಸರ್ಕಾರದ ನೌಕರರಿಗೆ ಈ ಸೌಲಭ್ಯ ಇಲ್ಲ. ಆಮೇಲೆ ಮತ್ತೊಂದು ಬೇಡಿಕೆ ಅವರದು. ಅದು ಯಾವುದೆಂದರೆ ನಿವೃತ್ತಿ ವಯಸ್ಸನ್ನು 55ರಿಂದ 58ಕ್ಕೆ ಏರಿಸಬೇಕೆಂಬುದು. ಅದರ ಬಗ್ಗೆ ನನ್ನ ಬಡ್ಜೆಟ್ ಭಾಷಣದಲ್ಲೇ ಹೇಳಿದ್ದೇನೆ. ಪುನಃ ಅದನ್ನು ವಿವರಿಸಬೇಕಾದ ಅಗತ್ಯ ಇಲ್ಲ.

ಶ್ರೀ ಎಸ್ ಸೂರ್ಯನಾರಯಣರಾವ್. – ನಿವೃತ್ತಿ ವಯಸ್ಸನ್ನು 58 ಮಾಡಿದ್ದೇವೆಂದು ಇಲ್ಲಿಯೇ ಅನೌನ್ಸ್ ಮಾಡಿಬಿಡಿ.

ಶ್ರೀ ರಾಮಕೃಷ್ಣ ಹೆಗಡೆ. ಈ ಸಭೆ ಒಪ್ಪಿಕೊಳ್ಳುವುದಾದರೆ, ಇವತ್ತು ತಾವುಗಳೆಲ್ಲರೂ ಇದಕ್ಕೆ ಒಪ್ಪಿದ್ದೇವೆಂದು ಹೇಳಿದರೆ ಅದನ್ನು ಮಾಡುವುದಕ್ಕೆ ನಾನು ತಯಾರಾಗಿದ್ದೇನೆ, ಜಿಜ್ಞಾಸೆ ಪಡತಕ್ಕಂತಹ ಅಭಿಪ್ರಾಯ ಇಲ್ಲ. ನನ್ನ ನೆನಪಿನ ಪ್ರಕಾರ ಸುಮಾರು 1966-67ನೇ ಇಸವಿಯಲ್ಲಿ ಮೊದಲನೆಯದಾಗಿ ಪ್ರಾಥಮಿಕ ಶಾಲೆಯ ಶಿಕ್ಷಕರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಸಿದಂತಹ ನಿರ್ಣಯವನ್ನು ಮಾಡಲಾಗಿತ್ತು

ಇದಾದ ನಂತರ ಬಂದಂತಹ ಸರ್ಕಾರ ಇದು ಸರಿಯಲ್ಲ ಎನ್ನತಕ್ಕಂತಹ ಅಭಿಪ್ರಾಯದಿಂದ ಪುನಃ 55ಕ್ಕೆ ಇಳಿಸಿದರು. ಆಂಧ್ರದಲ್ಲೂ 58 ವರ್ಷ ನಿವೃತ್ತಿ ವಯಸ್ಸು ಇತ್ತು. ಇಡೀ ಹಿಂದುಸ್ಥಾನದಲ್ಲಿ 2-3 ರಾಜ್ಯಗಳನ್ನು ಬಿಟ್ಟರೆ ಬಾಕಿ ಎಲ್ಲಾ ಕಡೆ ನಿವೃತ್ತಿ ವಯಸ್ಸು 58 ಇದೆ. ಅದನ್ನು ನಾನು ಒಪ್ಪುತ್ತೇನೆ. ಆಂಧ್ರದಲ್ಲೂ ಕೂಡ ನಿವೃತ್ತಿ ವಯಸ್ಸು 58 ಇದೆ, ಅದನ್ನು ನಾನು ಒಪ್ಪುತ್ತೇನೆ, ಆಂಧ್ರದಲ್ಲೂ ಕೂಡ ನಿವೃತ್ತಿ ವಯಸ್ಸು 58 ಇದ್ದುದನ್ನು ಅಲ್ಲಿ ತೆಲುಗು ದೇಶಂ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದು ಯಾವ ಕಾರಣ ನನಗೆ ಗೊತ್ತಿಲ್ಲ, ಪುನಃ ನಿವೃತ್ತಿ ವಯಸ್ಸು 55ಕ್ಕೆ ಇಳಿಸಿದ್ದಾರೆ. ಒಂದು ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗ ಏರಿಸುವುದು. ಮತ್ತೊಂದು ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗ ಇಳಿಸುವುದು. ಆದರೆ ಈ ರೀತಿ ಮಾಡುವುದರಿಂದ ಸಾಧಾರಣವಾಗಿ ಹಣಕಾಸಿನ ಪರಿಸ್ಥಿತಿಯಲ್ಲಿ ಎಷ್ಟು ಡಿಸ್‌ಲೊಕೇಷನ್ ಆಗುತ್ತದೆಂಬುದನ್ನು ಯೋಚನೆ ಮಾಡಬೇಕು. ಇದು ಒಂದು ನೀತಿಯ ಪ್ರಶ್ನೆ. ಇದರ ಬಗ್ಗೆ ಒಂದು ಸಾರಿ ತೀರ್ಮಾನವನ್ನು ತೆಗೆದುಕೊಂಡರೆ ಆಮೇಲೆ ಯಾವುದೇ ಪಕ್ಷದ ಸರ್ಕಾರ ಬರಲಿ ಅದನ್ನು ಬದಲಾವಣೆ ಮಾಡಕೂಡದು. ಆ ಉದ್ದೇಶದಿಂದ ಹೇಳಿದ್ದೇನೆಯೇ ಹೊರತು ಬೇರೆ ಯಾವ ಉದ್ದೇಶದಿಂದಲ್ಲ. ಆದ್ದರಿಂದ ಸರ್ಕಾರಿ ನೌಕರರ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ಅವರು ಯಾವುದೇ ರೀತಿಯ ಚಳುವಳಿಯನ್ನು ಈ ವಿಚಾರದಲ್ಲಿ ಮಾಡಕೂಡದು.

ಶ್ರೀ ಎಂ. ಎಸ್. ಕೃಷ್ಣನ್.--ನಿವೃತ್ತಿ ವಯಸ್ಸನ್ನು 58 ಕ್ಕೆ ಏರಿಸುವ ವಿಚಾರದಲ್ಲಿ ಸದನಕ್ಕೆ ಬಿಟ್ಟು ಬಿಟ್ಟಿದ್ದೀರಿ. ಆದರೆ ನನಗೆ ತಿಳಿದ ಮಟ್ಟಿಗೆ ಸದನದಲ್ಲಿ ಯಾರೂ ಈ ಬಗ್ಗೆ ಮಾತನಾಡಿಲ್ಲ. ಆ ರೀತಿ ಆಗಬೇಕೆಂದೂ ಯಾರೂ ಹೇಳಲಿಲ್ಲ

ಶ್ರೀ ರಾಮಕೃಷ್ಣ ಹೆಗಡೆ.-- ಮೌನಂ ಸಮ್ಮತಿ ಲಕ್ಷಣಂ ಅಂದಹಾಗೆ

ಶ್ರೀ ಎಂ. ಎಸ್ ಕೃಷ್ಣನ್.--- ನಾನು ಇದರ ಬಗ್ಗೆ ತಮಗೆ ಸಲಹೆ ಮಾಡುವುದೇನೆಂದರೆ' ಈ ಬಗ್ಗೆ ವಿರೋಧ ಪಕ್ಷದ ನಾಯಕರು ಹಾಗು ಇತರೇ ಪಕ್ಷಗಳ ನಾಯಕರುಗಳನ್ನು ಕರೆಸಿ ಕೂಲಂಕುಷವಾಗಿ ಚರ್ಚೆ ಮಾಡಿ' ಆಮೇಲೆ ತೀರ್ಮಾನ ತೆಗೆದುಕೊಳ್ಳಿ,

ಶ್ರೀ ರಾಮಕೃಷ್ಣ ಹೆಗಡೆ.-- ಆಗಬಹುದು. ವಿರೋಧ ಪಕ್ಷದ ನಾಯಕರನ್ನು ಹಾಗೂ ಎಲ್ಲ ಪಕ್ಷಗಳ ನಾಯಕರನ್ನು ಕರೆಸಿ ಮಾತನಾಡುತ್ತೇನೆ.

ಡಾ: ವಿ. ಎಸ್. ಆಚಾರ್ಯ.-- ಉಪಾಧ್ಯಾಯರಿಗೆ 1976ನೇ ಇಸವಿಯವರೆಗೆ ಅವರ ನಿವೃತ್ತಿ ವಯಸ್ಸು 58 ಇತ್ತು. ಅದನ್ನಾದರೂ ಮುಂದುವರೆಸಿ.

ಶ್ರೀ ರಾಮಕೃಷ್ಣ ಹೆಗಡೆ.--ಅಧ್ಯಾಪಕರಿಗೆ ಇದುದ್ದನ್ನು ಹಿಂದಿನ ಸರ್ಕಾರ ಇಳಿಸಿದಾರ್ರೆ. ಈಗ ನಾವು ಅವರಿಗೆ ನಿವೃತ್ತಿ ವಯಸ್ಸನ್ನು ಏರಿಸಿದರೆ, ಮುಂದೆ ಯಾವುದೋ ಸರ್ಕಾರ ಬಂದು ಅದನ್ನು ಪುನಃ ಇಳಿಸಿದರೆ ಏನು ಮಾಡಬೇಕು ? ಅದ್ದರಿಂದ ಎಲ್ಲಾ ಪಕ್ಷಗಳ ನಾಯಕರನ್ನು ನಾನು ಕರೆಸಿ ಮಾತನಾಡುತ್ತೇನೆ. ಒಂದು ವೇಳೆ ಅಲ್ಲಿ ಒಮ್ಮತದ ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಾದರೆ ಆ ನಿರ್ಣಯವನ್ನು ಸರ್ಕಾರ ಒಪ್ಪುತ್ತದೆ ಎಂದು ಈಗಲೇ ಅದನ್ನು ಹೇಳಿಬಿಡುತ್ತೇನೆ. ಆ ರೀತಿಯ ಒಮ್ಮತದ ನಿರ್ಣಯ ಅದ ಮೇಲೂ ಕೂಡ ಈ ಮನೆಯ ನಿರ್ಣಯ ಆಗಬೇಕು. ಮುಂದೆ ಯಾವುದೇ ಪಕ್ಷದ ಸರ್ಕಾರ ಬರಲಿ ಅದಕ್ಕೆ ಬದ್ಧವಾಗಿರ ಬೇಕು

ಶ್ರೀ ಎಂ. ವೀರಪ್ಪ ಮೊಯ್ಲಿ.--ಅವರ ಬೇಡಿಕೆಗಳ ಬಗ್ಗೆ ತಾವು ಈಗ ಹೇಳಿದ್ದೀರಿ. ಇದು ಸಾಧ್ಯಸಾಧ್ಯತೆಯ ಪ್ರಶ್ನೆಯಲ್ಲಿ ಈಗ ನೀವು ಅವರನ್ನು ಕರೆಸಿ ಅವರಿಗೆ ಸಮಯ ಕೊಟ್ಟು, ಈ ಬೇಡಿಕೆಗಳ ವಿಚಾರದಲ್ಲಿ ಅವರೊಡನೆ ಚರ್ಚೆ ಮಾಡಿ, ಯಾವುದನ್ನು ಮಾಡಬಹುದು, ಯಾವುದನ್ನು ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ಹೇಳಿದರೆ ಇದು ಸರಿಹೋಗಬಹುದು.

ಶ್ರೀ ರಾಮಕೃಷ್ಣ ಹೆಗಡೆ'—ಎರಡು ಸಲ ನಾನು ಭೇಟಿಯಾಗಿದ್ದೇನೆ. ಎರಡು ಸಲ ಮಾನ್ಯ ರಘುಪತಿಯವರು ಭೇಟಿಯಾಗಿದ್ದಾರೆ. ಅವಾಗ ಕಾರ್ಮಿಕ ಇಲಾಖೆ ಕೂಡ ಅವರೇ ನೋಡಿಕೊಳ್ಳುತ್ತಿದ್ದರು. ಆ ಸಂಧರ್ಭದಲ್ಲಿ ಎರಡು ಸಲ ಅವರು ಭೇಟಿಯಾಗಿದ್ದಾರೆ ಅವರನ್ನು ಭೇಟಿಯಾಗುವುದಕ್ಕೆ ಯಾವಾಗಲೂ ತಯಾರಾಗಿದ್ದೇನೆ ಅವರು ಮುಖ್ಯ ಕಾರ್ಯದರ್ಶಿಯವರನ್ನೂ ಕೂಡ ಭೇಟಿಯಾಗಿದ್ದಾರೆ.

ಶ್ರೀ ಸೂರ್ಯನಾರಾಯಣ ರಾವ್.--ಇನ್ನೊಂದು ಸಾರಿ ಅವರನ್ನು ಭೇಟಿಯಾಗಬಹುದಲ್ಲ ;

ಶ್ರೀ ರಾಮಕೃಷ್ಣ ಹೆಗಡೆ.--ಮಾಡಬಹುದು ಇಲ್ಲ ಅಂತ ನಾನು ಹೇಳಿದ್ದೇನೆಯೇ ? ಅವರು ರೆಫ್ಯೂಸ್ ಮಾಡಿ ಹೋರಾಟ ಮಾಡುತ್ತೇವೆಂದು ಹೇಳಿ ಬೆಳಗಿನವರೆಗೂ ಅಲ್ಲಿ ಕುಳಿತ್ತಿದ್ದರು.

ಶ್ರೀ ಎಂ. ವೀರಪ್ಪ ಮೋಯ್ಲಿ.—ಇದರಲ್ಲಿ ಕಮ್ಯುನಿಕೇಷನ್ ಗ್ಯಾಪ್ ಇರಬಹುದು ಅಂತ ಕಾಣುತ್ತದೆ. ನಿಮಗೆ ಅಸೌಖ್ಯ ಇದೆ ಎಂದು ಹೇಳಿದ್ದಿದ್ದರೆ ಅವರು ಅಷ್ಟು ಒತ್ತಾಯ ಮಾಡುತ್ತಿರಲಿಲ್ಲ. ಬರುವುದಕ್ಕೆ ಹೇಳಿದಿರಿ. ಬರುತ್ತೇವೆಂದು ಹೇಳಿದಾಗ ಬನ್ನಿ ಅಂತ ಕೂಡ ಹೇಳಿದಿರಿ, ಆದರೆ ಅಸೌಖ್ಯ ಇದೆ ಅಂತ ಹೇಳಲಿಲ್ಲ. ಮನೆಯಲ್ಲಿಲ್ಲ ಅಂತ ಹೇಳಿದರು. ಅದಕ್ಕಾಗಿ ಅವರು ಅಲ್ಲಿಯೇ ಕುಳಿತರೇ ವಿನ

ನಿಮಗೆ ಆ ದಿನ ಅಸೌಖ್ಯ ಇದೆ ಎಂದು ತಿಳಿಸಿದ್ದರೆ ಅವರು ಆ ರೀತಿ ಮಾಡುತ್ತಿರಲಿಲ್ಲ ಎಂದು ನನಗೆ ಬಂದಿರುವಂತಹ ವರ್ತಮಾನದ ಪ್ರಕಾರ ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸರಿಬಿಡಿ. ಆಮೇಲೆ ವಿದ್ಯುಚ್ಛಕ್ತಿ ವಿಚಾರದಲ್ಲಿ......

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ಕುಳಿತು ಕೊಳ್ಳುವದಾದರೆ, ಒಂದು ವಿಚಾರವನ್ನು ನಾನು ಹೇಳುವವನಿದ್ದೇನೆ. ಅದೇನೆಂದರೆ ಈ ಒಂದು ದೊಡ್ಡ ಸಮಸ್ಯೆಯನ್ನು ಈ ಸದನಕ್ಕೆ ಬಿಡುತ್ತಿದ್ದಾರೆ. ಅದೇ ಸಮಯದಲ್ಲಿ ನೀವು ಕೊಟ್ಟರತಕ್ಕ ಎಕನಾಮಿಕ್ ರಿವ್ಯೂ ಅನ್ನೂ ಕೂಡ ನಾವು ನೋಡುತ್ತಿರಾದ ಅದರಲ್ಲಿ ನಿರುದ್ಯೋಗಿ ಗ್ರಾಜುಯೇಟ್ಸ್ ಮತ್ತು ಪೋಸ್ಟ್ ಗ್ರಾಜುಯೇಟ್ಸ್ ಎಷ್ಟು ಜನ ಇದ್ದಾರೆ ಎಂಬುದರ ಬಗ್ಗೆ ಕೂಡ ಅಂಕಿ ಸಂಖ್ಯೆಗಳನ್ನು ಅದರಲ್ಲಿ ಕೊಟ್ಟಿದ್ದೀರಿ. ಇದರ ಜೊತೆನ ಪ್ರತಿ ವರ್ಷ 12 ಸಾವಿರ ಪದವೀಧರರು ಹೊರಗೆ ಬರುತ್ತಾರೆಂಬುದನ್ನೂ ಕೂಡ ಇದರಲ್ಲಿ ತಿಳಿಸಿದ್ದೀರಿ. ನಮ್ಮಲ್ಲಿ 5 ವಿಶ್ವವಿದ್ಯಾನಿಲಯಗಳು ಇವೆ. ಇದನ್ನೂ ಕೂಡ ಲೆಕ್ಕ ಹಾಕಿಕೊಂಡು, ಸಮಗ್ರ ವಿಚಾರಗಳನ್ನು ಇಟ್ಟುಕೊಂಡು ಈ ಸದನದಲ್ಲಿ ಪ್ರಸ್ತಾಪ ಮಾಡತಕ್ಕಂತಹದ್ದು ಉತ್ತಮ. ಈ ಹಿನ್ನಲೆಯನ್ನು ಏತಕ್ಕಾಗಿ ನಾನು ಹೇಳುತ್ತಿದ್ದೇನೆಂದರೆ, ಒಂದು ಮಾತನ್ನು ತಾವು ಹೇಳಿದ್ದೀರಿ. ವಿರೋಧ ಪಕ್ಷದ ನಾಯಕರು ಹಾಗೂ ಇತರೇ ಪಕ್ಷಗಳ ನಾಯಕರುಗಳನ್ನು ಕರೆಸಿ ಅವರೊಡನೆ ಮಾತನಾಡಿ, ಒಂದು ಒಮ್ಮತದ ನಿರ್ಣಯವನ್ನು ತೆಗೆದುಕೊಂಡರೆ ಅದನ್ನು ಜಾರಿಗೆ ಕೊಡುತ್ತೇವೆಂದು ಹೇಳಿ ತಾವು ಸೌಜನ್ಯವನ್ನು ತೋರಿಸಿದ್ದೀರಿ. ನಂತರ ಆ ನಿರ್ಣಯಕ್ಕೆ ಈ ಮನೆಯ ಒಪ್ಪಿಗೆ ಕೂಡ ಬೇಕು ಅಂತ ಹೇಳಿದ್ದೀರಿ. ಆದರೆ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ಈ ರಾಜ್ಯದ ಮುಂದಿನ ಪೀಳಿಗೆ ತೊಂದರೆಗೆ ಈಡಾಗುವ ಪರಿಸ್ಥಿತಿ ಒದಗಿ ಬಂದರೂ ಬರಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಸ್ಪಷ್ಟವಾಗಿ ಮಾತನಾಡೋಣ. ಇಂತಹವರು ಅಂತ ಬೆರಳು ತೋರಿಸುವುದು ಬೇಡ. ಮಾನ್ಯ ರಂಗನಾಥ್‌ರವರು ಇದನ್ನು ಹೇಳಿದ್ದಾರೆ ಬೇಷ್ ಅಂತ ಬುಜ ತಟ್ಟಿಕೊಳ್ಳುವುದು ಬೇಡ, ಒಳ್ಳೆಯದಕ್ಕೂ ಎಲ್ಲರೂ ಭಾಗಿಯಾಗೋಣ. ಅದೇ ರೀತಿ ಕೆಟ್ಟದಕ್ಕೂ ಎಲ್ಲರೂ ಭಾಗಿಯಾಗೋಣ. ಆದ್ದರಿಂದ ಅದನ್ನು ಸ್ಪಷ್ಟಪಡಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಒಮ್ಮತದ, ನಿರ್ಣಯಕ್ಕೆ ಬಂದರೂ ಸಹ ಆ ನಿರ್ಣಯವನ್ನು ಈ ಮನೆ ಪುಷ್ಟೀಕರಿಸಬೇಕು ಎಂದು ಅದಕ್ಕಾಗಿಯೇ ನಾನು ಹೇಳಿದ್ದು.

ಶ್ರೀ ಎಂ. ಎಸ್. ಕೃಷ್ಣನ್.—ಕೂಲಂಕುಷವಾಗಿ ಯೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ನಂತರ ಆ ನಿರ್ಣಯದ ಮೇಲೆ ಈ ಮನೆಯಲ್ಲೂ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಂತಾಗುತ್ತದೆ. ಆದ್ದರಿಂದ ಇದನ್ನು ನಂತರ ತೀರ್ಮಾನ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ವಿದ್ಯುಚ್ಛಕ್ತಿಯ ಕೊರತೆಯಿಂದ ಉಂಟಾದ ತೊಂದರೆಯ ಬಗ್ಗೆ ಮತ್ತು ಆ ಒಂದು ಕೊರತೆಯಿಂದ ಉಂಟಾದ ನಷ್ಟದ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ದುರಾದೃಷ್ಟವಶಾತ್ ಶರಾವತಿಯಲ್ಲಿ ಒಂದು ಜನರೇಟರ್ ಕಳೆದ ಒಂದು ವರ್ಷದಿಂದಲೂ ಕೆಟ್ಟು ನಿಂತು ಹೋಯಿತು. ಅದು ತಾಂತ್ರಿಕ ತೊಂದರೆಯಿಂದ ಆದಂತಹದ್ದು. ಅವನ್ನು ದುರಸ್ತಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದನ್ನು ಉತ್ಪಾದನೆ ಮಾಡಿರತಕ್ಕಂತಹದ್ದು ಬಿ. ಎಚ್. ಇ. ಎಲ್. ಈ ಬಿ. ಎಚ್. ಇ. ಎಲ್. ನವರು ಉತ್ಪಾದನೆ ಮಾಡಿರತಕ್ಕ ಅನೇಕ ಜನರೇಟರ್‌ಗಳ ಸ್ಥಿತಿ ಇದೇ ರೀತಿ ಇದೆ. ದುರ್ದೈವದಿಂದ ಮತ್ತೊಂದು ಜನರೇಟರ್ ಕೆಟ್ಟು ಹೋಯಿತು. ಅದು ಕೆಲಸಗಾರರ ಅಲಕ್ಷ್ಯದಿಂದ ಕೆಟ್ಟು ಹೋಯಿತು ಅಂತ ಹೇಳುತ್ತಾರೆ. ಆ ರೀತಿಯ ಮಾಹಿತಿ ನಮಗೆ ಬಂದಿದೆ. ಅದರ ಬಗ್ಗೆ ವಿವರವಾದ ಮಾಹಿತಿಯನ್ನು ತರಿಸುತ್ತಿದ್ದೇನೆ. ಒಂದಲ್ಲ ಒಂದು ದಿವಸ ಆ ಮಾಹಿತಿಯನ್ನು ಈ ಮಾನ್ಯ ಸಭೆಗೆ ನಾವು ಕೊಡಬಹುದು. ಈಗ ಏನಾಗಿದೆ ಎಂದರೆ

ಶ್ರೀ ಎಂ. ಎಸ್. ಕೃಷ್ಣನ್.—ಅಲಕ್ಷ್ಯ ಅಂದರೆ ಕೆಲಸಗಾರರಿಂದಲೋ ಅಥವಾ ಮ್ಯಾನೇಜ್‌ಮೆಂಟ್‌ನವರಿಂದಲೋ ಎಂಬುದನ್ನು ತಾವು ಹೇಳಬೇಕು. ಈ ಯೂನಿಯನ್‌ನವರು ಒಂದು ಮೆಮೋರಾಂಡಂ ಅನ್ನು ತಮಗೆ ಅರ್ಪಿಸಿದ್ದಾರೆ. ಅದರ ಕಾಪಿಯನ್ನೂ ನನಗೂ ಕೊಟ್ಟಿದ್ದಾರೆ. ಅದರ ಪ್ರಕಾರ ಮ್ಯಾನೇಜ್‌ಮೆಂಟ್‌ನವರ ಅವ್ಯವಹಾರ ಹಾಗೂ ದುರ್ವ್ಯವಹಾರ ಹಾಗೂ ಅಲಕ್ಷ್ಯತೆಯಿಂದ ಆಗಿರತಕ್ಕಂತಹದ್ದು ಅಂತ ಇದೆ.

3-30 P.M.

ಶ್ರೀ ರಾಮಕೃಷ್ಣ ಹೆಗಡೆ.—ಆದರಿಂದಲೇ ನಾನು ಹೇಳುತ್ತಿರುವುದು, ನನಗೆ ಈ ಬಗ್ಗೆ ಪೂರ್ಣ ವಿವರವಾದ ವರದಿ ಬಂದ ಮೇಲೆ ಈ ಮನೆಗೆ ಆ ವಿಷಯವನ್ನು ತಿಳಿಸಲು ಸಾಧ್ಯವಾಗುತ್ತದೆ ಎಂದು ಕಳೆದ ಅನೇಕ ವರ್ಷಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಹೆಚ್ಚಳ ಆಗಿಲ್ಲ ಮೊಯಿಲಿಯವರಿಗೆ ಗೊತ್ತಿದ್ದಂತೆ ಕಾವೇರಿ ಎರಡನೇ ಯೋಜನೆಗೆ 1980ರಲ್ಲಿ ಮಂಜೂರಾತಿ ತೆಗೆದುಕೊಳ್ಳಬೇಕೆಂದಿದ್ದ ಪ್ರಯತ್ನ ಕಳೆದ ವರ್ಷದವರೆಗೆ ಆಗಿರಲಿಲ್ಲ ನಾವು ಕಳೆದ ವರ್ಷದ ಮಧ್ಯದಲ್ಲಿ ಮಂಜೂರಾತಿ ತೆಗೆದುಕೊಂಡಿದ್ದೇವೆ. ಇದಕ್ಕೆ ಮುಂದಿನ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಈ ಒಂದು ಒಂದೂವರೆ ವರ್ಷದಲ್ಲಿ ಅಂದರೆ 1982ನೇ ಅಕ್ಟೋಬರ್‌ನಿಂದ 1983ನೇ ಅಕ್ಟೋಬರ್‌ವರೆಗೆ (ಮುಂದಿನ 3-4 ತಿಂಗಳುಗಳನ್ನು ಸೇರಿಸಿದರೆ ಸ್ವಲ್ಪ ಹೆಚ್ಚಾಗಬಹುದು) ವಿದ್ಯುತ್‌ಶಕ್ತಿ ಬೇಡಿಕೆ 389 ಮೆಗಾವ್ಯಾಟ್ಸ್ ಹೆಚ್ಚಿದೆ ನಮಗೆ ಎರಡು ರಾಜ್ಯಗಳಿಂದ ವಿದ್ಯುಚ್ಛಕ್ತಿ ಪೂರೈಕೆಯಾಗದಿದ್ದರೆ ಎಷ್ಟರಮಟ್ಟಿಗೆ ನಾವು ಕಡಿತ ಮಾಡುವ ಪ್ರಸಂಗ ಬರುತ್ತಿತ್ತು ಎಂಬುದನ್ನು ಮಾನ್ಯ ಸದಸ್ಯರು ಲೆಕ್ಕ ಹಾಕಬಹುದು ನಮಗೆ ಪ್ರತಿ ದಿನಸ ಹೆಚ್ಚು ಕಡಿಮೆ 30--35 ಮಿಲಿಯನ್ ಯೂನಿಟ್ ವಿದ್ಯುತ್ ಬೇಕು. ಈಗ ನಮ್ಮಲ್ಲಿ ಉತ್ಪಾದನೆ ಆಗತಕ್ಕದ್ದು ಕೇವಲ 21--22 ಮಿಲಿಯನ್ ಯೂನಿಟ್‌ಗಳು. ಮಹಾರಾಷ್ಟ್ರದಿಂದ 2 ಮಿಲಿಯನ್ ಯೂನಿಟ್ ಬಂದರೆ ಆಂಧ್ರದಿಂದಲೂ ಅಷ್ಟೇ ಬರುತ್ತಿದೆ. ಆದರೆ ಈಗ ಎರಡು ತಿಂಗಳಹಿಂದೆ ಅವರು ನಿಲ್ಲಿಸಿದರು. ಏಕೆಂದರೆ ನಾಗಾರ್ಜುನ ಯೋಜನೆಯಲ್ಲಿ ಎರಡು ಜನರೇಟರ್‌ಗಳು ಕೆಟ್ಟು ಹೋಗಿದೆ ಎಂದು ಈಗ ಎರಡು ದಿನಗಳಿಂದ ರಾಮಗುಂಡಂ ಥರ್ಮಲ್ ಸ್ಟೇಷನ್‌ನಿಂದ ಸ್ವಲ್ಪ ವಿದ್ಯುತ್‌ಶಕ್ತಿಯನ್ನು ಕೊಡುತ್ತಿದ್ದಾರೆ ಮಾರ್ಚ್ ಕೊನೆಯೊಳಗೆ ಅಥವಾ ಏಪ್ರಿಲ್ ಮಧ್ಯದೊಳಗೆ ಪರಿಸ್ಥಿತಿ ಸ್ವಲ್ಪ ಉತ್ತಮಗೊಳ್ಳತಕ್ಕ ಸೂಚನೆಗಳಿವೆ. ಸಾರ್ವಜನಿಕರಿಗೆ, ರೈತರಿಗೆ ಮತ್ತು ಕೈಗಾರಿಕೋದ್ಯಮಿಗಳಿಗೆ ಆಗಿರತಕ್ಕ ತೊಂದರೆಗೆ ನಾನು ವಿಷಾದಪಡುತ್ತೇನೆ.ಮತ್ತು ಕೈಗಾರಿಕೋದ್ಯಮಿಗಳಿಗೆ ಆಗತಕ್ಕ ತೊಂದರೆಗೆ ನಾನು ವಿಷಾದಪಡುತ್ತೇನೆ. ಮತ್ತು ಅವರು ತಮಗೆ ಆಗಿರತಕ್ಕ ತೊಂದರೆಯನ್ನು ಸಹಿಸಿಕೊಂಡಿರುವುದಕ್ಕೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ ಮೊಯಿಲಿಯವರು ಮತ್ತು ಇನ್ನಿತರರು ಮೀನುಗಾರಿಕೆ ವಿಷಯವಾಗಿ ಬಜೆಟ್ಟಿನಲ್ಲಿ ಪ್ರಸ್ತಾಪ ಮಾಡಲಿಲ್ಲವೆಂದು ಹೇಳಿದ್ದಾರೆ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಬಹಿರಂಗಪಡಿಸಬಯಸುವುದೇನೆಂದರೆ ನಾನು ಎರಡು ಸಾರಿ ಮೀನುಗಾರರ ಪ್ರತಿನಿಧಿಗಳೊಡನೆ ಅವರ ಸಮಸ್ಯೆಗಳನ್ನು ಕುರಿತು ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದೇನೆ. ಬೆಂಗಳೂರಿನಲ್ಲಿ ಮಾಡಿದ್ದೇನೆ. ಮಂಗಳೂರಿನಲ್ಲಿ ಮಾಡಿದ್ದೇನೆ ಮತ್ತು ಈಗ್ಗೆ ಒಂದೆರಡು ತಿಂಗಳುಗಳ ಹಿಂದೆ ಕಾರವಾರದಲ್ಲಿ ಕೂಡ ಮಾಡಿದ್ದೇನೆ. ರೈತರಿಗೆ ನಾವು ಯಾವ ರೀತಿ, ಹಳೇ ಬಾಕಿ ತೀರಿಸಲಕ್ಕೆ, ಸುಸ್ತಿ ಬಡ್ಡಿ ವಜಾ ಮಾಡುವ ವಿಚಾರದಲ್ಲಿ ಮತ್ತು ಯಾರು ಕರೆಂಟ್‌ಡ್ಯೂಸ್ ಅನ್ನು ಸರಿಯಾಗಿ ತೀರಿಸುತ್ತಾರೆ—ಈ ಮೂರು ವಿಚಾರಗಳಲ್ಲಿ.ಏನು ರಿಯಾಯಿತಿ ಕೊಟ್ಟಿದ್ದೇವೆ ಯಾವ ಸವಲತ್ತುಗಳನ್ನು ಕೊಟ್ಟಿದ್ದೇವೆ ಅದೇ ಸಂಪತ್ತುಗಳನ್ನು ಮೀನುಗಾರರಿಗೂ ಕೂಡ ಕೊಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಅವರ ಮತ್ತೊಂದು ಪ್ರಮುಖವಾದ ಬೇಡಿಕೆ ಏನೆಂದರೆ, ಅವರೇನು ಡೀಸಲ್ ಖರೀದಿ ಮಾಡುತ್ತಾರೆ ಅದರ ಮೇಲೆ ಶೇಕಡ 15 ರಷ್ಟು ಮಾರಾಟ ತೆರಿಗೆ ಏನಿದೆ ಅದನ್ನು ವಜಾ ಮಾಡಬೇಕೆಂದು ಹೇಳಿದ್ದಾರೆ. ಮೀನುಗಾರಿಕೆಗೆ ಬೋಟುಗಳಿಗಾಗಿ ಮತ್ತು ಲಾಂಚುಗಳಿಗಾಗಿ ಡೀಸಲ್ ಅನ್ನು ಏನು ಉಪಯೋಗಿಸುತಾರೆ ಅದರ ಮೇಲಿನ ಮಾರಾಟ ತೆರಿಗೆಯನ್ನು ವಜಾ ಮಾಡಬೇಕೆಂಬುದು ಅವರ ಬೇಡಿಕೆ. ಕೇವಲ ಮಹಾರಾಷ್ಟ್ರದಲ್ಲಿ ಮಾತ್ರ ಈ ಒಂದು ಪದ್ಧತಿ ಇದೆ ; ಕೇರಳದಲ್ಲಿ ಇಲ್ಲ, ತಮಿಳುನಾಡಿನಲ್ಲಿ ಇಲ್ಲ ಮೀನುಗಾರರು ಸಾಮಾನ್ಯವಾಗಿ ಬಡವರು ಮತ್ತು ಬಹಳ ಸಾಹಸಮಯ ಜೀವನ ನಡೆಸತಕ್ಕವರು. ಅದಕ್ಕಾಗಿ ಅವರು ಬಳಸತಕ್ಕ ಡೀಸಲ್ಲಿನ ಮೇಲೆ ಯಾವ ಮಾರಾಟ ತೆರಿಗೆಯನ್ನು ಕೊಡುತ್ತಾರೋ ಅಷ್ಟೇ ಹಣವನ್ನು ಅವರಿಗೆ ಏಪ್ರಿಲ್ ಒಂದರ ನಂತರ ವಾಪಸ್ಸು ಕೊಡುತ್ತೇವೆ, ಆದರೆ ಸಬ್ಸಿಡೈಸ್ ಮಾಡುತ್ತೇವೆ. ಅದನ್ನು ಏಕ್ಸೆಂಪ್ಟ್ ಮಾಡತಕ್ಕ ಅಧಿಕಾರ ನಮ್ಮ ಆ್ಯಕ್ಟಿನಲ್ಲಿ ಇಲ್ಲ. ಆದರೆ ಅವರು ಇದೇ ಉದ್ದೇಶಗಳಿಗಾಗಿ ಬಳಸಿದ್ದೇವೆಂಬುದನ್ನು ತೋರಿಸಬೇಕಾಗುತ್ತದೆ. ಮೀನುಗಾರರ ಹತ್ತಿರ ಡೀಸಲ್ ಪಂಪುಗಳು ಇವೆ ಅವರು ಉಪಯೋಗಿಸ ದಂತಹ ಡೀಸಲ್ ಮೇಲೆ ನಾವು ಹಾಕಿದಂತಹ ಸೇಲ್ಸ್ ಟ್ಯಾಕ್ಸಿಗೆ ಸರಿಸಮಾನವಾದಷ್ಟು ಹಣವನ್ನು ನಾವು ವಾಪಸ್ಸು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು.—ಡಾ: ಆಚಾರ್ಯ ಅವರು ಸಂತೋಷಪಡಬೇಕು.

ಶ್ರೀ ಧನಂಜಯಕುಮಾರ್.—ಡಾ: ಆಚಾರ್ಯರು ಮೀನು ತಿನ್ನದಿದ್ದರೂ ಸಂತೋಷಪಟ್ಟಿದ್ದಾರೆ.

ಡಾ: ವಿ ಎಸ್ ಆಚಾರ್ಯ —ಧನಂಜಯ ಕುಮಾರ್‌ರವರು ಮೀನುಗಾರರ ಬಗ್ಗೆ ಮಾತನಾಡಲಿಲ್ಲ. ನಾನು ಮೀನು ತಿನ್ನದಿದ್ದರೂ ಅವರ ಬಗ್ಗೆ ಮಾತನಾಡಿದ್ದೇನೆ. ಸರ್ಕಾರದವರು ಕೊಟ್ಟ ಕೊಡುಗೆಯಿಂದ ನನಗೆ ಸಂತೋಷವಾಗಿದೆ

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ರೈತರ ವಿಚಾರದಲ್ಲಿ ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಮೊನ್ನೆ ರೈತರ ಚಳುವಳಿ ಆಯಿತು. ಅದರಲ್ಲಿ ಯಾವುದೇ ಒಂದು ಪ್ರಾಣ ಹಾನಿ ಕೂಡ ಆಗಲಿಲ್ಲ. ಉದ್ರಿಕ್ತ ಸಂದರ್ಭಗಳು ಹುಟ್ಟಿದರೂ ಕೂಡ ಪೋಲೀಸರು ಬಲವನ್ನು ಉಪಯೋಗಿಸಲಿಲ್ಲ ಮತ್ತು ರೈತರನ್ನು ಹೇಗೆ ಹೇಗೆ ಜುಡಿಷಿಯಲ್ ಕಸ್ಟಡಿಯಲ್ಲಿ ರಿಮ್ಯಾಂಡ್ ಮಾಡಿದ ಅವದಿ ಮುಗಿಯಿತೋ ಅದೇ ದಿವಸ ಅವರನ್ನು ಬಿಡುಗಡೆ ಮಾಡಿ ಅವರವರ ಜಿಲ್ಲೆಗೆ ನಮ್ಮ ಕಸ್ಟಡಿಯಿಂದ ಮುಟ್ಟಿಸತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಅವರು ಹುಬ್ಬಳ್ಳಿ ಧಾರವಾಡದಲ್ಲಿ ಇರಲಿ, ಮಂಡ್ಯದಲ್ಲಿರಲಿ, ಮೈಸೂರಿನಲ್ಲಿರಲಿ, ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರಲಿ ಅಲ್ಲಿಗೆ ಅವರನ್ನು ಮುಟ್ಟಿಸಿದ್ದೇವೆ.

ಡಾ: ವಿ. ಎಸ್. ಆಚಾರ್ಯ.—ಕಾನೂನು ಪ್ರಕಾರ ಮಾಡಬೇಕಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ; ಕಾನೂನು ಪ್ರಕಾರ ಇಲ್ಲ. ಈ ರೀತಿ ಮಾಡಬೇಕೆಂದು ಯಾವ ಕಾನೂನು ಇಲ್ಲ. ಮೊನ್ನೆ ಆಯವ್ಯಯ ಭಾಷಣದಲ್ಲಿ ನಾನು ಸಣ್ಣ ಮತ್ತು ಮಾರ್ಜಿನಲ್ ರೈತರಿಗೆ ಹೋದ ವರ್ಷ ನಾವು ಯಾವ ರಿಯಾಯಿತಿಯನ್ನು ಕೊಟ್ಟಿದ್ದೇವೋ ಅದನ್ನೇ ಮಾರ್ಚ್ ಕೊನೆಯವರೆಗೆ ವಿಸ್ತಾರ ಮಾಡುತ್ತೇವೆಂದು ಹೇಳಿದ್ದೇನೆ. ನೀವು 10 ಎಕರೆಯವರೆಗೂ ಈ ರಿಯಾಯಿತಿ ಸಿಗುವ ಹಾಗೆ ಮಾಡಬೇಕೆಂದು ಯಡಿಯೂರಪ್ಪನವರು ನನ್ನ ಹತ್ತಿರ ಹೇಳಿದರು. ಮಾರ್ಜಿನಲ್ ಮತ್ತು ಸ್ಮಾಲ್ ಫಾರ್ಮರ್ಸ್ ಡೆಫನಿಷನ್ ಅನ್ನು ಸಬಾರ್ಡ್‌ನವರು ಯಾವ ರೀತಿ ಮಾಡುತ್ತಾರೋ ಅದನ್ನು ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ. 5 ಎಕರೆ ನೀರಾವರಿ ಜಮೀನು ಇರುವವರು ಮತ್ತು 10 ಎಕರೆ ಖುಷ್ಕಿ ಜಮೀನು ಇರುವವರು ಸ್ಮಾಲ್ ಫಾರ್ಮರ್ಸ್ ಎಂದು ಇದೆ. ಆದ್ದರಿಂದ, 10 ಎಕರೆ ಜಮೀನು ಇರುವವರಿಗೂ ಕೂಡಾ ಇದು ಅನ್ವಯಿಸುತ್ತದೆಂದು ನಾನು ಅವರಿಗೆ ಹೇಳಬಯಸುತ್ತೇನೆ. ದುರ್ದೈವವಶಾತ್ ಒಂದು ರೈತ ಸಂಘದ ಪದಾದಿಕಾರಿಗಳ ಧೋರಣೆ ಇನ್ನೂ ಕಾಣುವುದಿಲ್ಲ. ಇಂದು ಬೆಳಿಗ್ಗೆ ಪತ್ರಿಕಾ ಗೋಷ್ಠಿಯಲ್ಲಿ ಪ್ರೊ|| ನಂಜುಂಡಸ್ವಾಮಿಯವರು ಮತ್ತು ಸುಂದರೇಶ್ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರ ಪ್ರಕಾರ, ಮನೆ ಮನೆಯಲ್ಲಿ ನಾವು ಹೋರಾಟ ಶುರು ಮಾಡುತ್ತೇವೆ, ಬೆಳೆಗಳನ್ನು ಅಟ್ಯಾಕ್ ಮಾಡಕೂಡದು ರಿಕವರಿ ಮಾಡಕೂಡದು ಎಂದೆಲ್ಲ ಹೇಳಿ ಕೊನೆಗೆ ವಿಧಾನ ಸಭೆಯಲ್ಲಿ **224** ಕತ್ತೆಗಳಿವೆ, ಅವು ಏನೂ ಮಾಡುವುದಿಲ್ಲವೆಂದು ಹೇಳುವ ಮಾತನ್ನು ಹೇಳಿದ್ದಾರೆ.

ಒಬ್ಬ ಸದಸ್ಯರು.—ನನಗೂ ಸಹ ಒಂದು ಪತ್ರ ಬಂದಿದೆ. ಸರ್ಕಾರಕ್ಕೆ ನೀವು ಬೆಂಬಲ ಕೊಡುತ್ತಿದ್ದೀರಿ, ನಿಮ್ಮ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ, ನಿಮ್ಮ ಮೇಲೆ ಘೇರಾವ ಮಾಡಿ, ನಿಮ್ಮಿಂದ ರಾಜಿನಾಮೆ ಕೊಡಿಸುತ್ತೇವೆಂದು ಬರೆದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರೈತರು ಇಂದು ಭತ್ತ ಬೆಳೆಯುವವರು ಅಥವಾ ಕಬ್ಬು ಬೆಳೆಯುವವರು ಮಾತ್ರವಲ್ಲ. ಯಾರಿಗೆ ನೀರಾವರಿ ಸೌಕರ್ಯ ಸಿಕ್ಕಿದೆಯೋ ಅಂತಹ ರೈತರು ಇವೊತ್ತು ಅನುಭವಿಸತಕ್ಕ ಸುಖವಾಗಲಿ, ಅಥವಾ ಉತ್ಪಾದನೆಯಲ್ಲಿ ಹೆಚ್ಚಾಗಿರುವಾಗಲೀ, ಅದು ಬೇರೆ ರೈತರು ಮಾಡಿದಂಥ ತ್ಯಾಗದಿಂದ ಆಗಿದ್ದು ಎನ್ನುವುದನ್ನು ಮರೆಯಬಾರದು. ಅದು ಭದ್ರಾ ಯೋಜನೆಯಾಗಿರಲೀ, ಕಪಿನಿ ಯೋಜನೆಯಾಗಿರಲೀ, ತುಂಗಭದ್ರವಾಗಲೀ ಘಟಪ್ರಭ, ಮಲಪ್ರಭ ಯೋಜನೆಗಳು ಇರಲಿ, ಅವರು ಅಲ್ಲಿ ಹಾಕಿರತಕ್ಕಂಥ ದುಡ್ಡು ಬೇರೆ ರೈತರು ಕೊಟ್ಟದ್ದು ಎಂಬುದನು ಮಾತ್ರ ಮರೆಯಬಾರದು. ಆದರೆ ದುರ್ದೈವ ಅವರು ಈ ರೀತಿ ಯೋಚನೆ ಮಾಡುತ್ತಿಲ್ಲ ತಮ್ಮ ಕೆಲಸವಾಯಿತು. ನಮಗೆ ನೀರು ಸಿಕ್ಕಿದೆ, ನಾವು ಏಕೆ ಟ್ಯಾಕ್ಸ್ ಕೊಡಬೇಕು ಎಂಬ ಮನೋಭಾವ ತಾಳಿದ್ದಾರೆ. ಅವರು ಟ್ಯಾಕ್ಸ್ ಕೊಡುವುದಿಲ್ಲ ಅಂದರೆ ಬೇರೆ ಕಡೆ ನೀರಾವರಿ ಯೋಜನೆ ಮಾಡುವಾಗ ಅದಕ್ಕೆ ಎಲ್ಲಿಂದ ದುಡ್ಡು ತರಬೇಕು ಎಂಬುದನ್ನು. ನಾನು ಅವರನ್ನು ಕೇಳುತ್ತೇನೆ. ಆದರೆ ಎಷ್ಟು ಬೇಕೋ ಅಷ್ಟು ದುಡ್ಡು ಬರುವುದಿಲ್ಲ, ಅದು ನನಗೆ ಗೊತ್ತುಂಟು. ಆದರೆ ಕನಿಷ್ಟ ಪಕ್ಷ ನಿಮಿತ ಮಾತ್ರ ಎಂದು ಸಂಕೇತಿಕವಾಗಿ ಕೊಡುಗೆ ಅವರಿಂದ ಬೇಕಾಗುತ್ತದೆ. ನವು ಈಗಾಗಲೇ ಸರ್ಕಾರಿ ಆದೇಶವನ್ನು ಹೊರಡಿಸಿದ್ದೇವೆ. ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್, ಮನೆಯಲ್ಲಿ ಊಟದ ಬಳಕೆಯ ಸಾಮಾನುಗಳು ಊಟಕ್ಕೆ ಒಂದು ವರ್ಷಕ್ಕೆ ಬೇಕದಷ್ಟು ಆಹಾರ ಪದಾರ್ಥಗಳು ಮತ್ತು ಇನ್ನಿತರ ಪದಾರ್ಥಗಳು ಎಂತಹ ಪರಿಸ್ಥಿತಿಯಲ್ಲಿ ಕೂಡಾ ಜಪ್ತಿ ಮಾಡಬಾರದು ಎಂಬುದಾಗಿ ಕಡ್ಡಾಯವಾಗಿ ಒಂದು ಕಾನುನು ಹೊರಡಿಸಿದ್ದೇವೆ. ಆದರೆ, ಒಬ್ಬರ ಹತ್ತಿರ ಒಂದು ಮೋಟಾರ್ ಸೈಕಲ್ ಅಥವಾ ಟ್ರಾಕ್ಟರ್ ಇರುತ್ತದೆ ಟ್ರಾಕ್ಟರ್ ತೆಗೆದುಕೊಂಡು ಹತ್ತು ವರ್ಷಗಳಾಗಿದ್ದರೂ ಒಂದು ಕಾಸು ಕೂಡ ವಾಪಸ್ಸು ಕೊಟ್ಟಿರುವುದಿಲ್ಲ. ಅವನ ಹತ್ತಿರ ನೀರಾವರಿ ಜಮೀನು ಇರುತ್ತದೆ. ತಂದೆಯ ಹೆಸರಿನಲ್ಲ ಮಗನ ಹೆಸರಿನಲ್ಲಿ, ತಮ್ಮನ ಹೆಸರಿನಲ್ಲಿ, ಅಥವಾ ಅಣ್ಣನ ಹೆಸರಿನಲ್ಲಿ ಸಾಲ ತೆಗೆದುಕೊಂಡಿರುತ್ತಾರೆ. ಆದರೆ ಸಾಮಾನ್ಯ ರೈತರಿಗೆ ಸಾಲ ಸಿಗುವುದಿಲ್ಲ, ಹರಿಜನ ಗಿರಿಜನರಿಗೆ ಸಿಗುವುದಿಲ್ಲ,

ಕೋ ಆಪರೇಟಿವ್ ಸೊಸೈಟಿಗಳನ್ನು ಪುನಾಲೆನ್ಸೈಸ್ ಮಾಡಿಕೊಂಡಿರುತ್ತಾರೆ. ಇಂಥಹವರು ರಿಕವರಿ ಸಾಲವನ್ನು ವಸೂಲ್ಮಾಡಕೂಡದು ಎಂದು ಹೇಳುತಾರಲ್ಲಾ ಅಂಥಾವರನ್ನು ನಾವು ಒಪ್ಪುವುದಕ್ಕೆ ತಯಾರಿಲ್ಲ ಇದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಅವರು ತಿಳಿದುಕೊಳ್ಳಬೇಕು. ಇವೊತ್ತು ನಮ್ಮ ಸರ್ಕಾರದ ಲಕ್ಷ್ಯಕ್ಕು ಭೂಮಿಯಲ್ಲಿ ಸಾಗುವಳಿ ಮಾಡತಕಂಥ ರೈತರ ಮೇಲೆ ಇವೆ ಅವರ ಅಭಿವೃದ್ಧಿಗಾಗಿ ಏನು ಮಾಡೂಬೇಕೊ ಅದನ್ನು ಮಾಡಬೇಕು. ಬಡತನ ಅಲ್ಲಿ ಇದೆ ಇಲ್ಲಿ ಇಬ್ಬರಿಗೂ ತೊಂದರೆ ಇರಬಹುದು ಇಲ್ಲ, ಅಲ್ಲ ಎಂದು ನಾನು ಹೇಳುತ್ತಿಲ್ಲ. ಅದರೆ, ಇವರ ತೊಂದರೆ ಏನು ಎನ್ನುವುದನ್ನು ಊಹಿಸಿಕೊಳ್ಳಬಹುದು ಅದರೆ ಅವರು ಮಳೆಯನ್ನೇ ಆದರಿಸಿ ರೈತಾಪಿ ಕೆಲಸ ಮಾಡಬೇಕು ಮಳೆ ಬಾರದಿದ್ದರೆ 'ಅವರ ಶ್ರಮ ಹೊಯಿತು' ತೆಗೆದುಕೊಂಡಂಥ ಸಾಲವನ್ನು ವಾಪಸ್ಸು ಕೊಡುವುದಕ್ಕಾಗುವುದಿಲ್ಲ. ಇಂತಹ ಕಷ್ಟ ನೀರಾವರಿ ಪ್ರದೇಶದಲ್ಲಿ ಇರತಕ್ಕ ರೈತರಿಗೆ ಇಲ್ಲ ಆದುದರಿಂದ ಇವರ ನಾಯಕರು ಈ ತರಹ ದೋರಣೆ ವಹಿಸಿ ಕೊಂಡರೆ ಅದು ರೈತರ ಹಿತಕ್ಕಾಗಿ ಅಲ್ಲ ಎಂದು ನಾನು ಹೇಳೀಳುತ್ತೇನೆ. ಸುದೈವದಿಂದ ಯಾವ ರೈತರು ಕೂಡ ಇವೊತ್ತು ಈ ತರಹ ಒಂದು ದಾರಿ ಇರತಕ್ಕ ಕೆಲಸ ಮಾಡುವುದಿಲ್ಲ ಎಂಬ ವಿಶ್ವಾಸ ನನಗಿದೆ ಮತ್ತು ಮೊನ್ನೆ ಆದಂತಹ ರೈತರ ಚಳುವಳಿಯಲ್ಲಿ ಶ್ರೀ ಮಾನ್ ರೇವಣ್ಣನವರು ಇಲ್ಲಿ ಬರಬಹುದು, ಎರಡು ಜನರೈತರು ಬಂದು ಅವರ ಹತ್ತಿರ ಹೇಳಿದರು 15 ರೂಪಾಯಿ ಕೊಡುತ್ತೇನೆ ಸತ್ಯಾಗ್ರಹ ಮಾಡಬೇಕು ಇಲ್ಲದಿದ್ದರೆ 35 ರೂಪಾಯಿಗಳ ದಂಡ ಕೊಡಬೇಕು ಎಂದು ಹೇಳಿದಾರಂತೆ ಆದಕ್ಕೆ ಅವರು ಹೇಳಿದರಂತೆ ದಂಡ ಹಾಕುವ ಅಧಿಕಾರ ನಿಮಗೆ ಇಲ್ಲ. ನಮಗೆ ನೀವು ಕೊಡುವ 15 ರೂಪಾಯಿಗಳೂ ಬೇಡ ನಾನು ಅನೇಕ ಕಡೆ ಓಡಾಡಿ ಬಂದಿದ್ದೇನೆ. ಸಾಮಾನ್ಯವಾಗಿ ರೈತರು ಸರ್ಕಾರ ಇಲ್ಲಿಯವರೆಗೆ ಕೊಟ್ಟಂಥ ಸವಲತ್ತಿನ ಬಗ್ಗೆ ಸಮಾಧಾನ ಇಲ್ಲದಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ ನಮ್ಮ ಸಂಸ್ಕೃತಿ ಏನು ಎಂದರೆ ನನಗೆ ಹರಿಶ್ಚಂದ್ರನ ಕಥೆ ನೆನಪು ಬರುತದೆ. ಹರೀಶ್ಚಂದ್ರನ ಕಥೆ ಮಕ್ಕಳಿಗೆ ಹೇಳುತ್ತೇವೆ, ಸಾಲ ಮಾಡಿದು ನಾಲ್ಕು ವರಹ ಆ ನಾಲ್ಕು ವರಹ ತೀರಿಸಬೇಕಾದರೆ ಸ್ಮಶಾಣದಲ್ಲಿ ಹೋಗಿ ಹಗಲು ರಾತ್ರಿ ಕೆಲಸ ಮಾಡಬೇಕಾಯಿತ್ತು ಆದ್ದರಿಂದ ಸಾಲವನ್ನು ಮಾತ್ರ ಎಂದೂ ಉಳಿಸಕೂಡದು ಎಂಬುದು ನಮ್ಮ ಭಾರತೀಯ ಸಂಸ್ಕೃತಿ ಹಾಗು ನಮ್ಮ ರೈತರ ಸಂಸ್ಕೃತಿ,

ಶ್ರೀ ಎಸ್. ಸೂರ್ಯನಾರಾಯಣರಾವ್.--ರೈತರ ಸಾಲವನ್ನು ರದ್ದು ಮಾಡಿಬಿಡಿ.

ಶ್ರೀ ಬಿ ಎಸ್ ಯಡಿಯೂರಪ್ಪ --ರೈತರು ಸುಮಾರು ಹತ್ತು ಸಾವಿರ ರೂಪಾಯಿಗಳವರೆಗೆ ಏನು ಸಾಲವನ್ನು ತೆಗೆದುಕೊಂಡಿದಾರೋ, ಅವರಿಗೂ ಸಹ ರಿಯಾಯಿತಿಗಳನ್ನು ಕೊಡಿ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.--ಕೆಲವು ಸಂದರ್ಭದಲ್ಲಿ 15 ಸಾವಿರ ರೂಪಾಯಿಗಳೂ ಆಗಿರಬಹುದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.--ದಯಮಾಡಿ ರೈತರ ಬಗ್ಗೆ ರಿಯಾಯಿತಿ ಕೊಡಿ. ರೈತ ನಾಯಕರ ಮೇಲೆ ನಿಮಗೆ ಸಿಟ್ಟು ಇರಬಹುದು. ಈ ಸಿಟ್ಟನ್ನು ಸಾಮಾನ್ಯ ರೈತರು ಅನುಭವಿಸುವುದು ಬೇಡ ಎಂದು ಪ್ರಾರ್ಥಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.--ವಿರೋಧಪಕ್ಷದಲ್ಲಿರತಕ್ಕಂಥ ಮಾನ್ಯ ಸದಸ್ಯರು ಮತ್ತು ಈ ಕಡೆ ಇರತಕ್ಕಂಥ ಮಾನ್ಯ ಸದಸ್ಯರೂ ಕೂಡಾ ಗೃಹ ನಿರ್ಮಾಣ ವಿಚಾರದಲ್ಲಿ ಬಹಳ ಟೀಕೆ ಮಾಡಿದ್ದಾರೆ. ನಾನು ಒಪ್ಪುತ್ತೇನೆ. ಕಳೆದ ವರ್ಷ 83-84ನೇ ಇಸವಿಯಲ್ಲಿ ಸಾಕಷ್ಟು ಸಂಸ್ಥೆಯಲ್ಲಿ ಹೊಸ ಮನೆಗಳ ನಿರ್ಮಾಣವನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಕಾರಣವೇನು ?. 80-81ನೇ ಇಸವಿಯಲ್ಲಿ 50 ಸಾವಿರ ಮನೆಗಳನ್ನು ಮಂಜೂರು ಮಾಡಿದರು. ಅದಕ್ಕೆ ಬೇಕಾದ ಸಬ್ಸಿಡಿ ಮತ್ತು ಬಜೆಟ್ ಪ್ರಾವಿಷನ್ 12 ಕೋಟಿ 65 ಲಕ್ಷ ರೂ ಗಳು ರಿಲೀಸ್ ಮಾಡಿದ್ದುದು ಕೇವಲ 7.54 ಕೋಟಿ. ಇದರಲ್ಲಿ ಐದು ಕೋಟಿ ರೂಪಾಯಿಗಳು ಬಾಕಿ ಉಳಿಯಿತು. 81-82 ರಲ್ಲಿ ಒಟ್ಟು ಒಂದು ಲಕ್ಷ ಹೊಸ ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ಕೊಟ್ಟರು. ಆಗ ರಿಲೀಸ್ ಮಾಡಿದ್ದು ಎಷ್ಟು ಅಂದರೆ 5 ಕೋಟಿ 25 ಲಕ್ಷ ಐವತ್ತು ಸಾವಿರ ಮನೆಗಳನ್ನು ಮಂಜೂರು ಮಾಡಿದಾಗಲೂ ಕೂಡಾ 7.50 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಒಂದು ಲಕ್ಷ ಮಂಜೂರು ಮಾಡಿ, ರಿಲೀಸ್ ಮಾಡಿದ ಹಣ ಕೇವಲ 5 ಕೋಟಿ 25 ಲಕ್ಷ. ಆಮೇಲೆ 82-83 ಚುನಾವಣಾ ವರ್ಷ. ಆ ವರ್ಷ ಒಂದು ಲಕ್ಷ 20 ಸಾವಿರ ಮನೆಗಳನ್ನು ಮಂಜೂರು ಮಾಡಿದ್ದಾರೆ. ಹಿಂದೆ ಕಟ್ಟಿದುದು ಕಟ್ಟೇ ಆಗಲಿಲ್ಲ. ಆದರೆ ಹೊಸದಾಗಿ ಒಂದು ಲಕ್ಷ 20 ಸಾವಿರ ಮನೆಗಳನ್ನು ಮಂಜೂರು ಮಾಡಿದಾರೆ. ಇಷ್ಟೆ ಅಲ್ಲ. ಕೆಲವು ಜಿಲ್ಲೆಗಳಲ್ಲಿ ಬೇಕಾದಷ್ಟು ಮಾಡಿ, ಸ್ಕೈ ಇಸ್ ದಿ ಲಿಮಿಟ್ ಎಂದು ಹೇಳಿದ್ದಾರೆ. ಆ ವರ್ಷ ರಿಲೀಸ್ ಆದುದು ಎಷ್ಟು ಅಂದರೆ 83 ರಲ್ಲಿ ನಾವು ಬಂದ ಮೇಲೆ ಕೆಲವೊಂದನ್ನ ರಿಲೀಸ್ ಮಾಡಿದ್ದೇವೆ. ಬಜೆಟ್‌ನಲ್ಲಿ ಇಡ್ಡುದು ಕೇವಲ 18 ಕೋಟಿ ರೂಪಾಯಿಗಳು, ಅಷ್ಟೂ ಹಣ

ವನ್ನು ನಾವು ರಿಲೀಸ್ ಮಾಡಿದ್ದೇವೆ ಆದರೆ ಹೊಸದಾಗಿ ಕಟ್ಟುಸುವುದಕ್ಕೆ ಆಗಲಿಲ್ಲ, ಹಳೇ ಬಾಕಿಯನ್ನೇ ತೀರಿಸುತ್ತಾ ಬರಬೇಕಾಯಿತು. ಕಳೆದ ವರ್ಷ ಅಂದರೆ 83-84 ರಲ್ಲಿ 58 ಸಾವಿರ ಮಾತ್ರ ಮಾಡಿದ್ದು ನಿಜ ಏಕೆಂದರೆ ಹಿಂದೆ ಮಾಡಿದ್ದು ಇನ್ನೂ ಸುಮಾರು 20-25 ಕೋಟಿ ರೂಪಾಯಿಗಳನ್ನು ನಾವು ಅನೇಕ ಕಡೆ ಕೊಡಬೇಕು ಡಾ; ಆಚಾರ್ಯ ಅವರು ನಾನು ಈ ಶಬ್ದ ಬಳಸಿದ್ದಕ್ಕೆ ಬೇಸರ ಪಟ್ಟುಕೊಳ್ಳಬಾರದು, ನನ್ನ ಜೀವ ತಿಂದರು. ನೀವು ಬಿಡುಗಡೆ ಮಾಡಿಸಬೇಕು; ಇಲ್ಲದಿದ್ದರೆ ಮಳೆ ಬಂದಾಗ ಬಿದ್ದು ಹೋಗುತ್ತದೆ ಎಂದು ಹೇಳಿದರು. ಅದೇ ರೀತಿ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಯವರು ಅಂದರೆ ಎಲ್ಲಿ ಮಳೆ ಬರುತ್ತದೋ ಅಂಥವರ ಈ ಬಗ್ಗೆ ಒತ್ತಾಯ ಮಾಡಿದರು. ಅವರು ಮನೆ ಕಟ್ಟಿಸುವುದಕ್ಕೆ ಹೇಳಿ ಹೊರಟು ಹೋದರು. ಹಣ ಇಟ್ಟಿರಲಿಲ್ಲ. ಈಗ ಇದನ್ನೆಲ್ಲಾ ನಾವು ಖರ್ಚು ಮಾಡಬೇಕಾದ ಪ್ರಸಂಗ ಬಂತು.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.--ಇದರ ಬಗ್ಗೆ ಯೂ ಶ್ವೇತಪತ್ರ ಹೊರಡಿಸಿ.

ಶ್ರೀ ರಾಮಕೃಷ್ಣ ಹೆಗಡೆ.--ಈ ಕಡೆ ಕುಳಿತ ಸದಸ್ಯರು ಎಲ್ಲರೂ ಹೇಳುತ್ತಾರೆ, "ಏನಿದು ಹಿಂದಿನ ಕಾಲದಲ್ಲಿ ಒಂದು ಲಕ್ಷ ಸ್ಯಾಂಕ್ಷನ್ ಮಾಡುತ್ತಿದ್ದರು. ನೀವು ಐವತ್ತು ಸಾವಿರ ಮಾಡುತ್ತೀರಲ್ಲ ; ಬಡಜನರು ಮನೆ ಕೇಳುತ್ತಾರೆ, ಆದ್ದರಿಂದ ಹೆಚ್ಚು ಮನೆಗಳನ್ನು ಕಟ್ಟಿಸಿ" ಎಂದು ಹೇಳುತ್ತಾರೆ. ಇದನ್ನು ಹೇಗೆ ಮಾಡಲಿ ? ಹಿಂದಿನ ಸಾಲ ತೀರಿಸದೆ ಹೇಗೆ ಮಾಡುವುದು ? ಹಿಂದಿನದು ಅರ್ಧಂಬರ್ಧ ಆಗಿದೆ. ಅದಕ್ಕಾಗಿ ತೊಂದರೆಯಾಗಿದೆಯೆಂದು ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.--ನೀವು ಹೇಳುವುದನ್ನು ಒಪ್ಪುತ್ತೇನೆ. ಆದರೆ ಜನ ಸಂಖ್ಯೆ ಜಾಸ್ತಿ ಇದೆ. ಏನಾದರೂ ಮಾಡದಿದ್ದರೆ ಕಷ್ಟವಾಗುತ್ತದೆ. ನೀವು ಶಾಸಕರಾದ ಮೇಲೆ ಮನೆಗಳೇ ಕಟ್ಟಲಿಲ್ಲ ಎಂದು ಜನ ಹೇಳುತ್ತಾರೆ.

ಶ್ರೀ ಎನ್. ಜಿ. ನಾಯಕ್.--ಬರಗಾಲಪೀಡಿತ ಪ್ರದೇಶದಲ್ಲಿ ಮನೆ ಕಟ್ಟುವುದಕ್ಕೆ ದುಡ್ಡು ಕೊಟ್ಟಿಲ್ಲ.

ಅಧ್ಯಕ್ಷರು.--ಮುಖ್ಯಮಂತ್ರಿಗಳು ಹೇಳಿದ್ದು ಅದನ್ನೇ.

ಶ್ರೀ ಎನ್. ಜಿ ನಾಯಕ್.--ಬರೀ ಬಾಯಿಯಲ್ಲಿ ಹೇಳುತ್ತಿದ್ದಾರೆ ಆದರೆ ದುಡ್ಡು ಕೊಟ್ಟಿಲ್ಲ. ಬಡವರೆಲ್ಲಾ ಆಕಾಶ ನೋಡುತ್ತಿದ್ದಾರೆ. ಕೆಲವರು ಗೋಡೆವರೆಗೂ ಕಟ್ಟಿ ಸುಮ್ಮನೆ ಕುಳಿತುಕೊಂಡಿದ್ದಾರೆ ಈ ಮುಖ್ಯಮಂತ್ರಿಗಳ ಕಾಲದಲ್ಲಿ ಇಂಥ ಕಾಲ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.--ಮಾನ್ಯ ಅಧ್ಯಕ್ಷರೇ, ನಾವು ಕೆಲವೊಂದು ಎಕ್ಸೈಜ್ ಬಾಬುಗಳ ಮೇಲೆ ಮಾರಾಟ ತೆರಿಗೆ ಕಡಿಮೆ ಮಾಡಿದ ಬಗ್ಗೆ ಟೀಕೆ ಬಂತು. ಮಾನ್ಯ ಮೊಯಿಲಿಯವರು ಮತ್ತಿತರ ಸದಸ್ಯರು ಆ ಬಗ್ಗೆ ಹೇಳಿದರು. ನಿಜ ; ಎರಡು ಬಾಬುಗಳ ಮೇಲೆ ಅಂದರೆ ಫೆನ್ನಿ ಮತ್ತು ವೈನ್ ಮೇಲೆ ತೆರಿಗೆ ಕಡಿಮೆ ಮಾಡಿದ್ದೇವೆ. ಫೆನ್ನಿ ಗೋವಾದಲ್ಲಿ ಸಾಮಾನ್ಯವಾಗಿ ಉತ್ಪಾದನೆಯಾಗುತ್ತದೆ. ಇನ್ನೆಲ್ಲೂ ಆಗುವುದಿಲ್ಲ ನಮ್ಮಲ್ಲಿ ಒಂದೆರಡು ಘಟಕ ಬಂದಿರಬೇಕು ಇದಕ್ಕೆ 30 ಪರ್ಸೆಂಟ್ ಮಾರಾಟ ತೆರಿಗೆ ಇರುವುದರಿಂದ ಇಲ್ಲಿ ಉತ್ಪಾದನೆ ಮಾಡತಕ್ಕವರಿಗೆ ಮಾರಾಟ ಮಾಡುವುದಕ್ಕೆ ಕಷ್ಟವಾಗುತ್ತದೆ, ಗೋವಾದಿಂದ ಸ್ಮಗಲ್ ಆಗುವುದಕ್ಕೆ ಬೇಕಾದಷ್ಟು ಪ್ರೋತ್ಸಾಹ ಸಿಗುತ್ತದೆ, ಇದರಿಂದ ಎಕ್ಸೈಜ್ ಡ್ಯೂಟಿ ಸೇಲ್ಸ್ ಟ್ಯಾಕ್ಸ್ ಹೋಗುತ್ತದೆ ಎಂಬ ವಾದ ಇತ್ತು. ಕೆಲವು ವರ್ಷಗಳವರೆಗೆ ಫೆನ್ನಿ ಮತ್ತು ವೈನ್ ಎರಡರ ಮೇಲೆ ಸಂಪೂರ್ಣವಾಗಿ ಮಾರಾಟ ತೆರಿಗೆ ತೆಗೆದುಹಾಕಬೇಕೆಂಬ ವಿಚಾರ ನನ್ನ ಮನಸ್ಸಿನಲ್ಲಿ ಬಂದಿತ್ತು. ಆದರೆ ಒಂದೇ ಸಲ ಹಾಗೆ ಮಾಡುವುದು ಬೇಡ ಎಂದು ತೆಗೆದುಕಾಕಲಿಲ್ಲ ಇದರಿಂದ ಸಣ್ಣಪುಟ್ಟ ಉದ್ದಿಮೆದಾರರಿಗೆ ಮತ್ತು ಸ್ವಲ್ಪಮಟ್ಟಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಒಳ್ಳೆಯ ದೃಷ್ಟಿಯಿಂದ ನಾವು ಈ ತೀರ್ಮಾನ ತೆಗೆದುಕೊಂಡಿದ್ದೇವೆ ವೈನ್ ವಿಚಾರದಲ್ಲಿ ಹೇಳುವುದಾದರೆ ಹಳೇ ಸದಸ್ಯರಿಗೆ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ರಂಗನಾಥ್ ಅವರಿಗೆ ಗೊತ್ತಿರಬಹುದು.

ಶ್ರೀ ಕೆ. ಎಚ್. ರಂಗನಾಥ್.--ಏನು ಸ್ವಾಮಿ ?

ಅಧ್ಯಕ್ಷರು --ವೈನ್ ವಿಚಾರ ತಮಗೆ ಗೊತ್ತಿರಬಹುದು ಎಂದು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ

ಶ್ರೀ ರಾಮಕೃಷ್ಣ ಹೆಗಡೆ.-- ಹಳೇ ಸದಸ್ಯರಿಗೆಲ್ಲಾ ಗೊತ್ತಿದೆ. 1967-68 ನೇ ಬಜೆಟ್ಟಿನಲ್ಲಿ ವೈನ್ ಮೇಲೆ ಸಂಪೂರ್ಣವಾಗಿ ಸೇಲ್ಸ್‌ಟ್ಯಾಕ್ಸ್ ತೆಗೆದುಹಾಕಿದ್ದೆ ಎಕ್ಸೈಜ್ ಡ್ಯೂಟಿ ಕಡಿಮೆ ಮಾಡಿದ್ದೆ. ಅದಕ್ಕೆ ಕಾರಣ ಇತ್ತು. 1967 ರಲ್ಲಿ ನಾಲ್ಕು ಸಾವಿರ ಎಕರೆಯಲ್ಲಿ ನಮ್ಮ ರೈತರು ದ್ರಾಕ್ಷಿ ಬೆಳೆಯುತ್ತಿದ್ದರು. ಆದರೆ 1982-83 ರಲ್ಲಿ 16 ಸಾವಿರ ಎಕರೆಯಲ್ಲಿ ದ್ರಾಕ್ಷಿ ಬೆಳೆಯುತ್ತಾರೆ. 1,25,000 ಟನ್ ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದ್ದಾರೆ. ಇಡೀ ದೇಶದಲ್ಲಿ ನಮ್ಮಲ್ಲಿ ಆಗುವಷ್ಟು ದ್ರಾಕ್ಷಿ ಉತ್ಪಾದನೆ ಎಲ್ಲೂ ಆಗುವುದಿಲ್ಲ. ಇದರಲ್ಲಿ ನಾಲ್ಕು ವೆರೈಟಿ ಇದೆ. ಬೆಂಗಳೂರು ಬ್ಲೂ, ಅನಾಬ್‌ಶಾಹಿ ಮತ್ತೆ ಇನ್ನೆರಡು ತರಹ

ದ್ರಾಕ್ಷಿ ಬೆಳೆಯುತ್ತಾರೆ. ಅದಕ್ಕೆ ಸರಿಯಾಗಿ ದರ ಸಿಕ್ಕಿದರೆ ಮಾತ್ರ ರೈತರಿಗೆ ಲಾಭ ಬರುತ್ತದೆ. ಸರಿಯಾಗಿ ಬೆಳೆದು ಸರಿಯಾದ ದರ ಸಿಕ್ಕಿದರೆ ಇದಕ್ಕಿಂತ ಲಾಭದಾಯಕವಾದ ಬೆಳೆ ಬೇರೆ ಯಾವುದು ಇಲ್ಲ. ದ್ರಾಕ್ಷಿ ಪೆರಿಷಬಲ್ ಐಟಂ. ಒಂದು ಸಾರಿ ಕಿತ್ತಮೇಲೆ ೫ ದಿವಸಗಳಿಗಿಂತ ಹೆಚ್ಚಿಗೆ ಇಡುವುದಕ್ಕಾಗುವುದಿಲ್ಲ. ಕೋಲ್ಡ್ ಸ್ಟೋರೇಜ್‌ನಲ್ಲಿಟರೂ ಕೂಡ ಅಷ್ಟೆ. ಆದರೆ ರೈತರು ಬೆಳೆಯುತ್ತಾರೆ. ಏನು ಮಾಡುವುದು ? ವೈನ್‌ಗೆ ಉತ್ತೇಜನ ಕೊಟ್ಟರೆ ರೈತರಿಗೆ ಲಾಭವಾಗುತ್ತದೆ ಎಂಬ ಉದ್ದೇಶದಿಂದ ಅದಕ್ಕೆ ಕಡಿಮೆ ಮಾಡಿದ್ದೇನೆ. ಅದರಲ್ಲೂ ಕೂಡ ಅಗತ್ಯವಾದರೆ ಈ ಎರಡು ವಿಚಾರದಲ್ಲಿ ಎಕ್ಸೈಜ್ ಡ್ಯೂಟಿ ಕಡಿಮೆ ಮಾಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಇದಲ್ಲದೆ ನಾವು ಬೇರೆ ಎರಡು ವಿಚಾರದಲ್ಲಿ ಕೂಡ ಕಡಿಮೆ ಮಾಡಿದ್ದೇವೆ. ಒಂದು ಡಿನೇಚರ್ಡ್ ಸ್ಪಿರಿಟ್, ಮತ್ತೊಂದು ಮಧ್ಯಮ ದರ್ಜೆಯ ಮದ್ಯಸಾರ. ಹೋದಸಾರಿ ನಾನೆಲ್ಲ ಅದನ್ನು ಹೆಚ್ಚು ಮಾಡಿದ್ದೆ. 10-12 ಪರ್ಸೆಂಟ್‌ನಿಂದ 30 ಪರ್ಸೆಂಟ್ ಮಾಡಿದವನ್ನು ನಾನು. ಅದರ ಪರಿಣಾಮ ಏನಾಯಿತು ಎಂದರೆ ಸ್ಟಾಕ್ ಹಾಗೇ ಇದೆ, ಯಾರು ಖರೀದಿ ಮಾಡುತ್ತಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.--ತಾವು ಹೇಳುವುದು ನೋಡಿದರೆ ದ್ರಾಕ್ಷಿ ಬೆಳೆಯುವುದೆಲ್ಲಾ ವೈನ್‌ಗೆ ಮಾತ್ರ ಉಪಯೋಗವಾಗುತ್ತದೆ. ಜನರು ತಿನ್ನುವುದಿಲ್ಲ ಎಂಬ ಅಭಿಪ್ರಾಯ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.--ಆ ರೀತಿ ಏನೂ ಅರ್ಥವಾಗುವುದಿಲ್ಲ. ನಾವು ತೆಗೆದುಕೊಂಡ ಕ್ರಮದ ಬಗ್ಗೆ ಮಾನ್ಯ ಮೊಯಿಲಿಯವರು ಆಲೋಚನೆ ಸರಿಯಲ್ಲ ಎಂದು ಹೇಳಬಯಸುತ್ತೇನೆ. ಅವರು ತಿಳಿದುಕೊಂಡಂತೆ ಡಿಸ್ಟಿಲ್‌ಗೆ ಹಾಕತಕ್ಕದ್ದಲ್ಲ. ಡಿಸ್ಟಿಲ್ ಆಗಿ ಬಂದಿದ್ದಕ್ಕೆ ಹಾಕತಕ್ಕದ್ದು. ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್‌ಗೆ ಅದು ವಿಸ್ಕಿ ಇರಬಹುದು, ಬ್ರಾಂದಿ ಇರಬಹುದು, ಜಿನ್ ಇರಬಹುದು, ಮತ್ತೊಂದಿರಬಹುದು. ಅದರ ಮೇಲೆ 30 ಪರ್ಸೆಂಟ್ ಇದ್ದುದನ್ನು 60 ಪರ್ಸೆಂಟಿಗೆ ಹೆಚ್ಚು ಮಾಡಿದ್ದೇವೆ. ನಾನ್ ಎಕ್ಸೈಜ್ ಡ್ಯೂಟಿ ಇದ್ದುದಕ್ಕೆ 150 ಪರ್ಸೆಂಟಿಗೆ ಏರಿಸಿದ್ದೇನೆ. ಇದರ ಬಗ್ಗೆ ಈಗಾಗಲೇ ನನ್ನ ಹತ್ತಿರ ಕೆಲವು ಜನ ಬಂದು ಇಷ್ಟೊಂದು ಹೆಚ್ಚಿನ ಮಾರಾಟ ತೆರಿಗೆ ಇಟ್ಟರೆ ಈ ಉದ್ಯಮ ಸತ್ತುಹೋಗುತ್ತದೆ ಮತ್ತು ಟ್ಯಾಕ್ಸ್ ಇವೇಷನ್ ಜಾಸ್ತಿಯಾಗುತ್ತದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಇವತ್ತು ಏನೂ ಹೇಳುವುದಿಲ್ಲ ; ಕೆಲವು ದಿನಸ ಪರಿಣಾಮವನ್ನು ಕಾದುನೋಡಿ ಅಕಸ್ಮಾತ್ ಇಳಿಸುವ ಪ್ರಸಂಗ ಬಂದರೆ ಇಳಿಸುತ್ತೇನೆ ಎಂದು ಹೇಳುತ್ತೇನೆ. ವ್ಯವಹಾರ ನೋಡಬೇಕು. ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡಬೇಕು. ಇದರಲ್ಲಿ ಬಿಯರ್ ವಿಚಾರ ಕೂಡ ಬಂತು. ಇದರ ಮೇಲೆ ಕೂಡ ಶೇಕಡ 30 ರಿಂದ ಶೇಕಡ 60ಕ್ಕೆ ಸೇಲ್ಸ್‌ಟ್ಯಾಕ್ಸ್ ಏರಿಸಿದ್ದೇವೆ. ಇದರ ಬಗ್ಗೆ ಅನೇಕ ಮನವಿಗಳು ಬಂದಿವೆ. ಬಿಯರ್ ಅಷ್ಟೊಂದು ಸ್ಟ್ರಾಂಗ್ ಡ್ರಿಂಕ್ಸ್ ಅಲ್ಲ, ಸಾಮಾನ್ಯ ಜನರೂ ಇದನ್ನು ಕುಡಿಯುತ್ತಾರೆ. ಆದ್ದರಿಂದ ಇದರ ಮೇಲೆ ಇರುವ ತೆರಿಗೆಯನ್ನು ಕಡಿಮೆ ಮಾಡಬೇಕು ಎಂದು ಹೇಳಿದ್ದಾರೆ. ನಾನು ಇದನ್ನು ಕಡಿಮೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇನೆ. ಕೆಲವು ದಿವಸದಲ್ಲಿ ಇದನ್ನು ಹೇಳಬಹುದು. ಮಾನ್ಯ ಬಂಗಾರಪ್ಪನವರು ಈಗ ಇಲ್ಲೇ ಇದ್ದಾರೆ. ಇಷ್ಟರವರೆಗೆ ಇರಲಿಲ್ಲ. ಅವರು ಹೇಳಿದರು ಸಣ್ಣ ರೈತರ ಬಗ್ಗೆ, ಗೇಣಿದಾರರು ಮತ್ತು ಭೂಮಾಲಿಕರ ಬಗ್ಗೆ ಏನು ಮಾಡಿದ್ದೀರಿ ಎಂದು. ಸಣ್ಣ ಭೂಮಾಲೀಕರು ಮತ್ತು ಗೇಣೀದಾರರು ಕಷ್ಟಪಡುತ್ತಿದ್ದಾರೆ ಎಂದು ಹೇಳಿದರು. ಕಾಂಪೆನೆಸಷನ್ ಸರಿಯಾಗಿ ಸಿಗುತ್ತಿಲ್ಲ, ಕಾರಕೂನರೇ ಹಣ ತಿಂದುಹಾಕುತ್ತಾರೆ ಎಂದು ಹೇಳಿದರು. ನಾನು ಶಿವಮೊಗ್ಗ ಜಿಲ್ಲೆ ಬಗ್ಗೆ ಅಂಕಿಸಂಖ್ಯೆಯನ್ನು ಕೊಡುತ್ತೇನೆ, 1981 ನೇ ಇಸವಿಯಲ್ಲಿ ಸಣ್ಣ ಹಿಡುವಳಿದಾರರಿಗೆ ಪರಿಹಾರ ಕೊಟ್ಟಿರುವುದು 213 ಜನರಿಗೆ 1983 ರಲ್ಲಿ 509 ಜನರಿಗೆ. 1981 ನೇ ಇಸವಿಯಲ್ಲಿ 11,39,000 ರೂಪಾಯಿ ಪರಿಹಾರ ಕೊಟ್ಟಿದ್ದರೆ 19x3 ರಲ್ಲಿ 29,30,000 ರೂಪಾಯಿ ಕೊಟ್ಟಿದ್ದೇವೆ. ಎಲ್ಲ ತರಹದ ಜನರೂ ಸೇರಿ ಅಂದರೆ ಸಣ್ಣ ಹಿಡುವಳಿದಾರರು, ಅಂಗವಿಕಲರು ವಿಧವೆಯರು ಎಲ್ಲ ಸೇರಿ ಶಿವಮೊಗ್ಗದಲ್ಲಿ 4507 ಜನರಿಗೆ ಪರಿಹಾರ ಕೊಟ್ಟಿದ್ದೇವೆ. ಒಟ್ಟು ಹಣ ಕೊಟ್ಟಿರುವುದು 96,74.000 ರೂಪಾಯಿಗಳು. ಅಂದರೆ ಸ್ವಲ್ಪ ಹೆಚ್ಚು ಕಡಿಮೆ ಒಂದು ಕೋಟಿ ರೂಪಾಯಿಗಳು. ಭೂಸುಧಾರಣೆ ಕಾನೂನು ಜಾರಿಗೆ ಬಂದನಂತರ 1983 ನೇ ಇಸವಿ ಕೊನೆಯವರೆಗೆ ಕೊಟ್ಟ ಮೊಬಲಗು 34 ಕೋಟಿ ರೂಪಾಯಿಗಳು. 1980ರಲ್ಲಿ, 16,740 ಜನರಿಗೆ 1981ರಲ್ಲಿ 21 ಸಾವಿರ ಜನರಿಗೆ, 1982ರಲ್ಲಿ 23 ಸಾವಿರ ಜನರಿಗೆ 1983ರಲ್ಲಿ 40,800 ಜನರಿಗೆ ಕಾಂಪನ್‌ಸೇಷನ್ ಸಿಕ್ಕಿದೆ. 1980 ರಲ್ಲಿ 3 ಕೋಟಿ 91 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದರೆ 1983 ರಲ್ಲಿ ಏಳೂವರೆ ಕೋಟಿ ರೂಪಾಯಿ ಪರಿಹಾರ ಕೊಡಲಾಗಿದೆ. ಈ ಬಗ್ಗೆ ಬರುವ ವರ್ಷಕ್ಕೆ 15 ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ. ಈ ಬಗ್ಗೆ ಮಾನ್ಯ ಬಂಗಾರಪ್ಪನವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಯಾರು ಯಾರು ಸಣ್ಣ ಪುಟ್ಟ ಹಿಡುವಳಿದಾರರು ಇದ್ದಾರೆ ಅವರಿಗೆ ಎಷ್ಟೆಷ್ಟು ವರ್ಷಗಳಿಂದ ಪರಿಹಾರ ಸಿಕ್ಕಿಲ್ಲ ಅಂತಹವರು ವಿಧವೆಯರಾಗಿರಬಹುದು, ಅಂಗವಿಕಲರಾಗಿರಬಹುದು, ಅಂತಹವರ ಬಗ್ಗೆ ಕಳೆದ

15 ವರ್ಷಗಳಿಂದ ಒಂದು ನಿರ್ಣಯ ತೆಗೆದುಕೊಂಡಿರಲಿಲ್ಲ. ಈ ಜನರಿಗೆ ಏನು ಬಾಂಡ್ ಕೊಡಬೇಕೆಂದು ಮಾಡಲಾಯಿತು ಅದನ್ನು ಕೊಟ್ಟಿದ್ದರೇ ಇಷ್ಟು ಹೊತ್ತಿಗೆ ಅವರಿಗೆ ಹಣ ಸಿಗುತ್ತಾ ಇತ್ತು. ಇಂತಹ ಜನರಿಗೆ ಬಾಂಡ್ ಬದಲು ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದು ನಾವು ಮಾಡಿದ್ದೇವೆ. ಮತ್ತೊಂದು ವಿಚಾರ ಮಾನ್ಯ ಬಂಗಾರಪ್ಪನವರಿಗೆ ಗೊತ್ತಿದೆಯೋ ಇಲ್ಲವೋ ಪ್ರಥಮ ಬಾರಿಗೆ ಈ ಸಣ್ಣಪುಟ್ಟ ಭೂಮಾಲೀಕರು 50 ಸಲ ತಾಲ್ಲೂಕು ಕಛೇರಿಗೆ ಹೋಗಿ ಸಲಾಮು ಹೊಡೆದು ಅವರಿಗೆ ಕಮಿಷನ್ ಕೊಟ್ಟು ತೊಂದರೆ ಅನುಭವಿಸುತ್ತಿದ್ದರು. ಈ ರೀತಿ ಕಷ್ಟ ಪಡಬಾರದು ಎಂದು ಹೇಳಿ ನಾವು ಕಳೆದ ವರ್ಷ ಆಗಸ್ಟ್ 15ನೇ ತಾರೀಖಿಗೆ ಒಂದು ಆಂದೋಳನವನ್ನು ಎಲ್ಲಾ ಜಿಲ್ಲೆಗಳಲ್ಲಿ ಮಾಡಿದೆವು ಯಾವ ಯಾವ ಭೂಮಾಲೀಕರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದಾರೆ, ಅವರಿಗೆ ಕೊಡುವ ಪರಿಹಾರವನ್ನು ಅವರ ಮನೆ ಬಾಗಿಲಿಗೆ ಚೆಕ್ ಮೂಲಕ ಮುಟ್ಟಿಸಬೇಕೆಂದು ಮಾಡಲಾಗಿದೆ. ಈವತ್ತು ಇಂತಹವರಿಗೆ ಅಷ್ಟೇ ಅಲ್ಲ, ಯಾರಿಂದ ಸರ್ಕಾರ ಜಮೀನುಗಳನ್ನು ಬ್ರಿಡ್ಜ್ ಕಟ್ಟುವುದಕ್ಕಾಗಲೀ ರಸ್ತೆ ನಿರ್ಮಾಣ ಮಾಡುವುದಕ್ಕಾಗಲೀ, ಶಾಲಾಕಟ್ಟಡ, ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕಾಗಲೀ ಪಡೆದುಕೊಳ್ಳುತ್ತದೆಯೋ, ಆ ಬಗ್ಗೆ ಪರಿಹಾರವನ್ನು ಕೊಡುವಾಗ ಚೆಕ್ ಮುಖಾಂತರ ಕೊಡಬೇಕೆಂದು ಕಡ್ಡಾಯ ನಿಯಮವನ್ನು ಮಾಡಿದ್ದೇವೆ. ಇದರಿಂದ ಕಮಿಷನ್ ಹಾವಳಿ ಹೋಯಿತು. ಅವರು ತಿರುಗುವುದೂ ತಪ್ಪಿತು. ಒಂದು ವಿಷಯವನ್ನು ಮಾನ್ಯ ಬಂಗಾರಪ್ಪನವರು ನೆನಪಿನಲ್ಲಿ ಇಟ್ಟು ಕೊಳ್ಳಬೇಕು 1980 ನೇ ಇಸವಿಯಲ್ಲಿ ಸುಮಾರು 16 ಸಾವಿರ ಜನರಿಗೆ ಪರಿಹಾರ ಸಿಕ್ಕಿದೆ. ಆ ವರ್ಷ ಮಾನ್ಯ ಬಂಗಾರಪ್ಪನವರೇ ರೆವಿನ್ಯೂ ಖಾತೆಯ ಮಂತ್ರಿಗಳಾಗಿದ್ದರು.

ಶ್ರೀ ಎಸ್. ಬಂಗಾರಪ್ಪ.--ನನ್ನ ಪಾಯಿಂಟನ್ನು ತಾವು ಅರ್ಥಮಾಡಿಕೊಳ್ಳಲಿಲ್ಲ. ಸಣ್ಣಪುಟ್ಟ ಭೂಮಾಲೀಕರು ಯಾರು ಇದ್ದಾರೆ ಅವರಿಗೆ ಪರಿಹಾರ ಏಕ ಗಂಟಿನಲ್ಲಿ ಕೊಡಬೇಕೆಂದು. ನಾನು ಹೇಳುತ್ತಿರುವುದು ಆದರೆ ದೊಡ್ಡವರು ಕೆಲವರು ಸುಳ್ಳು ಸರ್ಟಿಫಿಕೇಟ್ ಕೊಟ್ಟು ಏಕ ಗಂಟಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಈ ರೀತಿ ನಮ್ಮ ತಾಲ್ಲೂಕಿನಲ್ಲಿ ಆಗಿದೆ ಎಂದು ಹೇಳಿದೆ. ಅದಕ್ಕೆ ಉತ್ತರ ಕೊಡಲಿಲ್ಲ. ಸುಳ್ಳು ಸರ್ಟಿಫಿಕೇಟ್ ಕೊಟ್ಟು ಏಕಗಂಟಿನಲ್ಲಿ ಪಡೆಯುತ್ತಿದ್ದಾರೆ. ಅದು ಸಣ್ಣ ಭೂಮಾಲೀಕರಿಗೆ ಹೋಗಿಲ್ಲ ಎಂದು ಹೇಳಿದೆ.

ಶ್ರೀ ರಾಮಕೃಷ್ಣ ಹೆಗ್ಡೆ.--ಸಣ್ಣ ಭೂಮಾಲೀಕರ ಬಗ್ಗೆಯೇ ನಾನು ಈಗ ಹೇಳಿದ್ದು. ಏಕಗಂಟಿನಲ್ಲಿ ಕೊಡುವ ಬಗ್ಗೆಯೇ ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.--ಸಣ್ಣಪುಟ್ಟ ಕಂತಿನಲ್ಲಿ ಕಟ್ಟುವ ಹಣವನ್ನು ರದ್ದು ಮಾಡುತ್ತೇವೆಂದು ತಾವು ಹಿಂದಿನ ಅಧಿವೇಶನದಲ್ಲಿಯೇ ಹೇಳಿದ್ದಿರಿ. ಕಳೆದ ವರ್ಷ ಆ ಬಗ್ಗೆ ಪ್ರಾಶಸ್ತ್ಯ ಕೊಡಲಿಲ್ಲ. ಈ ವರ್ಷ ಕೂಡಾ ತಾವೂ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.--ಗೇಣಿದಾರರಿಗೆ ಪಟ್ಟಾ ಕೊಡುವ ವಿಚಾರದಲ್ಲಿ ಆಗಸ್ಟ್ 15 ನೇ ತಾರೀಖು ಕ್ಯಾಂಪೇನ್ ಮಾಡಿ ಎಷ್ಟು ಸರ್‌ಪ್ಲೆಸ್ ಲ್ಯಾಂಡ್ ಇದೆ ಅದನ್ನು ಹಂಚಬೇಕೆಂದು ಹೇಳಿದ ಮೇಲೆ ಆಗಸ್ಟ್ 15 ರಂದೇ ಎಲ್ಲಾ ಹಂಚಿಕೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.--ಗೇಣಿದಾರರಿಗೆ ಏನು ಅಕ್ಯುಪೆನ್ಸಿ ರೈಟ್ಸ್ ಕನ್‌ಫರ್ಮ್ ಆಗಿದೆ ಅವರು ಕಂತಿನಲ್ಲಿ ಕಟ್ಟುವ ಹಣವನ್ನು ರದ್ದು ಮಾಡುವ ಬಗ್ಗೆ ಹೇಳಿದ್ದಿರಿ. ಆ ಬಗ್ಗೆ ಹೇಳಿಲ್ಲ

ಶ್ರೀ ರಾಮಕೃಷ್ಣ ಹೆಗ್ಡೆ.--ಓ, ಅದು ಈಗ ಗೊತ್ತಾಯಿತು. ಅದರ ಬಗ್ಗೆ ಒಟ್ಟು ಎಷ್ಟು ಹಣ ಖರ್ಚು ಬರುತ್ತದೆ ಎನ್ನುವುದನ್ನು ಅಂದಾಜು ಮಾಡುತ್ತಿದ್ದೇವೆ. ಇನ್ನು ಅಂತ್ಯೋದಯದ ಬಗ್ಗೆ ಬಹಳ ಟೀಕೆ ಮಾಡಿದರು.

ಶ್ರೀ ಎಸ್. ಬಂಗಾರಪ್ಪ.--ದಯವಿಟ್ಟು ಕ್ಷಮಿಸಬೇಕು. ನೀವು ಏನು ಕಂತನ್ನು ರದ್ದು ಮಾಡುತ್ತೇವೆಂದು ಹೇಳಿದ್ದೀರಿ, ಆ ಮಾತನ್ನು ತಾವು ಉಳಿಸಿಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಡೆ.--ಅವತ್ತು ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಬಹಳ ಕೇಸ್‌ಗಳು ಹೈಕೋರ್ಟಿನಲ್ಲಿ ಇವೆ, ಎಲ್ಲವನ್ನೂ ನಾವು ಅಂದಾಜು ಮಾಡದೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.--ಗೇಣಿದಾರರದು ಅಷ್ಟೇ ಅಲ್ಲ ಭೂಮಾಲೀಕರ ಕೇಸ್‌ಗಳೂ ಸಹಾ ಇವೆ. ತಾವು ಏನು ಮಾತು ಕೊಟ್ಟಿದ್ದೀರಿ ಆ ರೀತಿ ತಾವು ನಡೆದುಕೊಳ್ಳಬೇಕಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಡೆ.--ಆ ಬಗ್ಗೆ ಎಷ್ಟು ಹಣ ರದ್ದು ಮಾಡಬೇಕಾಗಿ ಬರಬಹುದೆಂದು ಅಂದಾಜನ್ನು ಮಾಡಬೇಕೋ ಬೇಡವೋ ? ಆ ಅಂದಾಜು ಆಗುತ್ತಿದೆ ಎಂದು ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.--ಅದನ್ನು ಮಾಡಿ. ನಾನು ಬೇಡ ಎಂದು ಹೇಳುವುದಿಲ್ಲ. ನೀವು ಕಂತಿನಲ್ಲಿ ಕೊಡುವುದನ್ನು ರದ್ದು ಮಾಡುತ್ತೇವೆಂದು ಹೇಳಿ.

ಶ್ರೀ ರಾಮಕೃಷ್ಣ ಹೆಗ್ಡೆ.—ಅಂದಾಜಿನಲ್ಲಿ ಒಟ್ಟು ಎಷ್ಟು ಖರ್ಚು ಬರುತ್ತದೆಂದು ನೋಡದೇ ಏನನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಎಲ್ಲಾ ಗೇಣಿದಾರರ ಬಗ್ಗೆ ಹೇಳುತ್ತಿಲ್ಲ. ಯಾರು ಸಣ್ಣ ಸಣ್ಣ ಹಿಡುವಳಿದಾರರು ಇದ್ದಾರೆ ಅಂತಹವರಿಗೆ ಆಕ್ಯುಪೆನ್ಸ್ ರೈಟ್ಸ್ ಸಿಕ್ಕಿದೆ ಅವರ ಬಗ್ಗೆ ಹೇಳಿದ್ದೇನೆ. ಆ ಬಗ್ಗೆ ಉತ್ತರ ಕೊಡಿ.

ಶ್ರೀ ರಾಮಕೃಷ್ಣ ಹೆಗ್ಡೆ.--ಆ ಬಗ್ಗೆ ಮತ್ತೊಂದು ಅವಕಾಶವನ್ನು ತೆಗೆದುಕೊಂಡು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.--ಇವತ್ತೇ ಹೇಳಿ.

ಶ್ರೀ ರಾಮಕೃಷ್ಣ ಹೆಗ್ಡೆ --ಇವತ್ತು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್ ಬಂಗಾರಪ್ಪ --ಅವರು ಸದನದಲ್ಲಿ ಹೇಳಿದ್ದಾರೆ. ಆ ಬಗ್ಗೆ ಉತ್ತರ ಕೊಡಲಿ.

ಶ್ರೀ ರಾಮಕೃಷ್ಣ ಹೆಗ್ಡೆ.--I cannot be dictated What is this ?

SRI C. S. BANGARAPPA.--I brand you as the Chief Minister for the land lords and not for the tenants. I have got a right to say. What right have you got ?

ಶ್ರೀ ರಾಮಕೃಷ್ಣ ಹೆಗ್ಡೆ --ಇವರು ಸ್ವತಹ ಭೂಮಾಲೀಕರಿದ್ದಾರೆ. ಇವರಿಗೆ ಎಷ್ಟು ಆಸ್ತಿ ಇದೆ ಎಂಬುದು ನನಗೆ ಗೊತ್ತು. ಗೇಣಿದಾರರ ಬಗ್ಗೆ ಮಾತನಾಡತಕ್ಕ ಹಕ್ಕು ಇವರಿಗಿಲ್ಲ.

(ಗೊಂದಲ)

ಶ್ರೀ ಎಸ್. ಆರ್ ಬೊಮ್ಮಾಯಿ.--ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸದನದಲ್ಲಿ ಸದಸ್ಯರಿಗೆ ಕೇಳತಕ್ಕ ಹಕ್ಕು ಇದೆ. ಆದರೆ ಉತ್ತರವನ್ನು ಈಗಲೇ ಕೊಡಬೇಕು ಎಂದು ಹೇಳುವ ಹಕ್ಕು ಇಲ್ಲ.

ಶ್ರೀ ಎಸ್. ಬಂಗಾರಪ್ಪ.--ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳಲಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ --ಸರ್ಕಾರ ಇದೇ ರೀತಿ ಉತ್ತರವನ್ನು ಕೊಡಬೇಕು ಎಂದು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ಮಧ್ಯೆದಲ್ಲಿ ಈ ರೀತಿ ಎದ್ದು ಈ ರೀತಿ ಮಾಡುವುದು ಸರಿಯಲ್ಲ. ಈ ಬಗ್ಗೆ ತಾವು ಅವರಿಗೆ ಸೂಕ್ತ ಆದೇಶವನ್ನು ಕೊಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.--ಮಾನ್ಯ ಸದಸ್ಯರು ರಕ್ತದ ಒತ್ತಡವನ್ನು ಚಕ್ ಮಾಡಿಸಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.--ಮಾನ್ಯ ಬೊಮ್ಮಾಯಿಯವರು ಹೇಳಿದಹಾಗೆ ಒತ್ತಾಯ ಮಾಡುವುದಕ್ಕೆ ಹಕ್ಕು ಇಲ್ಲ. ಆದರೆ ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಹಕ್ಕು ಇಲ್ಲವೇ ಎಂದು ಕೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ --ಮಾನ್ಯ ಬೈರೇಗೌಡರು ರಕ್ತದ ಒತ್ತಡದ ಬಗ್ಗೆ ಹೇಳಿದರು. ಮೊದಲು ಅವರು ಚಕ್ ಮಾಡಿಸಿಕೊಳ್ಳಲಿ.

ಶ್ರೀ ಎಂ. ವೀರಪ್ಪಮೊಯ್ಲಿ.—1983 ನೇ ಇಸವಿಯ ಚುನಾವಣಾ ಕಾಲದಲ್ಲಿ ನೀವು ಸಾಕಷ್ಟು ಪ್ರಚಾರ ಮಾಡಿದ್ದೀರಿ ಸಾಕಷ್ಟು ಪ್ರಚಾರ ಮಾಡುತ್ತಾ ಹೋಗಿ ಗೇಣಿದಾರರು ಕೊಡತಕ್ಕ ಕಂತನ್ನು ರದ್ದು ಮಾಡುತ್ತೇವೆಂದು ಹೇಳಿದಿರಿ. ಈ ಬಗ್ಗೆ 2ನೇ ಸಾರಿಯೂ ಆಯವ್ಯಯದಲ್ಲಿ ಈ ಬಗ್ಗೆ ಉತ್ತರ ಬರಲಿಲ್ಲ. ಮೊದಲನೆಯ ಆಯವ್ಯಯದಲ್ಲಿ ನಾವು ಈ ಬಗ್ಗೆ ಒತ್ತಾಯ ಮಾಡಲಿಲ್ಲ, ಕಾರಣ ತಾವು ಅಧಿಕಾರಕ್ಕೆ ಬಂದು ಕಡಿಮೆ ವೇಳೆ ಆಗಿತ್ತು. ಗೇಣಿದಾರರಿಗೆ ಈ ಒಂದು ಸೌಲಭ್ಯ ಕೊಡುವ ಬಗ್ಗೆ ತಾವು ಚುನಾವಣಾ ಕಾಲದಲ್ಲಿ ಹೇಳಿದ್ದು ಅನಂತರ ತಾವು ಸದನದಲ್ಲಿ ಕೂಡ ಹೇಳಿದ್ದು ನನಗೆ ನೆನಪು. ಆ ಬಗ್ಗೆ ಉತ್ತರವನ್ನು ಒತ್ತಾಯದ ರೂಪದಲ್ಲಿ ಕೇಳುವುದಕ್ಕಾಗುವುದಿಲ್ಲ. ಆದರೆ ಆ ಬಗ್ಗೆ ಸ್ಪಷ್ಟೀಕರಣ ರೂಪದಲ್ಲಿ ತಾವು ವಚನ ಭ್ರಷ್ಟರಾಗುತ್ತೀರೋ ಅಥವಾ ವಚನಶೀಲರಾಗುತ್ತಿರೋ ಎಂದು ಕೇಳುವುದಕ್ಕೆ ಅಧಿಕಾರ ಇಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.--ತಮಗೆ ಗೊತ್ತಿದೇ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಹಣಕಾಸಿನ ವಿಚಾರದಲ್ಲಿ ಅಂದಾಜು ಮಾಡುತ್ತಿದ್ದೇವೆ ಹಾಗೂ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ, ಅದರ ಬಗ್ಗೆ ಕೈ ಬಿಟ್ಟಿದ್ದೇವೆಂದು ಹೇಳಿಲ್ಲ. ಅದನ್ನು ಹೇಳಿದ ಮೇಲೆ ಪದೇ ಪದೇ ಒತ್ತಾಯ ಮಾಡಲಿಕ್ಕೆ ಆಗುತ್ತದೆಯೇ ಅವರು ಮಂತ್ರಿಗಳಾಗಿದ್ದವರು.

ಶ್ರೀ ಎಂ. ವೀರಪ್ಪಮೊಯಿಲಿ.--ತಾವು ಪದೇ ಪದೇ ಹೇಳಿದ ಮಾತನ್ನು ಕೇಳಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ--ಗರೀಬಿ ಹಠಾವೋ ಎಂದು ಹತ್ತು ವರ್ಷ ಹೇಳಿದಿರಿ ಏನು ಮಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ —ನಿಮ್ಮ ಪ್ರಜಾಪ್ರಭುತ್ವ ಏನು ಎಂದು ನಮಗೂ ಗೊತ್ತಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಕಂತು ವಜಾ ಮಾಡುವ ಬಗ್ಗೆ ಹೇಳಿಲ್ಲ ಅಂದರೆ ಪ್ರಶ್ನೆ ಬೇರೆ. ನಾನು ಚುನಾವಣೆ ಪ್ರಣಾಳಿಕೆ ವಿಚಾರ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ ಅದರಲ್ಲಿ ಇದೆ. ಈ ಸದನದಲ್ಲಿ ಹೇಳಿರತಕ್ಕ ಮಾತನ್ನು ಕೇಳುತ್ತೇನೆ. ಸಣ್ಣಪುಟ್ಟ ಭೂಮಾಲೀಕರಿಗೆ ಕೊಡತಕ್ಕದು ಅಭ್ಯಂತರವಿಲ್ಲ. ಅದೇ ರೀತಿ ಗೇಣಿದಾರರಿಗೆ ಕಂತು ವಜಾ ಮಾಡತ್ತೇವೆಂದು 1983ರ ಮಾರ್ಚಿ ತಿಂಗಳಲ್ಲಿ ಏನು ಹೇಳಿದ್ದಿರಿ ಆ ಮಾತನ್ನು ಉಳಿಸಲಿಕ್ಕೆ ನಾವು ಬದ್ಧರಾಗಿದ್ದೇವೆಂದು ಹೇಳಿದರೆ ಸಾಕು ಒಂದು ಎಕರೆ, ಎರಡು ಎಕರೆ, ಮೂರು ಎಕರೆ ಬಗ್ಗೆ ಅನಂತರ ತೀರ್ಮಾನ ಮಾಡಲಿ. ಎಷ್ಟರಮಟ್ಟಿಗೆ ಕೊಡಲಿಕ್ಕೆ ಸಾಧ್ಯ ಎಂಬುದನ್ನು ಹಣ ಕಾಸಿನ ಪರಿಸ್ಥಿತಿಯನ್ನು ನೋಡಿ ಹೇಳಲಿ. ಅದನ್ನು ಹೇಳಲಿಕ್ಕೆ ಬೆಟ್ಟ ಸುತ್ತಿ ಬರತಕ್ಕದು ನೋಡಿದರೆ, ಭೂಮಾಲೀಕರ ಬಗ್ಗೆ ಎಷ್ಟು ಅಭಿಮಾನವಿದೆ ಅದು ಗೇಣಿದಾರರ ಮೇಲೆ ಇಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ --ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದಿಲ್ಲ ಎಂದು ಹೇಳಿಲ್ಲ. ಇವೊತ್ತು ಹೇಳಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು.--ಲೆಕ್ಕ ತರಿಸಿನೋಡೋಣ, ಅದು ಎಷ್ಟು ಬರುತ್ತದೆ ನೋಡಿ ಅನಂತರ ಹೇಳುತ್ತೇನೆಂದು ಹೇಳಿದ್ದಾರೆ, ಮಾನ್ಯ ಸದಸ್ಯರು ದಯಮಾಡಿ ಕುಳಿತು ಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ --ಮಾನ್ಯ ಅಧ್ಯಕ್ಷರೆ, ಮಾನ್ಯ ಮೊಯಿಲಿಯವರು ಅಂತ್ಯೋದಯದ ಬಗ್ಗೆ ಮಾತನಾಡುತ್ತಾ ಐಆರ್‌ಡಿಪಿ ಯೋಜನೆಯನ್ನು ಮತ್ತೊಂದು ಹೆಸರಿನಲ್ಲಿ ತಂದ್ದೀರಿ ಏನೂ ಕೆಲಸ ಆಗಿಲ್ಲ ಎಂದು ಹೇಳಿದ್ದಾರೆ. 1983-84ನೇ ಸಾಲಿನಲ್ಲಿ ಅಂತ್ಯೋದಯ ಕಾರ್ಯಕ್ರಮವನ್ನು 45 ತಾಲ್ಲೂಕುಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಒಟ್ಟು ಲಾಭ ಪಡೆದಂತಹವರ ಸಂಖ್ಯೆ 5,013, ಇದರಲ್ಲಿ ಹರಿಜನ ಗಿರಿಜನರು 1,473. ಅಧ್ಯಕ್ಷರೆ, ನಾನು ಇದರ ಬಗ್ಗೆ ವಿವರವಾದಂಥ ಮಾತನ್ನು ಹೇಳಬೇಕಾದ ಅಗತ್ಯವಿಲ್ಲ. 1977ನೇ ಇಸವಿಯಲ್ಲಿ ಕೇಂದ್ರದಲ್ಲಿ ಜನತಾ ಸರ್ಕಾರ ಬಂದಾಗ ಹೊಸ ಕಾರ್ಯಕ್ರಮ ಪ್ರಾರಂಭ ಮಾಡಿದ್ದು. ಆ ಸಂದರ್ಭದಲ್ಲಿ ಇಲ್ಲಿ ಕಾಂಗ್ರೆಸ್ (ಐ) ಸರ್ಕಾರ ಇತ್ತು. ಯಾವ ಯಾವ ರಾಜ್ಯದಲ್ಲಿ ಜನತಾ ಸರ್ಕಾರ ಇತ್ತು ಅಲ್ಲಿ ಜಾರಿಗೆ ತಂದರು. ಇದು ಐಆರ್‌ಡಿಪಿಗೆ ಹೊರತಾಗಿ. ನಮ್ಮ ಗ್ರಾಮೀಣ ಉದ್ಯೋಗ ಯೋಜನೆಯಾಗಲಿ, ಅಥವಾ ಕೃಷಿ ಅಭಿವೃದ್ಧಿ ಯೋಜನೆ ಆಗಲಿ. ನಾವು ಪ್ರಕಟಿಸಿದಂಥ ಯಾವ ಯೋಜನೆಗಳೇ ಆಗಲಿ. ಇದನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದ ದುಡ್ಡಿನಿಂದಲೇ ಮಾಡುತ್ತೇವೆಂದು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರದ ಯಾವ ಯಾವ ಯೋಜನೆ ಇದೆ, ಅವರಿಂದ ಬರತಕ್ಕ ಹಣ ಮತ್ತು ಅದಕ್ಕೆ ಪೂರಕವಾಗಿ ನಾವು ಕೊಡತಕ್ಕ ಹಣ ಎರಡನ್ನು ಸೇರಿಸಬೇಕು, ಎಲ್ಲೆಲ್ಲಿ ಕೇಂದ್ರ ಸರ್ಕಾರದ ಯೋಜನೆ ಇದೆ ಅದರ ಲಾಭವನ್ನು ನಾವು ಪಡೆದುಕೊಳ್ಳಬೇಕು. ಅದರ ಹೊರತಾಗಿ ನಾವು ಏನು ಮಾಡಬೇಕೋ ಅದನ್ನು ಮಾಡಬೇಕು. ಈ ಒಂದು ವಿಚಾರವನ್ನು ಇಟ್ಟುಕೊಂಡು ಈ ಹೊಸ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ವರ್ಷ ನಾವು ಅಂತ್ಯೋದಯ ಕಾರ್ಯಕ್ರಮದಲ್ಲಿ ಒಟ್ಟು ಖರ್ಚು ಮಾಡಿದಂಥ ಹಣ 28 ಲಕ್ಷ ರೂಪಾಯಿ ಆಗಿದೆ. ಅನಂತರ ನೀರಾವರಿ ಯೋಜನೆ ಬಗ್ಗೆ ಚರ್ಚೆ ಆಯಿತು ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ನೀವು ಅರ್ಥ ಮಂತ್ರಿಗಳಾಗಿದ್ದವರು ಎಷ್ಟು ನೀರಾವರಿ ಯೋಜನೆಗೆ ಖರ್ಚು ಮಾಡಿದ್ದೀರಾ, ಏತಕ್ಕೆ ಹೆಚ್ಚು ಖರ್ಚು ಆಗಲಿಲ್ಲ, ಕೃಷ್ಣ ಪ್ರದೇಶದಲ್ಲಿ ಅನೇಕ ಯೋಜನೆಗಳು ಇವೆ. ಅದಕ್ಕೆ ಹೆಚ್ಚು ಕೊಡಬೇಕಾಗಿತ್ತು ಎಂದು ಹೇಳಿದರು. ನಾನು 1966-67ನೇ ಇಸವಿಯಿಂದ ಎಷ್ಟೆಷ್ಟು ಖರ್ಚಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಕೃಷ್ಣ ವಲಯದಲ್ಲಿ 1966-67, 1967-68ರಲ್ಲಿ 16 ಕೋಟಿ 83 ಲಕ್ಷ ರೂಪಾಯಿ ಖರ್ಚಾಗಿದೆ. ಕಾವೇರಿ ಬೇಸಿನ್‌ನಲ್ಲಿ 2 ಕೋಟಿ ರೂಪಾಯಿ ಖರ್ಚಾಗಿದೆ. 1968-69ರಲ್ಲಿ ಕೃಷ್ಣ ಬೇಸಿನ್‌ನಲ್ಲಿ 11 ಕೋಟಿ 99 ಲಕ್ಷ ರೂಪಾಯಿ, ಕಾವೇರಿ ಬೇಸಿನ್‌ನಲ್ಲಿ 2 ಕೋಟಿ 47 ಲಕ್ಷ ರೂಪಾಯಿಗಳು ಖರ್ಚಾಗಿದೆ. 1969-70ನೇ ಸಾಲಿನಲ್ಲಿ ನಾನು ಕೋಟಿ ರೂಪಾಯಿಗಳನ್ನು ಮಾತ್ರ ಹೇಳುತ್ತೇನೆ. ಕೃಷ್ಣ 16 ಕೋಟಿ ರೂಪಾಯಿ, ಕಾವೇರಿ 9 ಕೋಟಿ ರೂಪಾಯಿ ಖರ್ಚಾಗಿದೆ. 1970-71ನೇ ಸಾಲಿನಲ್ಲಿ ಕೃಷ್ಣ 16 ಕೋಟಿ ರೂಪಾಯಿ, ಕಾವೇರಿ 9 ಕೋಟಿ ರೂಪಾಯಿ ಖರ್ಚಾಗಿದೆ. 1971-72ರಲ್ಲಿ ಕೃಷ್ಣ 21 ಕೋಟಿ ರೂಪಾಯಿ ಕಾವೇರಿ 13 ಕೋಟಿ ರೂಪಾಯಿ ಖರ್ಚಾಗಿದೆ. 1972-73ರಲ್ಲಿ ಕೃಷ್ಣ 15 ಕೋಟಿ ರೂಪಾಯಿ ಕಾವೇರಿ 13 ಕೋಟಿ ರೂಪಾಯಿ ಖರ್ಚಾಗಿದೆ.

1973-74ರಲ್ಲಿ ಕೃಷ್ಣ 21 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 16 ಕೋಟಿ ರೂಪಾಯಿ ಖರ್ಚಾಗಿದೆ ಕಾವೇರಿ 11 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 11 ಕೋಟಿ ರೂಪಾಯಿ ಖರ್ಚಾಗಿದೆ 1974-75ರಲ್ಲಿ ಕೃಷ್ಣ 21 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 20 ಕೋಟಿ ರೂಪಾಯಿ ಖರ್ಚಾಗಿದೆ ಕಾವೇರಿ 10 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದು 11 ಕೋಟಿ ರೂಪಾಯಿ ಖರ್ಚಾಗಿದೆ. 1975-76ರಲ್ಲಿ ಕೃಷ್ಣ ವಲಯಕ್ಕೆ 23 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 25 ಕೋಟಿ ರೂಪಾಯಿ ಖರ್ಚಾಗಿದೆ ಕಾವೇರಿ 12 ಕೋಟಿ ರೂಪಾಯಿ ಬಡ್ಜೆಟ್ ಇದ್ದು 12 ಕೋಟಿ ರೂಪಾಯಿ ಖರ್ಚಾಗಿದೆ 1976-77ನೇ ಸಾಲಿನಲ್ಲಿ ಕೃಷ್ಣ 29 ಕೋಟಿ ರೂಪಾಯಿಗಳು ಬಡ್ಜೆಟ್ ಪ್ರಾವಿಜನ್ ಮಾಡಿತ್ತು ಆದರೆ 33 ಕೋಟಿ ರೂಪಾಯಿ ಖರ್ಚಾಗಿದೆ ಕಾವೇರಿ 16 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 18 ಕೋಟಿ ರೂಪಾಯಿ ಖರ್ಚಾಗಿದೆ 1977-78ನೇ ಸಾಲಿನಲ್ಲಿ ಕೃಷ್ಣ 43 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದು 43 ಕೋಟಿ ರೂಪಾಯಿ ಖರ್ಚಾಗಿದೆ ಕಾವೇರಿ 23 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 20 ಕೋಟಿ ರೂಪಾಯಿ ಖರ್ಚಾಗಿದೆ. 1978-79ನೇ ಸಾಲಿನಲ್ಲಿ ಕೃಷ್ಣ 64 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು 61 ಕೋಟಿ ರೂಪಾಯಿ ಖರ್ಚಾಗಿದೆ. ಕಾವೇರಿಗೆ 27 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು 28 ಕೋಟಿ ರೂಪಾಯಿ ಖರ್ಚಾಗಿದೆ 1979-80ನೇ ಸಾಲಿನಲ್ಲಿ ಕೃಷ್ಣ 73 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 70 ಕೋಟಿ ರೂಪಾಯಿ ಖರ್ಚಾಗಿದೆ. ಕಾವೇರಿ 26 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 30 ಕೋಟಿ ರೂಪಾಯಿ ಖರ್ಚಾಗಿದೆ 1980-81ನೇ ಸಾಲಿನಲ್ಲಿ ಕೃಷ್ಣಗೆ 70 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 64 ಕೋಟಿ ರೂಪಾಯಿ ಖರ್ಚಾಗಿದೆ ಕಾವೇರಿಗೆ 28 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಇದ್ದು 28 ಕೋಟಿ ರೂಪಾಯಿ ಖರ್ಚಾಗಿದೆ. 1981-82ನೇ ಸಾಲಿನಲ್ಲಿ ಕೃಷ್ಣಗೆ 71 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು 71 ಕೋಟಿ ರೂಪಾಯಿ ಖರ್ಚಾಗಿದೆ. ಕಾವೇರಿಗೆ 27 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು 28 ಕೋಟಿ ರೂಪಾಯಿ ಖರ್ಚಾಗಿದೆ 1982-83ರಲ್ಲಿ ಕೃಷ್ಣಗೆ 78 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು 65 ಕೋಟಿ ರೂಪಾಯಿ ಖರ್ಚಾಗಿದೆ. ಕಾವೇರಿ 41 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು 40 ಕೋಟಿ ರೂಪಾಯಿ ಖರ್ಚಾಗಿದೆ 1983-84ರಲ್ಲಿ ಕೃಷ್ಣಗೆ 82 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಮಾಡಿದ್ದು ಸುಮಾರು 70 ಕೋಟಿ ರೂಪಾಯಿ ಖರ್ಚಾಗಬಹುದು ಏಕೆಂದರೆ ಡಿಸೆಂಬರ್‌ವರೆಗೆ ಮಾತ್ರ ಲೆಕ್ಕ ಸಿಕ್ಕಿದ್ದು, ಇನ್ನು ಮುಂದೆ ಎಷ್ಟು ಆಗುತ್ತದೆಂದು ಹೇಳುವುದು ಕೃಷ್ಣಗೆ 82 ಕೋಟಿ ರೂಪಾಯಿ ಬಡ್ಜೆಟ್ ಪ್ರಾವಿಜನ್ ಹಾಗೂ ಕಾವೇರಿಗೆ ಬಡ್ಜೆಟ್ ಪ್ರಾವಿಜನ್ 46 ಕೋಟಿ ರೂಪಾಯಿಗಳು ಈ ವರ್ಷ ಕೃಷ್ಣಕ್ಕೆ 90 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಾವೇರಿಗೆ 65 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಳೆದ ವರ್ಷ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೆಲವು ಕಡೆ ಸ್ವಲ್ಪ ಕಡಿಮೆ ಆಗಬಹುದು. ಅಲ್ಲಿರತಕ್ಕಂಥ ತೊಂದರೆ ಆ ಭಾಗದಿಂದ ಬರತಕ್ಕಂಥ ಸದಸ್ಯರಿಗೆ ಗೊತ್ತಿರುತ್ತದೆ. ಕಬಿನಿ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡುತ್ತಿದಂಥ ಕಂಟ್ರಾಕ್ಟರುಗಳು ಬಿಟ್ಟು ಹೋಗಿದ್ದಾರೆ. ಅನೇಕ ಕಂಟ್ರಾಕ್ಟರುಗಳು ಆರ್‌ಬಿಟ್ರೇಷನ್‌ಗೆ ಹೋಗಿದ್ದಾರೆ. ಆರ್‌ಬಿಟ್ರೇಷನ್ ಆದಮೇಲೆ ಹೈಕೋರ್ಟಿಗೆ ಹೋಗಿದ್ದಾರೆ ಇದೆಲ್ಲಾ ತೊಂದರೆ ಇರುವುದರಿಂದ ಕೆಲಸ ಅಷ್ಟು ತ್ವರಿತಗತಿಯಲ್ಲಿ ನಡೆಯಲು ಸಾಧ್ಯವಾಗುತ್ತಿಲ್ಲ. ಮತ್ತೆ ರಾಜನ್‌ಕೊಲ್ಲೂರ್ ಟನಲ್ ಬಗ್ಗೆ ಹೇಳುವುದಾದರೆ ಈ ಸಲ ಅದನ್ನು ಮುಗಿಸುತ್ತೇವೆ. ಜೂನ್ ಕೊನೆಯವರೆಗೆ ನೀರನ್ನು ಹಾಯಿಸಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಇದರಲ್ಲಿ ಯಾವ ಚ್ಯುತಿ ಆಗಲಿಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಈಗ ಅಪ್ಪರ್ ಭದ್ರಾ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಿದ್ದೇವೆ. ಮತ್ತು ಈ ಸಲ ಕೆಲವು ಮಧ್ಯಮಾವಧಿ ಪ್ರಾಜೆಕ್ಟ್‌ಗಳನ್ನು ಹೊಸದಾಗಿ ಸೇರಿದ್ದೇವೆ. ಕೆಲವು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ಸ್‌ಗಳನ್ನೂ ಹೊಸದಾಗಿ ಸೇರಿಸಿದ್ದೇವೆ. ಆದರೆ ಇದರಲ್ಲಿ ಮೂಲಭೂತವಾಗಿ ವ್ಯತ್ಯಾಸವಿದೆ. ಸದಸ್ಯರಿಗೆ ಇದೆಲ್ಲಾ ಗೊತ್ತಿಲ್ಲದೆ ಇಲ್ಲ ಕೃಷ್ಣಾದ ಬಗ್ಗೆ ಈವತ್ತು ಯಾವ ರೀತಿಯಲ್ಲಿ ಡಿಸ್‌ಪ್ಯೂಟ್ ಇದೆಯೋ ಅದೇ ರೀತಿಯಲ್ಲಿ ಕಾವೇರಿ ಡಿಸ್‌ಪ್ಯೂಟ್ ಇದೆ. ಕೃಷ್ಣಾದಲ್ಲಿ ಎಲ್ಲಾ ಕೆಲಸ ತಡವಾಗಿ ಆಗುತ್ತಿದೆ. ಅದು ಆಗ ಕೂಡದು ಎಂದು ಹೇಳಿದ್ದಾರೆ. ಅದು ಆಗಗೊಡವುದಿಲ್ಲ. ಸದಸ್ಯರಿಗೆ ಎಷ್ಟು ತೀವ್ರವಾದ ಅಭಿಪ್ರಾಯವಿದೆಯೋ ಅಷ್ಟೇ ತೀವ್ರತೆ ನಮಗೂ ಇದೆ. ಕೃಷ್ಣಾ ಕಾವೇರಿ ವ್ಯಾಲಿಗೆ ನಾವು ಹೇಳಿದ ಪ್ರಕಾರವಾಗಿ ಕೊಡಬೇಕಾಗಿರುತ್ತದೆ, ಕೊಡುತ್ತೇವೆ. ಮತ್ತೆ ಎಲ್ಲಾ,

ಕೆಲಸವನ್ನು ಬೇಗ ಮುಗಿಸಬೇಕೆಂದೂ ಕೂಡ ಇದ್ದೇವೆ. ಅದರ ಬಗ್ಗೆ ಯಾರೂ ಸಂದೇಹವು ಪಡಬೇಕಾಗಿಲ್ಲ.

ಇನ್ನೂ ಕಾವೇರಿ ವಿಚಾರದಲ್ಲಿ ಹೇಳುವುದಾದರೆ ಕಾವೇರಿ ವಿಚಾರವನ್ನು ಸ್ಪಷ್ಟವಾಗಿ ಬಿಡಿಸಿ ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಬಿಡಿಸಿ ಹೇಳುವುದಕ್ಕೂ ಆಗುವುದಿಲ್ಲ. ಏತಕ್ಕೆಂದರೆ ನಾವು ಇಲ್ಲಿ ಏನು ಮಾತನಾಡಿದರೂ ಅದು ರಿಪೋರ್ಟ್ ಆಗುತ್ತದೆ. ಆದರಿಂದ ಬೇರೆ ಪರಿಣಾಮ ಆಗಬಹುದು. ಆದರೆ ಒಂದು ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಕಾವೇರಿ ಪ್ರಾಜೆಕ್ಟನ್ನು ಅತಿ ಶೀಘ್ರವಾಗಿ ಮುಗಿಸತಕ್ಕಂಥದು ಬಹಳ ಅಗತ್ಯವಿದೆ. ಅದಕ್ಕಾಗಿ ಹೋದವರ್ಷ 41 ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೇವೆ. ಈ ಸಲ 65 ಕೋಟಿ ರೂಪಾಯಿಗಳನ್ನು ಒದಗಿದ್ದೇವೆ. ಈ ವರ್ಷ ಇನ್ನೂ ಹೆಚ್ಚಿನ ಹಣ ಬರುತ್ತದೆಂದು ನಿಮಗೆ ಗೊತ್ತಿದೆ. ಮಾನ್ಯ ಮಂಚೇಗೌಡರು ಇದ್ದಾರೆ. ನೀರನ್ನು ಸ್ವಲ್ಪ ಬಿಟ್ಟರೆ ಅವರು ನಮ್ಮ ಹಿತಕ್ಕೆ ದಕ್ಕೆ ತಂದು ಕೊಡುತ್ತಿದ್ದಾರೆಂದು ಹಾಗೆ ಹೀಗೆ ಹೇಳುತ್ತಾರೆ. ಆದರೆ ಅಲ್ಲೂ ಕೂಡ ರೈತರ ಕಷ್ಟ ನನುಗೆ ಗೊತ್ತಿರುತ್ತದೆ. ಮುಖ್ಯವಾಗಿ ಈ ವಿಚಾರದ ಬಗ್ಗೆ ಮಾತುಕತೆ ನಡೆಯುತಾ ಇದೆ. ಈ ಎಲ್ಲ ದೃಷ್ಟಿಯಿಂದಲೂ ಮತ್ತು ರಾಜ್ಯದ ಹಿತದೃಷ್ಟಿಯಿಂದ ಹೆಚ್ಚು ಹಣವನ್ನು ಹಾಕಿ 2 ವರ್ಷಗಳಲ್ಲಿ ನೀರನ್ನು ಒದಗಿಸಲೇಬೇಕು ಎನ್ನುವುದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ನಮ್ಮ ಮಾನ್ಯ ಸದಸ್ಯರಲ್ಲಿ ಇಲ್ಲವೆಂದು ನಾನು ನಂಬಿದ್ದೇನೆ.

ಆಮೇಲೆ, ಮಾನ್ಯ ಅಧ್ಯಕ್ಷರೇ, ಅಗ್ರಿಕಲ್ಚರ್ ಮಾರ್ಕೆಟಿಂಗ್ ಸೆಸ್ ವಿಚಾರದಲ್ಲಿ ಮಾನ್ಯ ಮೊಯಿಲಿಯವರು ಸೆನಸೇಷನ್ ಉಂಟಾಗುವ ರೀತಿಯಲ್ಲಿ ಪ್ರಿವಿಲೇಜ್‌ಮೇಲೆ ಇದನ್ನು ತೆಗೆದುಕೊಂಡಿದ್ದಾರೆಂದು ಹೇಳಿ ಕೆಲವು ದಾಖಲಾತಿಗಳನ್ನು ಕೊಟ್ಟರು. ಈಗ ಮಾನ್ಯ ಸದಸ್ಯರಾದ ಮಾನ್ಯ ಬಂಗಾರಪ್ಪನವರು ಇಲ್ಲೇ ಇದ್ದಾರೆ ಹಾಗೂ ಮೊಯಿಲಿಯವರು ಇಲ್ಲೇ ಇದ್ದಾರೆ. 1982ನೇ ಇಸವಿಯಲ್ಲಿ ಇದೇ ಸಭೆಯಲ್ಲಿ ಅದಂಥ ನಡವಳಿಕೆಗಳನ್ನು ತೆಗೆದು ಅವರು ಹೇಳಿದ್ದನ್ನು ಓದಿದ್ದೇನೆ. ಮಾನ್ಯ ಬಂಗಾರಪ್ಪನವರು ಮಾನ್ಯ ಮೊಯಿಲಿಯವರ ಮೇಲೆ ಒಂದು ಚಾರ್ಜನ್ನು ಮಾಡಿದ್ದಾರೆ. ಈಗ ಅವರು ಬಹಳ ಹತ್ತಿರದ ಸ್ನೇಹಿತರು.

ಶ್ರೀ ಎಂ. ವೀರಪ್ಪಮೊಯಿಲಿ.—ಹಿಂದೆಯೂ ಕೂಡ ನಾವು ಸ್ನೇಹಿತರಾಗಿಯೇ ಇದ್ದೆವು. ಈಗಲೂ ಕೂಡ ಸ್ನೇಹಿತರಾಗಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಬದಲಾವಣೆಯಾಗುತ್ತಾ ಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಸ್ನೇಹಿತರು ಮೇಲುಗಡೆ ಇದ್ದಾರಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಸ್ನೇಹ ಅದು ಬೇರೇರೀತಿ. ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಒಂದು ಚಾರ್ಜ್ ಮಾಡಿದರು. ಯಾರೋ ಹೋಟೆಲ್‌ನಲ್ಲಿ ಬಂದಿದ್ದಾರೆ, ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಟೆಲಿಗ್ರಾಮ್ ಹೋಗಿದೆ ಎಂದು ಕಾಪೀಸ್ ಎಲ್ಲಾ ಪ್ರೊಡ್ಯೂಸ್ ಮಾಡಿದರು. ಸ್ವಚ್ಛವಾದ ರೀತಿಯಲ್ಲಿ ಹೇಳಿದರು 35 ಲಕ್ಷ ರೂಪಾಯಿ ಈಗ ಬಂದಿದೆ, ಇನ್ನೂ 68 ಲಕ್ಷ ರೂಪಾಯಿಗಳನ್ನು ತರಬೇಕೆಂದು ಸಂದೇಶ ಇದೆ ಎಂದು ಮಾನ್ಯ ಬಂಗಾರಪ್ಪನವರು ಮಾನ್ಯ ಮೊಯಿಲಿಯವರ ಮೇಲೆ ಆಪಾದನೆ ಮಾಡಿದರು, ಮತ್ತೆ ಜನಾರ್ಧನ ಹೋಟೆಲ್ ಬಗ್ಗೆ ಹೋದರು. ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಹೇಳುತ್ತೇನೆ. ನಮ್ಮ ಜನತಾ ಪಕ್ಷದ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಎರಡು ಪರ್ಸೆಂಟ್‌ನಿಂದ ಒಂದು ಪರ್ಸೆಂಟ್‌ಗೆ ಸೆಸ್ಸನ್ನು ಇಳಿಸುತ್ತೇವೆ. ಎಂದು. ಇದರಲ್ಲಿ ಏನೂ ಮುಚ್ಚು ಮರೆ ಇಲ್ಲ. ಇದರ ಹಿಸ್ಟ್ರೀಗೆ ಹೋಗುವುದಿಲ್ಲ. ಸುಪ್ರೀಂ ಕೋರ್ಟಿಗೆ ವ್ಯಾಪಾರಸ್ಥರು ಹೋದದ್ದು ನಿಜ. ಮೊದಲು ಒಂದು ಪರ್ಸೆಂಟ್ ರೈತರು ಏನು ಕೊಡುತ್ತಿದ್ದರು ಆ ಒಂದು ಪರ್ಸೆಂಟ್‌ನ್ನು ವ್ಯಾಪಾರಸ್ಥರೇ ಕೊಡಬೇಕಾಯಿತು. ಮತ್ತೆ ಇದು ತಿದ್ದುಪಡಿಯಾಗಿ ಎರಡು ಪರ್ಸೆಂಟನ್ನು ವ್ಯಾಪಾರಸ್ಥರೆ ಕೊಡಬೇಕೆಂದಾಯಿತು. ಆಗ ಸುಪ್ರೀಂಕೋರ್ಟಿಗೆ ಅಹವಾಲ್ ಹೋಗಿದ್ದಾರೆ. ಈವಾಗ ಏನಾಗಿದೆ ಎಂದರೆ ರಿಟ್ರಾಸ್ಫೆಕ್ಟೀವ್ ಎಫೆಕ್ಟೀವ್ ಕಾಯಿದೆ ತಿದ್ದುಪಡಿ ಮಾಡಬೇಕೆಂದು ಸೂಚನೆ ಆಗಿದೆ. ಎರಡು ಪರ್ಸೆಂಟ್ ಏನು ಹಾಕಿದ್ದಾರೆ ಅದನ್ನು ವಸೂಲು ಮಾಡಕೂಡದು ಎಂದು ಹೇಳಿದ್ದಾರೆ. ಆವಾಗ ಟ್ರೇಡರ್ಸ್ ಮೇಲೆ ಹಾಕಿದರೆ, ಅದು ಲಾಭದ ಮೇಲೆ ಹೋದರೂ, ರೈತರ ಮೇಲೆ ಹಾಕಿದಂತಾಗುತ್ತದೆ. ಆದ್ದರಿಂದ ಕಡಿಮೆ ಮಾಡಿದ ಉದ್ದೇಶ ಏನೆಂದರೆ ಕೇವಲ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿದ್ದು ಅಷ್ಟೇ ಅಲ್ಲ ಮುಖ್ಯವಾಗಿ ಕಾಡಾ ಪ್ರದೇಶಗಳಲ್ಲಿ ಬಹಳಷ್ಟು ವ್ಯವಸಾಯದ ಉತ್ಪಾದನೆ ಸಾಮಾನುಗಳ ಮೇಲೆಯೂ ಕೂಡ ದುಡ್ಡು ಹೋಗುತ್ತಿದೆ. ಮುಖ್ಯವಾಗಿ ನಾವು ಯಾವ ಉದ್ದೇಶದಿಂದಲೂ ಮಾಡಿಲ್ಲ ಎರಡು ಪರ್ಸೆಂಟ್ ಮಾಡಿದ ಉದ್ದೇಶ ಇಷ್ಟೇ. ಇದರಿಂದಾಗಿ ಹೆಚ್ಚು ಕಡಿಮೆ

ನಮ್ಮ ಕೈ ಕಚ್ಚಿದೆ ಎಂದು ಹೇಳುತ್ತೇನೆ. ಅನೇಕ ಮಾರ್ಕೆಟ್ ಸಮಿತಿಗಳು ಒಳ್ಳೆಯ ಸ್ಥಿತಿಯಲ್ಲಿಲ್ಲ ಇಡೀ ದೇಶದಲ್ಲಿಯೇ ಹರಿಯಾಣ ಪಂಜಾಬ್ ಈ ಎರಡು ರಾಜ್ಯಗಳನ್ನು ಬಿಟ್ಟರೆ ಬೇರೆ ಯಾವ ರಾಜ್ಯಗಳಲ್ಲೂ ಶೇಕಡಾ ಎರಡರಷ್ಟು ಸೆಸ್ ಇಲ್ಲ. ಅನೇಕ ಕಡೆ ಓದಿದ್ದೇವೆ. ಶೇಕಡಾ ಒಂದುರಷ್ಟು ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಶೇಕಡ ಅರ್ಧದಷ್ಟು ಅಂದರೆ 0.5 ಪರ್ಸೆಂಟ್ ಇದೆ ಒಂದ್ವೊ ಸಮಯ ಲೀಕ್ ಆಯಿತು ಎಂದು ಇಟ್ಟುಕೊಂಡು ಆರ್ಗುಮೆಂಟ್ ಮಾಡಿದರೂ ಕೂಡ ಯಾರಿಗೆ ಲಾಭ ವಾಗುತ್ತದೆ. ಈಗ ಪೆಟ್ರೋಲ್ ಮೇಲೆ 15 ಪರ್ಸೆಂಟ್ ಏರಿಸಿದ್ದಾರೆ. ಲೀಕ್ ಆಗಿ ಕೆಲವು ಜನ ಒಂದು ಲಕ್ಷ ಲೀಟರ್ ಪೆಟ್ರೋಲ್ ಸಂಗ್ರಹಣೆ ಮಾಡಿಕೊಂಡು ಇಟ್ಟುಕೊಂಡರೂ ಆ ಅಪಾದನೆ ಸತ್ಯವಾದುದು ನನ್ನ ನಿರ್ಲಕ್ಷತನದಿಂದ, ಉದ್ದೇಶ ಪೂರ್ವಕವಾಗಿ ಯಾರಿಗಾದರೂ ಸಂಬಂಧಪಟ್ಟವರಿಗೆ, ಸ್ನೇಹಿತರಿಗೆ ಲಾಭ ಮಾಡಲಿಕ್ಕೆ ಯಾರಿಗಾದರೂ ಗುಪ್ತವಾಗಿ ತಿಳಿಸಿದರೆ ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತಿತ್ತು ಇದರಿಂದ ಯಾರಿಗೂ ಲಾಭವಾಗುವುದಿಲ್ಲ. ನಾನು ರಿಟ್ರಾಸ್‌ಫೆಕ್ಟೀವ್ ಎಫೆಕ್ಟ್ ಕೊಟ್ಟಿಲ್ಲ ಇದು ಏಪ್ರಿಲ್ ಒಂದರಿಂದ ಜಾರಿಗೆ ಬರತಕ್ಕಂಥದ್ದಾಗಿರುತ್ತದೆ ಆಮೇಲೆ ಸೇಲ್ಸ್‌ಟ್ಯಾಕ್ಸ್ ಬಗ್ಗೆ ಒಂದೇ ಒಂದು ಮಾತನ್ನು ಹೇಳಬೇಕಾಗಿದೆ ಈ ಸಲ ನಾನು ಬಹಳ ಲಕ್ಷ್ಯಪೂರ್ವಕವಾಗಿ ಪ್ರತಿಯೊಂದು ಐಟಮನ್ನೂ ನೋಡಿ ರ್‍ಯಾಷನ್‌ಲೈಜ್ ಮಾಡುವ ನಿರ್ಣಯವನ್ನು ತೆಗೆದುಕೊಂಡಿದ್ದೇನೆ ಈ ಮೊದಲು 19 ತರಹದ ದರಗಳಿದ್ದವು. ಇವುಗಳ ಮೇಲೆ ಒಂದು ಪರ್ಸೆಂಟನಿಂದ ಹಿಡಿದು 30 ಪರ್ಸೆಂಟ್ ವರೆಗೆ ತೆರಿಗೆ ಇತ್ತು ಈಗ ಇದನ್ನೆಲ್ಲಾ ತೆಗೆದು 19 ರಿಂದ 11ಕ್ಕೆ ಇಳಿಸಿದ್ದೇನೆ ಅಷ್ಟೇ ಅಲ್ಲ, 15 ವಸ್ತುಗಳ ಮೇಲೆ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದೇನೆ ಅಥವಾ ಬಹಳ ಕಡಿಮೆ ಮಾಡಿದ್ದೇನೆ ಮಾನ್ಯ ಆಚಾರ್ ಅವರು ಅಕ್ಕಿ ಮೇಲಿನ ತೆರಿಗೆಯನ್ನು ಏತಕ್ಕೆ ಕಡಿಮೆ ಮಾಡಿಲ್ಲ ಎಂದು ಕೇಳುತ್ತಿದ್ದರು ಈಗ ನಾವು ಧಾನ್ಯಗಳ ಮತ್ತು ದ್ವಿದಳ ಧಾನ್ಯಗಳ ಮೇಲಿನ ತೆರಿಗೆಯ ಮೂಲ ದರವನ್ನು ಶೇಕಡಾ 4 ರಿಂದ

2-00 p.m.

ಶೇಕಡ 2ಕ್ಕೆ ಇಳಿಸಿರುವುದರಿಂದ ಇದರಲ್ಲಿಯೇ ಅಕ್ಕಿ, ಭತ್ತ ಮತ್ತು ಗೋಧಿ ಬರುತ್ತದೆ.

ಶ್ರೀ ವಿ. ಧನಂಜಯ ಕುಮಾರ್ —ಇದನ್ನು ಪೂರ್ತಿಯಾಗಿ ತೆಗೆಯಬೇಕು

ಶ್ರೀ ರಾಮಕೃಷ್ಣ ಹೆಗಡೆ – ಪೂರ್ತಿ ತೆಗೆಯಹಾಕುವುದು ಸಾಧ್ಯವಿದ್ದರೆ ಈ ಸಲವೇ ಮಾಡುತ್ತಿದ್ದೆ. ಆದರೆ ನಿಮಗೆ ಆಸ್ಪತ್ರೆ ಬೇಕು ಕಾಲೇಜು ಬೇಕು, ಹೆಚ್ಚು ಮನೆಗಳು ಆಗಬೇಕು. ಆದರಿಂದ ಇದನ್ನು ಒಂದೇ ಸಲ್ಲ ತೆಗೆದುಹಾಕುವುದಕ್ಕೆ ಸಾಧ್ಯವಾಗುತ್ತದೆಯೇ ? ಮುಂದಿನ ಸಲ ಸಾಧ್ಯವಾದರೆ ತೆಗೆದುಹಾಕಬಹುದು. ಈ ಸಲ ಅದಷ್ಟೂ ಮಟ್ಟಿಗೆ ಬಡವರ ಮೇಲೆ ಬೀಳತಕ್ಕಂಥ ತೆರಿಗೆಯನ್ನು ಕಡಿಮೆ ಮಾಡಬೇಕು ಎಂಬತಕ್ಕಂಥ ವಿಚಾರ ಹಾಗೂ ಧೋರಣೆಯನ್ನಿಟ್ಟುಕೊಂಡು ರ್‍ಯಾಷನ್‌ಲೈಜ್ ಮಾಡಿದ್ದೇನೆ. ಈ ರೀತಿ ರ್‍ಯಾಷನಲೈಜ್ ಮಾಡುವಾಗ ಸಾಬೂನಿನ ಚೂರುಗಳು, ಸಾಬೂನು ಪುಡಿ ಹಾಗೂ ಒಗೆಯುವ ಸಾಬೂನುಗಳ ಮೇಲಿನ ತೆರಿಗೆಯನ್ನು 6 ರಿಂದ 8 ಪರ್ಸೆಂಟ್ ಹೆಚ್ಚು ಮಾಡಲಾಗಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.--ಆದರೆ ಗಣಕ ಯಂತ್ರಗಳ ಮೇಲಿನ ತೆರಿಯನು ಇಳಿಸಲಾಗಿದೆ

ಶ್ರೀರಾಮಕೃಷ್ಣ ಹೆಗಡೆ.---ಇಲ್ಲದಿದ್ದರೆ ವ್ಯಾಪಾರ ಡೈವರ್ಷನ್ ಆಗುತ್ತದೆ. ಈ ಹಿಂದೆ ಚಾಸಿಗಳ ಮೇಲಿನ ತೆರಿಗೆ 15 ಪರ್ಸೆಂಟ್ ಇದ್ದಾಗ ನಮ್ಮ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಅವರೇ ಇಲ್ಲಿ ತೆರಿಗೆ ಜಾಸ್ತಿ ಎಂದು ಕೇರಳಾ ಹಾಗೂ ಪಾಂಡಿಚೇರಿಗೆ ಹೋಗಿ ಪರ್ಚೇಸ್ ಮಾಡುತ್ತಿದ್ದರು. ಇದು ಮಾನ್ಯ ಹೊಯ್ಲಿ ಅವರಿಗೆ ಗೊತ್ತಿರಬಹುದು. ಈ ಕಾರಣದಿಂದ ನಾವು ಇದರ ಮೇಲಿನ ತೆರಿಗೆಯನ್ನು ಇಳಿಸಬೇಕಾಯಿತು. ಅದೇ ರೀತಿ ಕಾರಿನ ಮೇಲೆ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ನಮ್ಮ ಉದ್ದೇಶವಲ್ಲವಾದರೂ ಕೂಡ, ಕಡಿಮೆ ಮಾಡದಿದ್ದರೆ ನಮಗೆ ಸಿಗುವಂತಹ ತೆರಿಗೆಯೂ ಕೂಡ ಸಿಗುವುದಿಲ್ಲ. ತೆರಿಗೆ ಕಡಿಮೆ ಇರುವ ಕಡೆ ಜನರು ಹೋಗಿ ಖರೀದಿ ಮಾಡುತ್ತಾರೆ. ಆದ್ದರಿಂದ ನಾವು ಕಾರಿನ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕೆಂದಿದ್ದೇವೆ ಈಗ ನಾವು ಯಾವ ಸೋಪುಗಳು ಹಾಗೂ ಸೋಪಿನ ಪುಡಿಗಳ ಮೇಲೆ ತೆರಿಗೆ ಜಾಸ್ತಿ ಮಾಡಿದ್ದೇವೆ. ಇಂಥಾದ್ದನ್ನು ಹಳ್ಳಿಯ ಬಡ ಜನರು ಉಪಯೋಗಿಸುವುದಿಲ್ಲ ಗ್ರಾಮ ಕೈಗಾರಿಕೆಗಳು ತಯಾರು ಮಾಡುವಂತಹ ಸೋಪುಗಳ ಮೇಲೆ ತೆರಿಗೆ ಇಲ್ಲ. ಗ್ರಾಮ ಮಟ್ಟದಲ್ಲಿರುವ ಸಣ್ಣ ಸಣ್ಣ ಕೈಗಾರಿಕಾ ಘಟಕಗಳಲ್ಲಿ ತಯಾರು ಮಾಡುವಂತಹ ಸೋಪುಗಳನ್ನು ಹಳ್ಳಿಯ ಬಡ ಜನರು ಉಪಯೋಗ ಮಾಡುತ್ತಾರೆ. ಹಿಂದೂಸ್ಥಾನ್ ಲೀವರ್ ಕಂಪನಿಯವರು, ಟಾಟಾ ಕಂಪನಿಯವರು ಹಾಗೂ ಇತರೇ ಬೇರೆ ಬೇರೆ ದೊಡ್ಡ ದೊಡ್ಡ ಕಂಪನಿಯವರು ತಯಾರು ಮಾಡುವಂತಹ ಸೋಪುಗಳನ್ನು ನಾವು ಉಪಯೋಗಿಸುತ್ತೇವೆ ಹಾಗೂ ಅಪ್ಪರ್-ಮಿಡಲ್-ಕ್ಲಾಸ್‌ನವರು ಉಪಯೋಗಿಸು

ತ್ತಾರೆ. ಇಂತಹ ಸೋಪುಗಳ ಮೇಲೆ ದರ ಜಾಸ್ತಿ ಮಾಡಿದ್ದು ನಿಜ ಈ ಹೊರೆಯನ್ನು ಸಹಿಸಿಕೊಳ್ಳುವ ಶಕ್ತಿ ಈ ಜನರಿಗಿದೆ. ಅದೇ ರೀತಿ ಬಡಬಗ್ಗರು ಉಪಯೋಗ ಮಾಡುವಂತಹ ಎಣ್ಣೆಯ ಮೇಲೆ ಎರಡು ಪರ್ಸೆಂಟ್ ತೆರಿಗೆ ಕಡಿಮೆ ಮಾಡಿದ್ದೇವೆ. ಮಾನ್ಯ ಮೊಯ್ಲಿ ಅವರು ಮತ್ತು ನಾವು ಉಪಯೋಗ ಮಾಡುವಂತಹ ಡಾಲ್ಡಾ ಹಾಗೂ ಪೋಸ್ಟ್‌ಮ್ಯಾನ್ ಬ್ರಾಂಡ್ ಎಣ್ಣೆಗಳ ಮೇಲೆ ಸ್ವಲ್ಪ ದರ ಹೆಚ್ಚು ಮಾಡಿದ್ದೇವೆ ನಾನು ಪ್ರತಿಯೊಂದನ್ನೂ ಸಹ ಯೋಚನೆ ಮಾಡಿ

ಶ್ರೀ ಮಲ್ಲಾರಿಗೌಡ ಪಾಟೀಲ್.—ಬೆಲ್ಲದ ಮೇಲೆ ತೆರಿಗೆ ಜಾಸ್ತಿ ಮಾಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಬೆಲ್ಲದ ಮೇಲಿನ ತೆರಿಗೆಯನ್ನು ಮಲ್ಟಿಪಾಯಿಂಟ್‌ನಿಂದ ಸಿಂಗಲ್ ಪಾಯಿಂಟ್‌ಗೆ ಇಳಿಸಲಾಗಿದೆ. ಇದು ಸ್ವಲ್ಪ ಜಾಸ್ತಿ ಇರಬಹುದು ಅದಕ್ಕೆ ಒಂದು ಕಾರಣವೂ ಇದೆ. ಏನೆಂದರೆ, ಅನೇಕಸಲ ಸಕ್ಕರೆ ಕಾರ್ಖಾನೆಗೆ ಕಮಿಟಿ ಆದಂಥ ಕಬ್ಬಿನಿಂದ ಕೆಲವರು ಬೆಲ್ಲ ಮಾಡುತ್ತಾರೆ. ಇದರಿಂದ ಕಳ್ಳಭಟ್ಟಿ ಸಾರಾಯಿ ತಯಾರಾಗುವುದು ಹೆಚ್ಚಾಗುತ್ತದೆ. ಇದನ್ನು ತಪ್ಪಿಸಲು ತೆರಿಗೆ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಇದು ಅಂತಹ ಜಾಸ್ತಿ ಏನೂ ಆಗುವುದಿಲ್ಲ ಇದನ್ನು ಕಡಿಮೆ ಮಾಡಲು ಯಾವ ಕಾರಣವೂ ಇಲ್ಲ. ಇಂತಹ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಎಲ್ಲ ರೀತಿಯ ಸಾಧಕ ಭಾಧಕಗಳನ್ನು ನೋಡಿ ಬಡ ಜನರ ಮೇಲೆ ಹೆಚ್ಚು ಭಾರ ಬೀಳಬಾರದೆಂಬ ದೃಷ್ಟಿಯಿಂದ ಸೇಲ್-ಟ್ಯಾಕ್ಸ್‌ನಲ್ಲಿ ನಾನು ಕೆಲವು ವ್ಯತ್ಯಾಸ ಮಾಡಿದ್ದೇನೆ ಈಗಾಗಲೇ ಹೇಳಿದಂತೆ ಒಂದೆರಡು ವಿಚಾರಗಳಲ್ಲಿ ಸ್ವಲ್ಪ ಕಡಿಮೆ ಮಾಡತಕ್ಕಂಥ ಪ್ರಸಂಗ ಬಂದರೆ, ಅದನ್ನು ಮಾಡುವುದಕ್ಕೆ ಯೋಚನೆ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ ಅಡಿಕೆ ಮತ್ತು ಗೋಡಂಬಿ ಮೇಲಿನ ತೆರಿಗೆಯನ್ನು ಇಳಿಸಿರುವ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ ಗೋಡಂಬಿ ಉತ್ಪಾದಕರು ನನ್ನ ಹತ್ತಿರ ಬಂದು ಇವುಗಳ ಮೇಲಿನ ತೆರಿಗೆಯ ದರ ಕೇರಳಾ ರಾಜ್ಯಕ್ಕಿಂತ ಇಲ್ಲಿ ಹೆಚ್ಚಿದೆ. ಇಲ್ಲಿ ಕಡಿಮೆ ಮಾಡದಿದ್ದರೆ ಇವುಗಳಿಗೆ ಸಂಬಂಧಪಟ್ಟ ಇಂಡಸ್ಟ್ರಿಗಳೆಲ್ಲಾ ಹಾಳಾಗುತ್ತವೆಂದು ಹೇಳಿದರು. ಅದಕ್ಕಾಗಿ ಕಡಿಮೆ ಮಾಡಲಾಯಿತು. ಅದೇ ರೀತಿ ಅಡಿಕೆ ಕೂಡ ಹೆಚ್ಚಿನ ಪ್ರಮಾಣದಲ್ಲಿ ಹೊರಗಡೆ ಹೋಗುತ್ತಿದೆ. ಇದನ್ನು ತಪ್ಪಿಸಲು ಈಗ ಕ್ಯಾಂಪ್ಕೋದವರಿಗೆ ಏನು ಅನುಕೂಲ ಒದಗಿಸಿಕೊಟ್ಟಿದ್ದೇವೆ. ಅದನ್ನೇ ಬೇರೆ ಕಡೆಗೂ ವಿಸ್ತರಣೆ ಮಾಡಿದ್ದೇವೆಯೋ ಹೊರತು ವಿಶೇಷವಾಗಿ ಏನನ್ನೂ ಮಾಡಿಲ್ಲ.

ಇನ್ನು ಮಾನ್ಯ ಆಚಾರ್ಯ ಅವರು ಕೆಲವು ಪ್ರತ್ಯೇಕವಾದ ಸೂಚನೆಗಳನ್ನು ಮಾಡಿದ್ದಾರೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಹಾಗೂ ವಿದ್ಯುತ್ ಉತ್ಪಾದನಾ ಯೋಜನೆಗಳು ಯಾವುದೇ ಹಣದ ಅಡಚಣೆಯಿಂದ ನಿಲ್ಲಬಾರದೆಂದು ಸಲಹೆ ಮಾಡಿದ್ದಾರೆ ಪವರ್ ಪ್ರಾಜೆಕ್ಟ್‌ಗಳಿಗೆ ಎಂದೆಂದಿಗೂ ಹಣದ ಕೊರತೆಯಾಗುವುದಿಲ್ಲವೆಂಬ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ನೀರಾವರಿ ಯೋಜನೆಗಳಿಗೆ ಎಷ್ಟು ಹೆಚ್ಚು ಹಣ ಒದಗಿಸುವುದಕ್ಕೆ ಸಾಧ್ಯವಿದೆಯೋ ಅಷ್ಟೂ ಸಹ ಒದಗಿಸಿದ್ದೇವೆ. ಆಮೇಲೆ ದೊಡ್ಡ ಮೂರು ಜಿಲ್ಲೆಗಳಾದ ಧಾರವಾಡ, ಬಿಜಾಪುರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳನ್ನು ವಿಂಗಡಿಸಿ ಹೊಸದಾಗಿ ಬಾಗಲಕೋಟೆ, ಗದಗ್ ಹಾಗೂ ಉಡುಪಿ ಜಿಲ್ಲೆಗಳನ್ನು ಮಾಡಲು ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ.

ಶ್ರೀ ಪಂಪಾಪತಿ.—ದಾವಣಗೆರೆಯನ್ನು ಒಂದು ಜಿಲ್ಲೆಯನ್ನಾಗಿ ಮಾಡಬೇಂದು ವಾಸುದೇವರಾವ್ ಕಮಿಟಿವರದಿಯಲ್ಲಿ ಶಿಫಾರಸ್ ಮಾಡಲಾಗಿದೆ. ಅ ವಿಚಾರ ಏನಾಯಿತು ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಒಂದು ಕಮಿಟಿ ಮಾಡುತ್ತೇವೆಂದು ಘೋಷಣೆ ಮಾಡಿದ್ದೇವೆ. ಈ ಹಿಂದೆ ನಮ್ಮ ಸರ್ಕಾರವಿದ್ದಾಗ ವಾಸುದೇವರಾವ್ ಕಮಿಟಿಯನ್ನು ರಚಿಸಲಾಗಿತ್ತು. ಆದರೆ ಅದರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಈಗ ಹೊಸ ಸಬ್-ಡಿವಿಜನ್‌ಗಳಾಗಬೇಕು, ಹೊಸ ತಾಲ್ಲೂಕ್‌ಗಳಾಗಬೇಕು ಎಂದು ಅನೇಕ ಬೇಡಿಕೆಗಳು ಬಂದಿವೆ. ಈಗಿರುವಂತಹ ಕೆಲವು ತಾಲ್ಲೂಕ್‌ಗಳಲ್ಲಿ ಜನಸಂಖ್ಯೆ ಬಹಳ ಹೆಚ್ಚಿರುವುದರಿಂದ ಹಾಗೂ ವಿಸ್ತಾರ ಕೂಡ ಬಹಳ ಹೆಚ್ಚಿರುವುದರಿಂದ ಆಡಳಿತ ನಡೆಸುವುದು ಕಷ್ಟವಾಗುತ್ತದೆಂಬ ಕಾರಣದಿಂದ ಈ ಬಗ್ಗೆ ಪರಿಶೀಲನೆ ಮಾಡಿ ಒಂದು ವರದಿ ಕೊಡಲು ನಾವು ಏನು ಒಂದು ಕಮಿಟಿ ರಚನೆ ಮಾಡುತ್ತೇವೆ, ಆ ಕಮಿಟಿಯವರು ಕೇವಲ ಜಿಲ್ಲೆಗಳ ಬಗ್ಗೆ ಅಷ್ಟೇ ಅಲ್ಲ, ಕೆಲವು ಸಬ್-ಡಿವಿಜನ್‌ಗಳನ್ನು ಮತ್ತು ಕೆಲವು ತಾಲ್ಲೂಕ್‌ಗಳನ್ನು ಯಾವ ರೀತಿ ಪುನರ್ವಿಂಗಡಣೆ ಮಾಡಬೇಕೆಂಬ ಬಗ್ಗೆ ಅದಷ್ಟೂ ಬೇಗ ಒಂದು ತಾತ್ಕಾಲಿಕವಾದಂಥ ವರದಿ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಆಮೇಲೆ ಅಧ್ಯಾಪಕರ ನಿವೃತ್ತಿ ವಯಸ್ಸನ್ನು 58ಕ್ಕೆ ಹೆಚ್ಚು ಮಾಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ ಮೋಟಾರ್ ವಾಹನಗಳ ತೆರಿಗೆಯಿಂದ ಬರುವ ಆದಾಯದಲ್ಲಿ ಶೇಕಡ ಹತ್ತರಷ್ಟು ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಉಸ್ತು

ವಾರಿ ಅನುದಾನವಾಗಿ ನೀಡಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ಇಡೀ ಗೊತ್ತಿರುವಂತೆ ದೇಶದಲ್ಲಿಯೇ ಪ್ರಥಮ ಬಾರಿಗೆ ಲೋಕಲ್ ಬಾಡೀಸ್ ಫೈನಾನ್ಸ್ ಕಮಿಷನ್ ಎಂದು ಮಾಡಿದ್ದೇನೆ. ಈ ರೀತಿ ದೇಶದಲ್ಲಿ ಎಲ್ಲಿಯೂ ಮಾಡಿಲ್ಲ. ಆದ್ದರಿಂದ ಇದರ ಕೀರ್ತಿ ನನಗೆ ಸಲ್ಲಬೇಕು. ಈ ಕಮಿಷನ್ ಅವರು ಈಗ ಕೆಲಸ ಮಾಡುತ್ತಿದ್ದಾರೆ. ಅವರು ಈ ಬಗ್ಗೆ ಏನು ಶಿಫಾರಸ್ ಕೊಡುತ್ತಾರೋ, ಅದಕ್ಕೆ ಸಂಪೂರ್ಣ ಮಹತ್ವ ಕೊಟ್ಟು ಅದರ ಮೇಲೆ ಸರ್ಕಾರ ಕ್ರಮ ಕೈಕೊಳ್ಳುತ್ತದೆ. ಪ್ರವೇಶ ತೆರಿಗೆಯಲ್ಲಿ ಒಂದು ಪಾಲನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುವಂತಹ ವಿಚಾರ ಕೂಡ ಇದರಲ್ಲಿಯೇ ಬರುತ್ತದೆ. ಪುರಸಭೆಗಳ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲವೆಂದು ಮಾನ್ಯ ಆಚಾರ್ಯ ಅವರು ಹಾಗೂ ಇನ್ನೂ ಅನೇಕ ಮಾನ್ಯ ಸದಸ್ಯರು ನನ್ನ ಹತ್ತಿರ ಅನೇಕ ಸಲ ಬಂದು ಹೇಳಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಗೆ 9 ಕೋಟಿ ರೂಪಾಯಿಗಳಷ್ಟು ವಿದ್ಯುಚ್ಛಕ್ತಿ ಬಾಕಿಯನ್ನು ಪುರಸಭೆಗಳು ಕೊಡಬೇಕಾಗಿದೆ.

ಇನು ಮಾನ್ಯ ವಿರೋಧ ಪಕ್ಷದ ನಾಯಕರು ವಿದ್ಯುಚ್ಛಕ್ತಿ ಮಂಡಲಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ದೊಡ್ಡ ದೊಡ್ಡ ಕಂಪನಿಗಳಿಂದ ವಿದ್ಯುಚ್ಛಕ್ತಿಯ ಹಣ ಬರಬೇಕಾಗಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ರಂಡೂರು ಕಂಪನಿಯವರು ಸರ್ಕಾರಕ್ಕೆ ವಿದ್ಯುಚ್ಛಕ್ತಿಯ ಬಾಬ್ತು ಸುಮಾರು 2 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ. ಇನ್ನು ಕೆಲವಾರು ಕಾರ್ಖಾನೆಗಳಿಂದ ವಿದ್ಯುಚ್ಛಕ್ತಿ ಬಾಕಿ ಹಣ ಕೊಡಬೇಕಾಗಿದೆ. ಈಗ ನಾವು ಅವರು ಬಾಕಿ ಹಣವನ್ನು ಕೊಡಲಿಲ್ಲವೆಂದು ಹೇಳಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿದರೆ ಅಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ತೊಂದರೆಯಾಗುತ್ತದೆ. ಅಲ್ಲಿ ಉತ್ಪಾದನೆ ಕೂಡ ಬಹಳ ಕಡಿಮೆಯಾಗುತ್ತದೆ. ಇದನ್ನೆಲ್ಲಾ ಯೋಚನೆ ಮಾಡಿ ಸರ್ಕಾರದವರು ಅವರಿಂದ ಅದಷ್ಟು ಬೇಗ ಬರಬೇಕಾದಂಥ ಬಾಕಿ ಹಣವನ್ನು ವಸೂಲು ಮಾಡಲು ಸೂಕ್ತ ಕ್ರಮ ತೆಗೆದುಕೊಂಡಿದೆ. ಇನ್ನು ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ವಿ. ಎಸ್. ಆಚಾರ್ಯರವರು ಮಾತನಾಡುತ್ತಾ ಕೆಲವಾರು ಸಲಹೆ ಮತ್ತು ಸೂಚನೆಗಳನ್ನು ಮಾಡಿದ್ದಾರೆ. ಅವರು ಕೊಟ್ಟಂತಹ ಸಲಹೆಗಳನ್ನು ಸರ್ಕಾರ ಸೂಕ್ತವಾಗಿ ಪರಿಶೀಲನೆ ಮಾಡಿ, ಕಾರ್ಯತತ್ಪರರಾಗಲು ಯೋಚನೆ ಮಾಡುತ್ತೇವೆ. ಮತ್ತೆ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಈಗ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಮತ್ತೇ ನಮ್ಮ ಸರ್ಕಾರದವರು ಎಕಾನಮಿಕ್ ಸರ್ವೆಯನ್ನು ಮಾಡಿಸುತ್ತಿದ್ದೇವೆ. ಈಗ ನಮ್ಮ ಗ್ರಾಸ್ ನಾಷನಲ್ ಪ್ರಾಡಕ್ಟ್ 100ಕ್ಕೆ 17 ಪರ್ಸೆಂಟ್ ಇದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ವಿ. ಎಸ್. ಆಚಾರ್ಯರವರು ಕೊಟ್ಟಿರತಕ್ಕಂಥ ಸಲಹೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಮಿಕ್ಕ ಸದಸ್ಯರು ಕೊಟ್ಟ ಸಲಹೆಗಳನ್ನು ಬಿಟ್ಟು ಬಿಡುವಂತೆ ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಹಾಗೇ ಅಲ್ಲ......

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ಮಳೆ ಇಲ್ಲದ್ದೆ ಜನರು ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ನಮ್ಮ ಜಿಲ್ಲೆಗೆ ಏನಾದರೂ ಸಹಾಯ ಮಾಡುವಂಥ ಚಿಂತನೆಯನ್ನು ಮಾಡಿದ್ದಾರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ನಾಯಕರಿಗೆ ಇಷ್ಟೊಂದು ದೊಡ್ಡ ಧ್ವನಿ ಇದೆಯೆಂದು ನನಗೆ ಈಗಲೇ ಗೊತ್ತಾಗಿದ್ದು. ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಪರ್ ಕ್ಯಾಪಿಟಾ ಇನ್‌ಕಮ್ ಶೇಕಡ 17 ಪರ್ಸೆಂಟ್ ಇದೆ. ನಮ್ಮ ಪರ್ ಕ್ಯಾಪಿಟಾ ಇನ್‌ಕಮ್ ಹೆಚ್ಚಾಗಿಲ್ಲ. ಆದರೆ ನಮ್ಮ ಫರ್ ಕ್ಯಾಪಿಟೋರಿಯಲ್ ಟರ್ಮ್ಸ್‌ನಲ್ಲಿ ತೆಗೆದುಕೊಂಡರೆ ನಾವು ಇಡೀ ಪ್ರಪಂಚದಲ್ಲಿಯೇ 11ನೇ ಸ್ಥಾನವನ್ನು ಪಡೆದಿದ್ದೇವೆ. ಮತ್ತೆ ನಮ್ಮ ಪರ್ ಕ್ಯಾಪಿಟಾ ಇನ್‌ಕಮ್‌ನಲ್ಲಿ 121ನೇ ಸ್ಥಾನದಲ್ಲಿ ಇದ್ದೇವೆ. ಇಲ್ಲಿಯವರೆಗೂ ನಾವು ನಮ್ಮ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚು ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಕೂಡ ನಾವು ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿಲ್ಲ. ಇಷ್ಟು ಹೇಳಿ ಇವತ್ತಿನ ದಿವಸ ನಮ್ಮ ರಾಷ್ಟ್ರದ ಉಪರಾಷ್ಟ್ರಪತಿಗಳು ಬೆಂಗಳೂರಿಗೆ ಬರುವವರಿದ್ದಾರೆ. ಆದ್ದರಿಂದ ನಾನು ಅಲ್ಲಿಗೆ ಹೋಗಬೇಕಾಗಿದೆ. ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ಸ್ ಹೆಚ್ಚು ಕೇಳಬಾರದೆಂದು ನನ್ನ ನಮ್ರತೆಯ ಪ್ರಾರ್ಥನೆ. ಇಷ್ಟು ಹೇಳಿ ನಾನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೌಸಿಂಗ್ ಬಗ್ಗೆ ಕೆಲವಾರು ಮಾಹಿತಿಗಳನ್ನು ಕೊಟ್ಟರು. ಅದು ಅವರ ಬಜೆಟ್

ಭಾಷಣದ 23ನೇ ಪುಟದಲ್ಲಿ 83-84ನೇ ಸಾಲಿನ ಬಡ್ಜೆಟ್ ಮಾತ್ರ ಕೊಟ್ಟಿದ್ದಾರೆ ಆದರೆ ಅವರು ಇನ್ನು ಕೆಲವಾರು ಫಿಗರ್ಸ್ ಹೇಳಿದ್ದಾರೆ. ಅವರು ಹೇಳಿದ ಫಿಗರ್ಸ್‌ನಲ್ಲಿ ಸ್ವಲ್ಪ ತಪ್ಪು ಇದೆ. ಅದನ್ನು ತಾವು ನೋಡಿ ನನಗೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. 1980-81 ರಲ್ಲಿ ಬರೀ 5 ಕೋಟಿ ರೂಪಾಯಿಗಳು ಖರ್ಚು ಮಾಡಲಾಗಿದೆ ಎಂದು ಹೇಳಿದರು ಮತ್ತೆ ಆಗ ನಾವು ಖರ್ಚು ಮಾಡಿದ ತಕ್ಕಂಥ ಹಣ 9.35 ಕೋಟಿ ರೂಪಾಯಿಗಳು ಅದೇ ರೀತಿಯಲ್ಲಿ 81-82ನೇ ಸಾಲಿನಲ್ಲಿ 10.12 ಕೋಟಿ ರೂಪಾಯಿಗಳು ಮತ್ತೆ 82-83ನೇ ಸಾಲಿನಲ್ಲಿ 16.13 ಕೋಟಿ ರೂಪಾಯಿಗಳು ಇಷ್ಟು ಹಣವನ್ನು ನಾವು ಹೌಸಿಂಗ್ ಸ್ಕೀಂ ನಲ್ಲಿ ಖರ್ಚು ಮಾಡಿದ್ದೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಅಂಕಿ ಅಂಶಗಳನ್ನು ಚೆಕ್ ಮಾಡಿ ನನಗೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹೌಸಿಂಗ್ ಡಿಮ್ಯಾಂಡ್ ಬಂದಾಗ ನಾನು ವ್ಯಾಪಕವಾಗಿ ಚರ್ಚೆ ಮಾಡುತ್ತೇನೆ. ಇನ್ನು ಜನತಾ ಸರ್ಕಾರದವರು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಜನತಾ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ? ಮತ್ತೆ ಹುಡ್ಕೋದಿಂದ ಎಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ? ಎಂಬುದನ್ನು ತಿಳಿಸಬೇಕು ಮತ್ತೆ ಪ್ಲಾನ್ ಔಟ್‌ಲೇ ಪ್ರಕಾರ 1981-82 ನೇ ಸಾಲಿನಲ್ಲಿ ಸುಮಾರು 14 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮತ್ತೆ 1982-83ನೇ ಸಾಲಿನಲ್ಲಿ ಸುಮಾರು 23 ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೆ ಇವರು ತಮ್ಮ ಡೆವಲಪ್‌ಮೆಂಟ್ ಪ್ಲಾನ್ ಔಟ್‌ಲೇನಲ್ಲಿ ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ ಬಹಳ ಕಡಿಮೆ ಎಂದು ಹೇಳಬೇಕಾಗುತ್ತದೆ. ಇವರಿಗೆ ಆ ಫಿಗರ್ಸ್ ಎಲ್ಲಿ ಸಿಕ್ಕಿದವೋ ಗೊತ್ತಿಲ್ಲ. ಇನ್ನು ಸುಪ್ರೀಂ ಕೋರ್ಟಿನಲ್ಲಿ ಇರತಕ್ಕಂಥ ಕೇಸಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಿಲ್ಲ. 16-2-84 ರಲ್ಲಿ ಸುಪ್ರಿಂ ಕೋರ್ಟಿನಲ್ಲಿ ಕೇಸು ಇತ್ತು. ಇನ್ನು ಅಗ್ರಿಕಲ್ಚರಿಸ್ಟ್‌ಗಳಿಂದ 13 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ವ್ಯಾಲಿಡೇಷನ್ ಕ್ಲಾಜ್ ಪ್ರಕಾರ ಹೈಕೋರ್ಟಿನಲ್ಲಿ ಇದನ್ನು ರದ್ದು ಮಾಡಿದ್ದಾರೆ. ಇದರ ಮೇಲೆ ಅವರು ಸುಪ್ರಿಂ ಕೋರ್ಟಿಗೆ ಹೋಗಿದ್ದರು

But what I said was by taking a decision on 17th by means of Budget, Rs. 13 crores had to be refunded. This is a question which I have posed. If that is so, it will effect the State interest. ಮತ್ತೆ ಕಾಟನ್ ಆಯಿಲ್ ಬೆಲೆಯನ್ನು ಜಾಸ್ತಿ ಮಾಡಿದ್ದೀರಿ. ಸ್ವಾಮಿ, ಆದರಿಂದ ತಾವು ಈ ಆಯಿಲ್ ಬೆಲೆಯನ್ನು ಕಡಿಮೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತಾವು ಆಯಿಲ್ ರೇಟನ್ನು ಕಡಿಮೆ ಮಾಡುವ ಬಗ್ಗೆ ಈ ಸಭೆಯಲ್ಲಿ ಘೋಷಣೆ ಮಾಡಬೇಕೆಂದು ಸಹ ನಾನೇ ಕೇಳಿಕೊಳ್ಳುತ್ತೇನೆ. ಈ ಆಯಿಲ್ ರೇಟನ್ನು ತಾವು ಕಡಿಮೆ ಮಾಡಿದರೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ.

As far cotton seed oil is concerned, you can include a separate clause. Co ton seed oil is a commodity which is comsumed by the common people.

ಶ್ರೀ ರಾಮಕೃಷ್ಣ ಹೆಗಡೆ.--ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಅಂಕಿ-ಅಂಕಿಗಳನ್ನು ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಸುಮಾರು 182 ಕೋಟಿ ರೂಪಾಯಿಗಳ ಖೋತಾ ಬಡ್ಜೆಟನ್ನು ಮಂಡಿಸಿದ್ದಾರೆ. ಆದರೆ ಆ ಎಲ್ಲಾ ಹಣವನ್ನು ತುಂಬಬೇಕಾದರೆ ತೆರಿಗೆಗಳನ್ನು ಹಾಕಲೇ ಬೇಕಾಗುತ್ತದೆ. ಇಲ್ಲದಿದ್ದರೆ ಆ ಖೋತಾ ಹಣವನ್ನು ಯಾವ ರೀತಿಯಲ್ಲಿ ತುಂಬುವುದಕ್ಕೆ ಆಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.--ಮಾನ್ಯ ಅಧ್ಯಕ್ಷರೆ, ನಾವು ಸುಮಾರು 182 ಕೋಟಿ ರೂಪಾಯಿಗಳ ಖೋತ ಬಡ್ಜಟನ್ನು ತುಂಬಲು ಸಾಮಾನ್ಯ ಜನರಿಗೆ ತೊಂದರೆಯಾಗುವ ರೀತಿಯಲ್ಲಿ ತೆರಿಗೆಯನ್ನು ಹಾಕಿಲ್ಲ. ಈಗ ನಾವು ಕೃಷ್ಣಾ ಪ್ರಾಜೆಕ್ಟ್‌ಗೆ ಸುಮಾರು ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ; ಆದರೆ ಎಸ್ಕಲೇಷನ್ ಪ್ರೈಜ್ ಜಾಸ್ತಿಯಾಗುತ್ತದೆ. ಆದರೆ ಅಲ್ಲಿ ಫಿಜಿಕಲ್ ವರ್ಕ್ ಏನು ಆಗಿದೆ, ಎಷ್ಟು ಹಣವನ್ನು ಖರ್ಚು ಮಾಡಬೇಕು ಎಂಬುದರ ಬಗ್ಗೆ ನಾವು ವಿವರಗಳನ್ನು ಕೊಟ್ಟಿದ್ದೇವೆ.

ಶ್ರೀ ಮಲ್ಲಾರಿಗೌಡ ಪಾಟೀಲ್.--ಮಾನ್ಯ ಅಧ್ಯಕ್ಷರೇ ಸಂಕೇಶ್ವರ ಮತ್ತು ಹುಕ್ಕೇರಿಗೆ ಸಂಬಂಧಪಟ್ಟ ನೀರಾವರಿ ಯೋಜನೆಗಳಿಗೆ ಸರ್ಕಾರದವರು ಸಾಕಷ್ಟು ಹಣ ಒದಗಿಸಿ ಯೋಜನೆಗಳನ್ನು ಪೂರ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.